ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 5 ಸಂಚಿಕೆ 15

ಏಪ್ರಿಲ್ 10, 2011

ಕನ್ನಡ ವಾರಪತ್ರಿಕೆ

ರೂ. 5/-

ಪುಟ 16

Blog :janashakthi.wordpress.com
e-mail : js_weekly@yahoo.com





ಏಪ್ರಿಲ್ 19

ಭ್ರಷ್ಟ, ಜನದ್ರೋಹಿ ಸರ್ಕಾರಗಳ ವಿರುದ್ಧ ಜನಾಂದೋಲನ



ಯಡಿಯೂರಪ್ಪ ಪದಚ್ಯುತಿ : ಮುಂದೂಡಿದ ಭಿನ್ನಮತ



ವಿಕಿಲೀಕ್ಸ್ : ದೇಶದ ಸಾರ್ವಭೌಮತೆ ರಾಜಿ ಮಾಡಿಕೊಂಡ ಸರ್ಕಾರ



ಅಂಗನವಾಡಿ : 'ಹೋರಾಟ ಮಾಡುವಂತಿಲ್ಲ' ಸರ್ಕಾರದ ಉದ್ಧಟತನದ ಸುತ್ತೋಲೆ ವಾಪಸ್



ಯೆಮನ್, ಬಹ್ರೇನ್ ಸರ್ವಾಧಿಕಾರಿಗಳಿಗೆ ಬೆಂಬಲ ಲಿಬಿಯಾದಲ್ಲಿ ಅಮೆರಿಕಾ ಕ್ರೌರ್ಯ

ಬ್ರಿಟನ್ : 5 ಲಕ್ಷ ಕಾರ್ಮಿಕರ ಬೃಹತ್ ಪ್ರತಿಭಟನೆ

ವೈಭವವೇ ಸಮ್ಮೇಳನದ ಯಶಸ್ಸೇ?

▪ ನಿಸರ್ಗ

ವಿಶ್ವ ಕನ್ನಡ ಸಮ್ಮೇಳನದ ಯಶಸ್ಸನ್ನು ಅಳೆಯುವ ಅಳತೆಗೋಲೇನು? ಅದರ ವೈಭವವೇ? ಭಾಷಣಕಾರರಿಗೆ ಹಂಚಲಾದ ಹಣವೇ ಏನು?

4-6 ವರ್ಷಗಳಿಂದ ಸರ್ಕಾರದ ಅಜೆಂಡಾ ಆಗಿದ್ದ ವಿಶ್ವಕನ್ನಡ ಸಮ್ಮೇಳನ ಮುಗಿದಿದೆ. ಇದೊಂದು ಕನ್ನಡದ ಭಾಗ್ಯವೆಂದು ಮಾಧ್ಯಮದಲ್ಲಿಯೂ ಸರ್ಕಾರದ ಮಂತ್ರಿ ಮಹೋದಯರಿಂದಲೂ ವಿಶ್ವದ (!?) ಜನರಿಗೆ ಭಿತ್ತರಗೊಳ್ಳುತ್ತಿದೆ. ಕ್ರೀಡಾಂಗಣದಲ್ಲಿ ಸೇರಿದ ಜನರನ್ನು ನೋಡಿ ಉದ್ಘಾಟನಾ ಸಭೆಯಲ್ಲಿಯೇ ಮುಖ್ಯಮಂತ್ರಿಗಳೂ, ಉದ್ಘಾಟಕರೂ ಘೋಷಿಸಿದರು. ಉಳಿದವರೂ ಅದಕ್ಕೆ ತಲೆಯಾಡಿಸಿದರು. ಮುಕ್ತಾಯದ ದಿನವೋ, ಅವರ ಹಿಂದಿನ ದಿನವೋ ಸ್ವತ: ಮುಖ್ಯಮಂತ್ರಿ, ಖೋರೆ, ಪಾಟೀಲ್ ಮೊದಲಾದವರು ವೇದಿಕೆಯೇರಿ ಕುಣಿದೇ ಕುಣಿದರು. (ಎಲ್ಲಿ ಕುಣಿಯಬೇಕಾಗಿತ್ತೋ ಅಲ್ಲಿ ಕುಣಿಯಲಾಗಲಿಲ್ಲ ಎನ್ನುವುದು ಬೇರೆ ಮಾತು ಎಂದು ಕೆಲವರು ಹೇಳುತ್ತಿದ್ದರು)

ಇವೆಲ್ಲಾ ಆಗಿ ಈಗ 3 ವಾರವೇ ಕಳೆದಿದೆ. ಸಮ್ಮೇಳನದ ಯಶಸ್ಸನ್ನು ಭಾವನಾತ್ಮಕ ಪರಿಧಿಯಾಚೆ ಬಂದು ನಿಂತು ವಿಶ್ಲೇಷಿಸಲು ಸಕಾಲ ಎಂದುಕೊಂಡಿದ್ದೇನೆ. 60 ರಿಂದ 70 ಕೋಟಿ ಹಣ ಖರ್ಚಾಗಿದೆ. 7 ರಿಂದ 8 ಲಕ್ಷ ಜನ ಅಲ್ಲದಿದ್ದರೂ 2 ರಿಂದ 3 ಲಕ್ಷ ಜನರಂತೂ ಸೇರಿದ್ದಾರೆ; ಬೆಳಗಾವಿಯ ನಗರದ ತುಂಬಾ ಫ್ಲೆಕ್ಸ್‌ಗಳು, ಬ್ಯಾನರ್‌ಗಳು ಮಿಣಿಮಿಣಿ ದೀಪಗಳು ರಾರಾಜಿಸಿವೆ. ಊಟದ ವ್ಯವಸ್ಥೆಗೆ ಹಾಕಿದ ಪೆಂಡೋಲ್ ನೋಡಿ ಹಲವರು ಪುಳಕಿತರಾಗಿದ್ದಾರೆ. ಖಂಡಿತವಾಗಿಯೂ ಇದೊಂದು ವೈಭವದ, ಅದ್ದೂರಿಯ ಸಮ್ಮೇಳನವಂತೂ ಹೌದು. ಆದರೆ ಪ್ರಶ್ನೆ ಇರುವುದು ಅದ್ದೂರಿತನ ಮತ್ತು ವೈಭವವೇ ಸಮ್ಮೇಳನದ ಯಶಸ್ಸಿನ ಮಾನದಂಡವೇ? ಎಂಬುದು. ಸರಕಾರಕ್ಕೆ ಇರುವುದು ಕನ್ನಡದ ಮೇಲಿನ ಪ್ರೀತಿಯೋ ಅಥವಾ ಉದ್ಯಮದ ಮೇಲಿನ ಪ್ರೀತಿಯೋ ಎನ್ನುವುದನ್ನು ಉದ್ಘಾಟನಾ ಸಮಾರಂಭ ತೋರಿಸಿತು. ಸರಿಯಾಗಿ ಕನ್ನಡವನ್ನು ಉಚ್ಚರಿಸಲು ಬಾರದ, ಸದಾ ಕನ್ನಡದ ಬಗ್ಗೆ ತಾತ್ಸಾರ ಭಾವನೆ ಉಳ್ಳ ನಾರಾಯಣಮೂರ್ತಿ ಉದ್ಘಾಟಕರಾಗಿ ಬಂದು "ಕೆಲಸವನ್ನು ಪ್ರೀತಿಸಿ ಸಂಬಳವನ್ನಲ್ಲ" ಎನ್ನುವ ಮೂಲಕ ಉದಾರೀಕರಣದ ಭಾಗವಾಗಿ ಬಂದಿರುವ ಕೆಲಸದ ಸಮಯ ಹೆಚ್ಚಳ ಸಂಬಳ ಕಡಿತ, ಖಾಯಂ ಉದ್ಯೋಗ ಕಡಿತ ಇತ್ಯಾದಿ ಮೂಲಕ ಲಾಭಕೋರ ಉದ್ಯಮಿಗಳ ನೀತಿಯನ್ನೇ ಪುನರುಚ್ಚರಿಸಿದರು. ಭಾಷೆಯನ್ನು ಸಂಸ್ಕೃತಿಯನ್ನು ಉದ್ಯಮಿಗಳ ಬಂಡವಾಳವನ್ನಾಗಿಸುವ ಆವುೂಲಕವಾಗಿ ಕನ್ನಡಿಗರನ್ನು ಭಾವನಾತ್ಮಕವಾಗಿ ತಮ್ಮ ಕಡೆಗೆ ಎಳೆದುಕೊಳ್ಳುವ ಪ್ರಯತ್ನವಿದು. ತಾವೆಲ್ಲ ಕನ್ನಡಿಗರೆಂದು ಕನ್ನಡಕ್ಕೆ ಸಹಾಯ ಮಾಡುತ್ತೇವೆಂದು (ಶಾಲೆ, ಕಂಪ್ಯೂಟರ್, ಪುಸ್ತಕ, ಗ್ರಂಥಾಲಯ ಇತ್ಯಾದಿ ಕೊಡುಗೆ ಮೂಲಕ) ನಂಬಿಸಿ ಕರ್ನಾಟಕ ನೆಲ, ಜಲ, ಸಂಪತ್ತನ್ನು ಕಡಿಮೆ ದರಕ್ಕೆ ಲಪಟಾಯಿಸುವ ಹುನ್ನಾರವಲ್ಲದೆ ಬೇರೇನೂ ಅಲ್ಲ. ಇದಕ್ಕೆ ಸರ್ಕಾರವೇ



ಅವಕಾಶ ಮಾಡಿಕೊಡುತ್ತಿದೆ. ವೇದಿಕೆಯಲ್ಲಿರುವ ನೀರಜಪಾಟೀಲ ತಾನು ಐಶ್ವರ್ಯ ರೈ ಅವರನ್ನು ನೋಡಲು ಬಂದಿದ್ದೆಂದು ಕರ್ನಾಟಕ್ಕೆ ಮಂಗಳಾರತಿಯನ್ನೇ ಎತ್ತಿದರು. ಐಶ್ವರ್ಯ ರೈ ಕನ್ನಡದ ಬಗ್ಗಾಗಲೀ, ತಾನು ಹುಟ್ಟಿದ ದಕ್ಷಿಣ ಕನ್ನಡದ ಬಗ್ಗಾಗಲೀ ತುಳುವಿನ ಬಗ್ಗಾಗಲೀ ಒಂದೇ ಒಂದು ಮಾತನಾಡದೇ ಮೂರು ವಾಕ್ಯಕ್ಕೆ ಮುಗಿಸಿ ಹೊರಟುಹೋದಳು. ಅವಳು ವೇದಿಕೆಗೆ ಬಂದಾಗ ಇಡೀ ವೇದಿಕೆಯೇ ಎದ್ದು ನಿಂತು ಸ್ವಾಗತಿಸಿದ್ದನ್ನು ನೋಡಿದರೆ, ಕೈಕುಲುಕಲು ಮುಂದೊಡ್ಡಿದ್ದನ್ನು ನೋಡಿದರೆ ಹೇಸಿಗೆ ಅನಿಸುತ್ತಿತ್ತು.

ಅನಂತಮೂರ್ತಿಯವರು ಇನ್ನೂ ಖಾರವಾಗಿ ಆಗಿ ಮಾತನಾಡಬಹುದಾಗಿತ್ತು. ನಿಸಾರ ಅಹಮದ್ ಕುರಿಗಳು ಸಾರ್ ಕುರಿಗಳು ಕವಿತೆ ಓದಿದ್ದರೆ ಹೆಚ್ಚು ಅರ್ಥಪೂರ್ಣವೆನಿಸುತ್ತಿತ್ತು. ಅವರು ಪ್ರೇಕ್ಷಕರನ್ನು ನೋಡಿ ಖುಷಿಯಾಗಿ ಮುಖ್ಯಮಂತ್ರಿಗಳನ್ನು ಅಭಿನಂದಿಸಲು ಮುಂದಾದರು. ಆದರೆ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರ ಭಾಷಣ ಉದ್ದವಾಯಿತೆಂದು ಅನಿಸಿದ್ದರೂ ಕರ್ನಾಟಕದ ಸ್ಥಿತಿಯನ್ನು ತೆರೆದಿಟ್ಟಿದ್ದಂತೂ ಸುಳ್ಳಲ್ಲ. ಆದರೆ ಅವರು ಭಾಷಣ ಬೇಗ ಮುಗಿಸಬೇಕೆಂದು ಮತ್ತೆ ಮತ್ತೆ ಕೆಲವರು ಮೂಗು ತೂರಿಸುತ್ತಿರುವುದು ಮುಖ್ಯಮಂತ್ರಿಯನ್ನು ಮೆಚ್ಚಿಸುವ ತಂತ್ರವೂ ಆಗಿರಬಹುದು. ಹಾಗೆ ನೋಡಿದರೆ ಕರ್ನಾಟಕದ ಪ್ರಜ್ಞಾವಂತರ ಮಾನ ಉಳಿಸಿದ್ದು ಶಿವರುದ್ರಪ್ಪನವರೊಬ್ಬರೆ. ಅವರಿಗೆ ಅಭಿನಂದನೆಗಳು

ಬಂದವರೆಲ್ಲರೂ ಕನ್ನಡದ ಕುರಿತ ಅಭಿಮಾನ ದಿಂದಲೇ ಬಂದವರೆಂದು ತಿಳಿಯಬೇಕಾಗಿಲ್ಲ. ಐಶ್ವರ್ಯ ರೈ ನೋಡಲು ಬಂದವರು. ಸಿನೆಮಾನಟರನ್ನು ನೋಡಲು ಬಂದವರು. ಟಿ.ವಿ.ನಟರನ್ನು ನೋಡಲು ಬಂದವರು ಹಲವರು. ಸಾಂಸ್ಕೃತಿಕ ಕಾರ್ಯಕ್ರಮವೇ ಇಲ್ಲದ ಗಡಿ ಭಾಗದ ಜನ ಏನೋ ಹಾಡು, ಕುಣಿತ ನಡೆಯುತ್ತದೆಂದು ಬಂದವರು ಹಲವರು. ಮತ್ತು ಬಂದವರೆಲ್ಲರೂ ಕನ್ನಡಿಗರು ಮಾತ್ರವಲ್ಲ. ಮರಾಠಿಗರು ದೊಡ್ಡ ಸಂಖ್ಯೆಯಲ್ಲಿಯೇ ಇದ್ದರು. ಕೆಲವು ಕಡೆ ಭಾಷಾದ್ವೇಷವನ್ನು ಹುಟ್ಟುಹಾಕಬಹುದಾದ ರೀತಿಯಲ್ಲಿ ಮಾತನಾಡಿ ಜನರನ್ನು ಎಬ್ಬಿಸಲಾಗಿತ್ತು. ಬಿಜೆಪಿಯ ಕಾರ್ಯಕರ್ತರಂತೂ ಬಹುತೇಕ ಹಾಜರಿದ್ದರು ಮತ್ತು ಜನರನ್ನು ಕರೆತಂದಿದ್ದರು.

ಜನರ ಬದುಕಿನ ಚರ್ಚೆ ಆಗಲಿಲ್ಲ

ವಿಶ್ವಕನ್ನಡ ಸಮ್ಮೇಳನದಲ್ಲಾದಂತೆ ನಮ್ಮ ಬದುಕು ಬವಣೆಯ ಚರ್ಚೆ ಆಗಬಹುದು. ದಿನನಿತ್ಯ ಗಡಿಯಲ್ಲಿ ಎದುರಿಸುವ ಸಮಸ್ಯೆಗೆ ಪರಿಹಾರ ಸಿಗಬಹುದೆಂದು ಬಂದವರಿಗೆ ದೊಡ್ಡ ನಿರಾಸೆ. ಕ್ರೀಡಾಂಗಣದ ಧಾರಣಾ ಸಮರ್ಥ್ಯಕ್ಕಿಂತ 2 ರಿಂದ 3 ಪಟ್ಟು ಹೆಚ್ಚು ಜನರನ್ನು ಪಾಲ್ಗೊಳಿಸಲಾಗಿತ್ತು. ಕನ್ನಡದ ಹೆಸರಲ್ಲಿ ಬಂದವರು ಕ್ರೀಡಾಂಗಣ ಪ್ರವೇಶಿಸಲು ಸಾಧ್ಯವಾಗದೇ ಹೋಗಬೇಕಾಯಿತು. ಲಾಠಿರುಚಿಯನ್ನು ಹಲವರು ಕಂಡರು. ರಾತ್ರಿ ಸ್ಥಳ ಸಿಗದವರು ಬೆಳಿಗ್ಗೆ ಬಂದರೆ ಕ್ರೀಡಾಂಗಣಕ್ಕೆ ಪೆಂಡಾಲ್ ಇರಲಿಲ್ಲ. ಸುಡುಬಿಸಿಲಲ್ಲಿ ಕುಳಿತು ಕವಿತೆ ಕೇಳಬೇಕು. ಜಾನಪದ ನೃತ್ಯ ನೋಡಬೇಕು. ನಗೆಹಬ್ಬ ಕೇಳಬೇಕು. ಕೊನೆಗೂ ತಲೆ ಸುಡುವ ಬಿಸಿಯು ಮಾತ್ರ ಜನರಿಗೆ ತಪ್ಪಲಿಲ್ಲ.

ಕೆಲವು ಗೋಷ್ಠಿಗಳಲ್ಲಿ ಮಹತ್ವಪೂರ್ಣ ಚರ್ಚೆಗಳು ನಡೆದವು. ಆದರೆ ಅವರ ನೇರ ಪ್ರಸಾರವೇ ಇರಲಿಲ್ಲ. ಮುಖ್ಯ ವೇದಿಕೆಯಲ್ಲಿ ನೇರ ಪ್ರಸಾರ ಇತ್ತು. ಆದರೆ ಅಲ್ಲಿ ಯಾವ ಗಂಭೀರ ಚರ್ಚೆಯೂ ನಡೆದಿಲ್ಲ. ಜನರಿಲ್ಲದಿದ್ದಾಗ ಸರ್ಕಾರದ ತರಾಟೆ ನಡೆಯಿತು. ಜನರಿದ್ದ ಮುಖ್ಯ ವೇದಿಕೆಯಲ್ಲಿ ಸರ್ಕಾರಕ್ಕೆ ಬಹುಪರಾಕ್ ನಡೆಯಿತು.

ಗಡಿಭಾಗದ ಸಮಸ್ಯೆಯ ಕುರಿತ ಗೋಷ್ಠಿಯಲ್ಲಿ ಮಾತನಾಡಿದ ಹಲವರು ಅಲ್ಲಿಯ ಅವ್ಯವಸ್ಥೆಯ ಚಿತ್ರ ತೆರೆದಿಟ್ಟರು. ಕನ್ನಡ ಕೇವಲ ಅಭಿಮಾನದ ಸಂಗತಿ ಆದರೆ ಸಾಲದು. ಅನ್ನದ ಪ್ರಶ್ನೆಯೂ ಆಗಬೇಕೆಂದು ಒತ್ತಾಯಿಸಿದರು. 5 ವರ್ಷಕ್ಕೊಮ್ಮೆ ಗಡಿಯು ನೆನಪಾದರೆ ಸಾಲದು. ಅಲ್ಲಿಯ ಮೂಲಸೌಕರ್ಯದ ಅಭಿವೃದ್ಧಿಗೆ, ಭಾಷೆ ಸಂಸ್ಕೃತಿಯ ಉನ್ನತಿಗೆ ಕಾರ್ಯಕ್ರಮ ರೂಪಿಸುವ ಪ್ರಾಮಾಣಿಕತೆ ಮತ್ತು ಇಚ್ಛಾಶಕ್ತಿಯ ಅವಶ್ಯಕತೆ ಇದೆ ಎಂದು ಹೇಳುವಾಗ ಸರ್ಕಾರದ ಜನ ಯಾರೂ ಅಲ್ಲಿರಲಿಲ್ಲ. ಮಹಿಳಾಗೋಷ್ಠಿ ಯಲ್ಲಿ ಹಾಜರಿದ್ದ ಶೋಭಾ ಕರಂದ್ಲಾಜೆ ಉದ್ಘಾಟನಾ ಭಾಷಣದ ನಂತರ ಡಾ.ವಸು, ಧರಣಿದೇವಿ ಮಾಲಗಿತ್ತಿಯವರ ಮಾತುಕತೆಗೆ ಭಯಬಿದ್ದು ಸಭೆಯಲ್ಲಿ ಬಿಟ್ಟು ಇಳಿದುಹೋದರು.

ಅವ್ಯವಸ್ಥೆಯ ಆಗರ

ಉದ್ಘಾಟನಾ ಸ್ಥಳದ ವ್ಯವಸ್ಥೆಯಿಂದ ಮೊದಲ್ಗೊಂಡು ಗೋಷ್ಠಿ ನಡೆಯುವ ಸ್ಥಳದವರೆಗೆ ಅವ್ಯವಸ್ಥೆಯೇ ತುಂಬಿತ್ತು. ಗೋಷ್ಠಿ ನಡೆಯುವ ಸ್ಥಳ ಅರಸಲಾರದೆ ಹಲವರು ಸುಮ್ಮನಾದರು. ಕೆಲವು ಗೋಷ್ಠಿಗಳಲ್ಲಿ ಸಂವಾದಕ್ಕೆ 10 ರಿಂದ 12 ಜನರನ್ನು ಹಾಕಿ, ಅವರಿಗೆ ಮಾತನಾಡಲು ಕೊಡದೆ ಅಲಂಕಾರ ಮೂರ್ತಿಯನ್ನಾಗಿಸಿದರು. ಬಹುತೇಕ ನಾಟಕ ನಡೆದದ್ದು ಊರ ಹೊರಗೆ. ಮುಂದಿನ ನಾಟಕದ ನಟರು ಹಿಂದಿನ ನಾಟಕದ ಪ್ರೇಕ್ಷಕರು. ಹಲವು ಅತಿಥಿಗಳಂತೂ ಉಳಿಯಲು ಸ್ಥಳವಿಲ್ಲದೆ ಧಾರವಾಡದಿಂದಲೋ ಹಳಿಯಾಳದಿಂದಲೋ ಓಡಾಡಿದರು. ಏನಾದರೂ ಸಮಸ್ಯೆ ಆದರೆ ಯಾರನ್ನು ಕೇಳುವುದು? ನೋಂದಾವಣೆ ಎಲ್ಲಿ?... ಬಹುಶಃ ಸಂಘಟಕರಿಗೂ ತಿಳಿದಿಲ್ಲ.

ಸಾಹಿತಿಗಳಿಗೆ ಹಣ... ಕಲಾವಿದರು ಹೆಣ

ಈ ಬಾರಿ ಸಮ್ಮೇಳನದಲ್ಲಿ ಭಾಗವಹಿಸಿದ ಸಾಹಿತಿಗಳ್ಯಾರಿಗೂ ಅಸಮಾಧಾನ ಆದಂತಿಲ್ಲ. 2 ನಿಮಿಷ ಭಾಷಣ ಮಾಡಿದವರಿಗೂ 8 ರಿಂದ 10 ಸಾವಿರ ರೂಪಾಯಿ ಕೊಟ್ಟು ಕಳುಹಿಸಲಾಗಿದೆ. ಕಾರ್ಯಕ್ರಮಕ್ಕೆ ಭಾಗವಹಿಸಿದಾಗ ಅದೃಷ್ಟವಿದ್ದರೆ 200, 300, 500 ರೂ. ಗೌರವಧನ ಪಡೆದವರೆ ವಿಶ್ವಕನ್ನಡ ಸಮ್ಮೇಳನದಲ್ಲಿ 8, 10, 12 ಸಾವಿರ ರೂ ಪಡೆದು ದಿಲ್‌ಖುಶ್ ಆಗಿದ್ದಾರೆ. ಸರಕಾರವು ಕನ್ನಡ ಹಣಕೊಟ್ಟುಕೊಂಡುಕೊಳ್ಳುವ ಹುನ್ನಾರ ನಡೆಸಿದೆ.

ಆದರೆ ಜಾನಪದ ಕಲಾವಿದರ ಸ್ಥಿತಿ ಮಾತ್ರ ಸುಧಾರಿಸಲಿಲ್ಲ. ಜಾನಪದ ವೈಭವಕ್ಕೋ, ಜಾತ್ರೆಗೋ ಬಂದ ಕಲಾವಿದರು 2 ದಿನಕ್ಕಾದರೂ ಚೆಕ್ ಇಲ್ಲ, ಹೇಳಿದಷ್ಟು ಹಣ ಕೊಟ್ಟಿಲ್ಲ, ದಿನಕ್ಕೆ 500 ಕೊಟ್ಟು ಕೈತೊಳೆದುಕೊಂಡರು. ಒಂದೆಡೆ ಹತ್ತಾರು ಲಕ್ಷ ರೂ. ಕೊಟ್ಟು ಕಲಾವಿದರನ್ನು ಹೊರಗಿನಿಂದ ಕರೆಸಿದರೆ ನಮ್ಮ ಕಲಾವಿದರಿಗೆ ವ್ಯವಸ್ಥೆಯೂ ಇರಲಿಲ್ಲ. ನಮ್ಮ ಕಲಾವಿದರು 500 ರೂ. ಪಡೆಯಲು ಸಮ್ಮೇಳನದ ಮುಕ್ತಾಯದ ದಿನ ಕುಮಾರಗಂಧರ್ವ ಹಾಲ್ ಎದುರಿ ಧರಣ ಕುಳಿತು, ಹೋರಾಟ ಮಾಡಿ ಪಡೆಯಬೇಕಾಯಿತು. ಒಂದರ್ಥದಲ್ಲಿ ವಿಶ್ವಕನ್ನಡ ಸಮ್ಮೇಳನ ನಮ್ಮ ಇಡೀ ಜನಪದ ಕಲಾವಿದರಿಗೆ ಅವಮಾನ ಮಾಡಿತು.

ಕಲೆ, ಸಂಸ್ಕೃತಿ, ಭಾಷೆ ಆಳುವ ರಾಜಕಾರಣದ ದಾಳವಾದಾಗ, ಕಳೆದುಹೋದ ಪ್ರತಿಷ್ಠೆ ಮರಳಿ ಪಡೆಯುವ ರಾಜಕಾರಣದ ಭಾಗವಾದರೆ ಭಾಷೆಯ ಭಾವನಾತ್ಮಕ ಮುಖವನ್ನು ಮುಂದೊತ್ತಿ ವಾಸ್ತವದಲ್ಲಿ ನಿಜವಾಗಿರುವ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಸ್ವಾರ್ಥದ ದಾಖಲೆಯನ್ನು ಮರೆಸುವ ಹುನ್ನಾರವಾದಾಗ ಯಾವ ಸಮ್ಮೇಳನಕ್ಕೂ ಅರ್ಥವಿರುವುದಿಲ್ಲ.

ಇದೇ ಹಣದಲ್ಲಿ ಗಡಿನಾಡಿನಲ್ಲಿ ಶಾಲೆ ತೆರೆಯುವ ಉದ್ಯೋಗ ಸೃಷ್ಟಿಸುವ, ನಿರಂತರ ಸಾಂಸ್ಕೃತಿಕ ಸಾಹಿತ್ಯಿಕ, ಕಾರ್ಯಕ್ರಮ ನಡೆಸುವ ಯೋಜನೆ ಹಾಕಿದಾಗ ಮಾತ್ರ ಕಾರ್ಯಕ್ರಮ ನಡೆಸುವ ಯೋಜನೆ ಹಾಕಿದಾಗ ಮಾತ್ರ ಈ ನೆಲ ನಮ್ಮದೆಂದು ಪ್ರೀತಿಸುವ ಮನಸ್ಸು ಹುಟ್ಟುತ್ತದೆ. ಇಲ್ಲದಿದ್ದರೆ ಹಲವರಿಗೆ ಹಣ ಲೂಟಿ ಹೊಡೆಯುವ ದಂದೆಯಾಗುತ್ತದೆ. ವಿಶ್ವಕನ್ನಡ ಸಮ್ಮೇಳನ ಆಗಿದ್ದೂ ಹಾಗೇ ಅಲ್ಲವೇ

ಸಂಪಾದಕೀಯ

ಬಾಯಲ್ಲಿ ಜಪಕ್ಕೆ ರೈತ ಕೂಲಿ ಕೇಳಿದರೆ ಕೊಟ್ಟರು ಲಾತ

ಕೊಪ್ಪಳ ಜಿಲ್ಲೆಯ ಐದಾರು ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಮಾಡಿದ ಕೆಲಸದ ಕೂಲಿ ಕೇಳಿ ಚಳುವಳಿ ನಡೆಸುತ್ತಿದ್ದ ಕೂಲಿಕಾರರ ಮೇಲೆ ಪೊಲೀಸರು ನಡೆಸಿದ ದೌರ್ಜನ್ಯ ಅತ್ಯಂತ ಖಂಡನೀಯ. ಮಹಿಳೆಯರು, ಮುದುಕರು ಎನ್ನುವುದನ್ನೂ ನೋಡದೇ ನೆಲದ ಮಕ್ಕಳ ಮೇಲಿನ ಲಾಠಿಚಾರ್ಜು, ಬೂಟುಗಾಲಿನ ಒದೆತ ಆಳುವವರ ಪದಚ್ಯುತಿ ಮುಂದೂಡಿಕೆ ಅಮಾನವೀಯತೆಯನ್ನು ತೋರಿಸುತ್ತದೆ. ವಿಪರ್ಯಾಸವೆಂದರೆ 'ರೇಗಾ' ಕಾನೂನೇ ಹೇಳುವ ಹಾಗೆ, ದುಡಿದ 15 ದಿನಗಳ ಒಳಗಾಗಿ ಕೂಲಿಯ ಹಣವನ್ನು ಕೊಡದ ಪಂಚಾಯ್ತಿಗಳ ಅಧ್ಯಕ್ಷರು, ಅಧಿಕಾರಿಗಳ ಮೇಲೆ ಕಠಿಣ ಕಾನೂನು ಕ್ರಮ ಜರುಗಿಸಬೇಕಿತ್ತು. ಆದರೆ ನಿರ್ಲಕ್ಷಕ್ಕೆ ಒಳಗಾಗಿ, ಅನ್ಯ ಮಾರ್ಗವೇ ಇಲ್ಲದೇ ತಾಲ್ಲೂಕು ಕಛೇರಿಯವರೆಗೂ ಬಂದ ಕೂಲಿಕಾರರ ಮೇಲೆ ದೌರ್ಜನ್ಯ ನಡೆಸಲಾಗಿದೆ. ಮಾತ್ರವಲ್ಲ ಅವರ ಮೇಲೆಯೇ ಕೇಸ್ ಹಾಕಿ ಜೈಲಿಗಟ್ಟಲಾಗಿದೆ. ಸರ್ಕಾರದ ಆಡಳಿತ ವ್ಯವಸ್ಥೆಯ ಈ ಕ್ರಮ ಭ್ರಷ್ಟರು, ಪಟ್ಟಭದ್ರರ ಹಿತ ಕಾಯುವುದನ್ನೇ 'ಕರ್ತವ್ಯ'ವನ್ನಾಗಿಸಿಕೊಂಡಿರುವುದು ಸ್ಪಷ್ಟ ದುಡಿವವರ ಬಗ್ಗೆ ದ್ವೇಷ ತೋರಿಸುವುದು ಈ ಯೋಜನೆಗೆ ವಿರೋಧವೇ ಆಗಿದೆ. ತಾಲ್ಲೂಕು ಆಡಳಿತ, ಪಂಚಾಯತ್ ಹಾಗೂ ಪೊಲೀಸರಿಂದ ಕಾನೂನು ಉಲ್ಲಂಘನೆಯಾಗಿದ್ದು ಇಂತಹ ಕ್ರಮವು ಜನವಿರೋಧಿ, ದಂಡನಾರ್ಹವಾಗಿದೆ. ಅಹವಾಲು ಕೇಳದ ಅಧಿಕಾರಿಗಳ ಕ್ರಮ ಪ್ರತಿಭಟಿಸಿ ಜನ ತಾಲ್ಲೂಕು ಕಛೇರಿಗೆ ಬೀಗ ಹಾಕಲು ಮುಂದಾಗಿರುವುದು ಅಪರಾಧವೇ? ಇಂತಹ ಸ್ಥಿತಿಯನ್ನು ನಿರ್ಮಿಸಿರುವುದು ಇದೇ ಆಡಳಿತವಲ್ಲವೇ? ಇದು ಅಪರಾಧವಾಗದೇ ಇರಲು ಹೇಗೆ ಸಾಧ್ಯ?

2009-2010 ರ ಸಾಲಿನಲ್ಲಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ದುಡಿದ ಕೂಲಿಕಾರರು ಹಲವಾರು ಬಾರಿ ಕೂಲಿ ನೀಡಲು ಕೇಳಿದರೂ ಪಂಚಾಯ್ತಿಗಳು ನಿರ್ಲಕ್ಷಿಸಿವೆ. ಸ್ಯಾರೆ ಗಂಜಿಗಾಗಿ ಊರೂರು ತಿರುಗುತ್ತಿರುವುದನ್ನು ತಪ್ಪಿಸಿ ಕನಿಷ್ಟ ಜೀವನಾಧಾರ ಕಲ್ಪಿಸಲು ಬಂದ ಮಹತ್ತರ ಯೋಜನೆಯಿಂದಾಗಿ ಕೂಲಿಕಾರರಿಗೆ ಮಾತ್ರವಲ್ಲ ಬಡ ರೈತರಿಗೂ ಜೀವನಾಧಾರವಾಗಿದೆ. ಆದರೆ ಕೂಲಿಯನ್ನು ನೀಡದೇ ಸತಾಯಿಸಿದಾಗ ಅಂದೇ ದುಡಿದು ತಿನ್ನಬೇಕಾದ ಕೂಲಿಕಾರರಿಗೆ ಕೂಲಿ ವಿಳಂಬವನ್ನು ತಡೆದುಕೊಳ್ಳುವ ಶಕ್ತಿಯಾದರೂ ಎಲ್ಲಿದೆ? ಇದು ಗೊತ್ತಿದ್ದು ಹಿಂಸಿಸಿರುವುದು ಈ ಯೋಜನೆಗೆ ಕೂಲಿಕಾರರು, ಬಡರೈತರು ದುಡಿಯಲು ಬರಬಾರದೆಂಬ ಕುತಂತ್ರದ ಭಾಗವಾಗಿದೆ. ಈ ಯೋಜನೆಯ ಯಶಸ್ವಿ ಅನುಷ್ಠಾನ ಗ್ರಾಮೀಣ ಶ್ರೀಮಂತರು, ಭೂಮಾಲಿಕರ ಕೆಂಗಣ್ಣಿಗೆ ಗುರಿಯಾಗಿದೆ. ಕೂಲಿಕಾರರ ಬದಲಿಗೆ ಯಂತ್ರಗಳನ್ನು ಬಳಸಿ ಕೆಲಸ ಮಾಡಿಸುವ, ಮಾಡಿಸದೇ ಇರುವ ಕೆಲಸಗಳಿಗೆ ಹಾಗೂ ಕೂಲಿಕಾರರ ಹೆಸರಿನಲ್ಲಿ ಹಣವನ್ನು ದೋಚಿದ ಸಾವಿರಾರು ಕೋಟಿ ರೂ.ಗಳ ದುರ್ಬಳಕೆಯ ಭ್ರಷ್ಟ ಕಾಂಡ ರಾಜ್ಯದಲ್ಲಿ ನಡೆದಿದೆ, ಕೇಂದ್ರ ಸರ್ಕಾರದಿಂದ ತನಿಖೆಗೂ ಒಳಪಟ್ಟಿದೆ. ಒಂದು ಮಹತ್ವಾಕಾಂಕ್ಷೆಯ, ಜನಪರ ಯೋಜನೆಯೊಂದನ್ನು ಹೇಗೆ ಮಣ್ಣುಗೂಡಿಸಬಹುದು ಎಂಬುದು ಆಳುವವರ ಈ ವರ್ತನೆಗಳಿಂದ ಸಾಬೀತಾಗುತ್ತದೆ. ಇಂತಹದ್ದರಲ್ಲಿ ವಿಶೇಷವಾಗಿ ರಾಜ್ಯದ ಬಿಜೆಪಿ ಸರ್ಕಾರದ ವೈಖರಿ ಅನಾಹುತಕಾರಿಯಾಗಿದೆ.

ಕೂಲಿ ನೀಡದೇ ಸತಾಯಿಸುತ್ತಿರುವ ಪ್ರಕರಣ ಕೇವಲ ಕೊಪ್ಪಳ ಅಥವಾ ಒಂದೆರಡು ಕಡೆ ಮಾತ್ರವಲ್ಲ, ಮಂಡ್ಯ, ಬೀದರ್, ಕೋಲಾರ ಮುಂತಾದ ಬಹುತೇಕ ಕಡೆ ಇದೇ ಸ್ಥಿತಿಯನ್ನು ಕೂಲಿಕಾರರು ಎದುರಿಸುತ್ತಿದ್ದಾರೆ. ಅನಿವಾರ್ಯವಾಗಿ ಹೋರಾಟಕ್ಕಿಳಿದಾಗ ಪಟ್ಟಭದ್ರರು ಪೊಲೀಸರು ಹಾಗೂ ಆಡಳಿತ ಯಂತ್ರ ಬಳಸಿ ದಮನಿಸುತ್ತಿದ್ದಾರೆ. ಆದ್ದರಿಂದ ಇದರ ವಿರುದ್ಧ ಒಂದು ಪ್ರಬಲ ಹೋರಾಟವೇ ಬೇಕಾಗಿದೆ.


ಸರಕಾರವೇನೋ ಈಗ ಸಾರ್ವಜನಿಕ ಪ್ರತಿಭಟನೆ, ಒತ್ತಡಗಳ ಬಳಿಕ ಕೆಲವು ಪೊಲೀಸ್ ಅಧಿಕಾರಿಗಳನ್ನು ಅಮಾನತ್ತುಗೊಳಿಸುವ ಹಾಗೂ ರಜೆಯ ಮೇಲೆ ತೆರಳುವಂತಹ 'ಕ್ರಮ' ಕೈಗೊಂಡಿದೆ. ಸರ್ಕಾರ ಇಷ್ಟಾದರೂ ಮಾಡಿತಲ್ಲ ಎಂದು ನಿಟ್ಟುಸಿರು ಬಿಡುವ ಹಾಗೂ ಇಲ್ಲ, ಯಾಕೆಂದರೆ ಕೂಲಿಕಾರರು ಎತ್ತಿರುವ ವ್ಯವಸ್ಥೆಯ ದೋಷಗಳು ಅದರಿಂದ ಇತ್ಯರ್ಥವಾಗುವುದಿಲ್ಲ. ಮೇಲಾಗಿ ಇಡೀ ಪ್ರಶ್ನೆಯನ್ನು ಕೂಲಿಕಾರರು ಮತ್ತು ಪೊಲೀಸರ ನಡುವೆ ವೈರತ್ವ ಬೆಳೆಸಿ ಎತ್ತಿಕಟ್ಟಲಾಗಿದೆ. ನಿಜವಾದ ಅಪರಾಧಿಗಳು ತಲೆಮರೆಸಿಕೊಂಡಿದ್ದಾರೆ. ಆದ್ದರಿಂದ ಈ ಕೂಡಲೇ ಬಾಕಿ ಕೂಲಿ ಪೂರ್ಣ ನೀಡಬೇಕು. ಮುಂದೆ ಹೀಗಾಗದಂತೆ ಕ್ರಮ ವಹಿಸಬೇಕು ಮತ್ತು ಈ ನಿರ್ಲಕ್ಷ್ಯ ತೋರಿಸಿದವರ ಮೇಲೆ ಕಾನೂನು ಕ್ರಮ ಜರುಗಿಸಬೇಕು.

ಆದರೆ ಸದಾ ವಿದೇಶಿ, ಸ್ವದೇಶಿ ಬಂಡವಾಳ ಹೂಡಿಕೆದಾರರ ಸೇವೆಯ ಗುಂಗಿನಲ್ಲೇ ಇರುವ ಯಡಿಯೂರಪ್ಪನವರ ಬಿಜೆಪಿ ಸರ್ಕಾರ ಇವರನ್ನು ಅಧಿಕಾರಕ್ಕೆ ತಂದ ನಾಡಿನ ನೆಲದ ಮಕ್ಕಳನ್ನು ಪರಿಗಣಿಸುತ್ತಲೇ ಇಲ್ಲ. ಇವುಗಳನ್ನು ನೋಡಲು, ಯೋಚಿಸಲು ಪುರುಸೊತ್ತಾದರೂ ಎಲ್ಲಿದೆ? ಹಗರಣಗಳನ್ನು ಮುಚ್ಚಿಹಾಕಲು, ಭಿನ್ನಮತ 'ಶಮನ'ಗೊಳಿಸಲು ಹಗಲಿರುಳೂ ತಿರುಗುವ ಇವರಿಂದ ಇನ್ನೆಂಥಹದ್ದನ್ನು ನಿರೀಕ್ಷಿಸಬಹುದು. ಮುಖ್ಯವಾಗಿ ಮುಖ್ಯಮಂತ್ರಿಯಾದಿಯಾಗಿ ಆಡಳಿತ ನಡೆಸಲು ಗಮನ ಕೊಡದೇ ಆಡಳಿತವೇ ಅರಾಜಕವಾಗಿದ್ದೇ ಕಾರಣ. ಇದು ಜನರ ಪಾಲಿಗೆ ಇಲ್ಲದ ಸರ್ಕಾರ. ಇಂತಹ ಸರ್ಕಾರ ಇನ್ಯಾಕೆ ಇರಬೇಕು?

ಪದಚ್ಯುತಿ - ಮುಂದೂಡಿಕೆ

ಬೀಸುವ ದೊಣ್ಣೆಯಿಂದ ಯಡಿಯೂರಪ್ಪನವರು ಈ ಬಾರಿಯೂ ತಪ್ಪಿಸಿಕೊಂಡಿದ್ದಾರೆ. ಯಡಿಯೂರಪ್ಪನವರನ್ನು ಪದಚ್ಯುತಗೊಳಿಸಲು ಬಂಡಾಯದ ಹೆಜ್ಜೆ ಇಟ್ಟಿದ್ದ ಭಿನ್ನಮತೀಯರು ದೆಹಲಿ ಹೈಕಮಾಂಡ್ ದರ್ಶನ ಮಾಡಿ ಉಪದೇಶ ಹೊತ್ತು ಹಿಂತಿರುಗಿದ್ದಾರೆ. 'ಭಿನ್ನಮತವೇ ಇಲ್ಲ, ತಾವೆಲ್ಲ ಒಗ್ಗಟ್ಟು, ಯಡ್ಡಿಯೇ ನಾಯಕ' ಎಂದೆಲ್ಲಾ ಹೇಳುತ್ತಿರುವುದರಲ್ಲಿ ಹೈಕಮಾಂಡ್ ಉಪದೇಶವೂ ಕೆಲಸ ಮಾಡುತ್ತಿದೆಯಂತೆ.

ಮುಖ್ಯಮಂತ್ರಿ ಯಡಿಯೂರಪ್ಪ ತಮ್ಮ ಪಕ್ಷದವರಿಂದಲೇ ಭಾರೀ ವಿರೋಧವನ್ನು ಎದುರಿಸುತ್ತಿದ್ದಾರೆ. ಬಹಿರಂಗ ಬಂಡಾಯಗಳು ನಡೆದಿವೆ. ಕುಂತ ಅಧಿಕಾರದ ಕುರ್ಚಿ ನಡುಗಿ ಹೋಗಿದೆ. ದಾಖಲೆ ಮೀರಿದ ಹಗರಣಗಳು ಹೊರಬಂದಿವೆ. ಆದರೂ ಸಿ.ಎಂ. ರಾಜೀನಾಮೆ ನೀಡದೇ 'ಭಂಡತನ'ದ ಪ್ರಮಾಣ ತಮ್ಮಲ್ಲಿ ಎಷ್ಟಿದೆ ಎಂಬುದನ್ನು ತೋರಿಸಿದ್ದಾರೆ. ಈ ಬಾರಿಯಂತೂ ತೆರೆಮರೆಯಲ್ಲಿ ಆಡುತ್ತಿದ್ದ ಪಕ್ಷಾಧ್ಯಕ್ಷ ಈಶ್ವರಪ್ಪ, ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಅನಂತಕುಮಾರ್‌ರವರು ನೇರವಾಗಿ ಅಖಾಡಕ್ಕೆ ಇಳಿದಿದ್ದರಿಂದ ಭಿನ್ನಮತ ಗಂಭೀರ ಸ್ವರೂಪವೂ ಬಂದಿತ್ತು. "ಉಪಚುನಾವಣೆಗಳಿರುವುದರಿಂದ ಅದು ಮುಗಿಯಲಿ, ಬಿಜೆಪಿ ಗೆಲ್ಲಲಿ ನೋಡೋಣ' ಎಂದು ಸಮಾಧಾನಪಡಿಸಿರುವ ಹೈಕಮಾಂಡ್ ಸೂಚನೆಯ





ಹಿಂದೆ ಹೈಕಮಾಂಡ್ ಹಾಗೂ ಮುಖ್ಯಮಂತ್ರಿಗಳ ನಡುವಿನ 'ಹೊಂದಾಣಿಕೆ' ಇಲ್ಲದಿಲ್ಲ. ದಾಖಲೆ ಸಮೇತ, ದಾಖಲಾರ್ಹ ಹಗರಣಗಳನ್ನು ನಡೆಸಿರುವ ಸಿ.ಎಂ.ನ್ನು ರಾಷ್ಟ್ರೀಯ ನಾಯಕರು ಸಮರ್ಥಿಸುತ್ತಿರುವ ರೀತಿಯೇ ಇಡೀ ಪಕ್ಷದ ಸರ್ವ ದಿವಾಳಿತನವನ್ನು ಹಲವು ಬಾರಿ ತೋರಿಸಿದೆ. ಆದರೆ ಇದರೊಂದಿಗೆ ಉಪಚುನಾವಣೆ ಮುಗಿದ ಬಳಿಕ ಮುಖ್ಯಮಂತ್ರಿ ಬದಲಾವಣೆ ಖಚಿತವೆಂದು ಹೈಕಮಾಂಡ್ ಹೇಳಿದೆಯೆಂದಿರುವ ಭಿನ್ನಮತೀಯರು ಯಡಿಯೂರಪ್ಪನವರೆ ಕೈ ಎತ್ತಿ ಇಳಿಸುವುದು ವಿಶೇಷ. ಅಂದರೆ ಇಂತಹ ಅನಿಷ್ಟ, ಕೊಳಕಲು ಭ್ರಷ್ಟ ಕೋಮುವಾದಿ ಸರ್ಕಾರ 'ಇನ್ನಷ್ಟು ದಿನಗಳು ಮುಂದುವರಿಯಲಿ' ಲೂಟಿ ನಡೆಯುತ್ತಲೇ ಇರಲಿ ಎಂಬುದೇ ಆಗಿದೆ.

ಹೀಗಿರುವಾಗ ಈಗಾಗಲೇ ತನಿಖೆಗೆ ಒಪ್ಪಿಸಲಾದ ಹಗರಣಗಳ ಪ್ರಕರಣಗಳ ಬಗ್ಗೆ ವಿಚಾರಣೆ ನಡೆಸಿ ಆರು ವಾರದೊಳಗೆ ವರದಿ ನೀಡಲು ಲೋಕಾಯುಕ್ತರಿಗೆ ನ್ಯಾಯಾಲಯ ವಹಿಸಲಾಗಿತ್ತು. ಇದರ ಹಿನ್ನೆಲೆಯಲ್ಲಿ ಎಫ್.ಐ.ಆರ್. ದಾಖಲಿಸದೇ ವಿಚಾರಣೆ ನಡೆಸುವುದಾಗಿ ಹೇಳಿದ್ದು ಭಿನ್ನಮತೀಯರು ಕಾಯುತ್ತಿದ್ದ ಒಂದು ಸಂದರ್ಭ ತಪ್ಪಿದಂತಾಯಿತು. ಮೇಲಾಗಿ ಲೋಕಾಯುಕ್ತರ ವಿಚಾರಣೆಗೆ ಹೈಕೋರ್ಟ್ ತಡೆ ನೀಡಿರುವುದು ಯಡಿಯೂರಪ್ಪನವರನ್ನು ಇನ್ನಷ್ಟು ನಿರಾಳಗೊಳಿಸಿದೆ.

ಆದಾಗ್ಯೂ ಯಡ್ಡಿ ಸ್ಥಾನಭದ್ರತೆಯೂ ಅಲ್ಲ. ಉಪಚುನಾವಣೆ ಬಳಿಕ ಮತ್ತೆ ಬಿಜೆಪಿಯೊಳಗೆ ಕಿತ್ತಾಟ ಸ್ಫೋಟಿಸಲಿದೆ. ಇಂತಹುದೇ ಸ್ವಾರ್ಥ, ಕಿತ್ತಾಟದಲ್ಲಿ ಕರ್ನಾಟಕದ ಜನ ನರಳುವಂತಾಗಿದೆ. ಬಿರುಬೇಸಿಗೆಯಲ್ಲಿ ಕುಡಿಯಲು ನೀರಿಲ್ಲ, ವಿದ್ಯುತ್ ಪೂರೈಕೆ ಸಮರ್ಪಕವಿಲ್ಲ, ಆದರೆ ಅಭಾವ ಹೆಚ್ಚುತ್ತಿದೆ. ಕೆಲಸ, ಕೂಲಿ ರೇಷನ್ ಸಮಸ್ಯೆ ಹೆಚ್ಚುತ್ತಲೇ ಇದೆ. ಆದರೆ ನಾಯಕರು ಹವಾನಿಯಂತ್ರಿತ ವಿಮಾನದಲ್ಲಿ ಕುಳಿತು ದೆಹಲಿಯಾತ್ರೆಯಲ್ಲೇ ಮಗ್ನರಾಗಿದ್ದಾರೆ.

ಈ ಎಲ್ಲಾ ಬೆಳವಣಿಗೆ, ಸಮಸ್ಯೆಗಳ ಬಗ್ಗೆ ಹಲವು ವಿಭಾಗಗಳಲ್ಲಿ ಗೊಂದಲವಿದೆ. ಯಡಿಯೂರಪ್ಪನನ್ನು ವಿರೋಧಿಗಳು, ಅವರೊಳಗಿನವರು ಆಳಲು ಬಿಡುತ್ತಿಲ್ಲ' ಎಂಬ ಭಾವನೆ ಇದೆ. ಇದಕ್ಕೆ ಕಾರಣ-ಯಾರೂ ಈ ಒಟ್ಟು ಪ್ರಶ್ನೆಗಳನ್ನು ಜನರ ನಡುವೆ ವಿವರಿಸಿ ಜಾಗೃತಿ ಮೂಡಿಸಿಲ್ಲ. ಈಗಲಾದರೂ ಅದಾದೀತೇ? ಅಂತಹ ಪ್ರಯತ್ನಕ್ಕೆ ಸಿಪಿಐ(ಎಂ) ಇಳಿದಿದೆ.

* * *

ಗಿರಿಯಲ್ಲಿ ಉರುಸ್ ನಿಷೇಧ, ಹರಿಯಬಿಟ್ಟರು ಮತಾಂತರದ ಭೂತ

ಬಿಜೆಪಿ ನಾಯಕರು ಕಿತ್ತು ತಿನ್ನುವ ಅವಕಾಶಕ್ಕಾಗಿ ಹಪಹಪಿಸುತ್ತಾ ರಾಜ್ಯದ ಜನರನ್ನು ಮರೆತಿದ್ದಾರೆ. ಅತ್ತ ಇವರ ಮಾತೃಸಂಸ್ಥೆ ಆರ್.ಎಸ್.ಎಸ್ ಯಾವುದೇ ಹಿಂಜರಿಕೆ, ವಿಳಂಬವಿಲ್ಲದೆ ತನ್ನ ಕೋಮುವಾದಿ ಹಿಂದುತ್ವದ ಅಜೆಂಡಾವನ್ನು ಜಾರಿಗೊಳಿಸಲು ತೊಡಗಿದೆ.

ಬಾಬಾಬುಡನ್‌ಗಿರಿಯ ದರ್ಗಾಪೀಠದಲ್ಲಿ ಸಂದಿಲ್ ಉರುಸ್ ಆಚರಣೆಯನ್ನು ಶಾಖಾದ್ರಿಗಳ ನೇತೃತ್ವದಲ್ಲಿ ನಡೆಸಬೇಕೆಂದು ಕಟ್ಟುನಿಟ್ಟಿನ ಆದೇಶವನ್ನು ಸುಪ್ರಿಂ ಕೋರ್ಟ್ ಸರ್ಕಾರಕ್ಕೆ ನೀಡಿದ್ದರೂ ಅದನ್ನು ಉಲ್ಲಂಘಿಸಿ ಶಾಖಾದ್ರಿಗೆ ಅವಕಾಶ ನಿರಾಕರಿಸಿ ಎಂತಹುದೋ ಸಬೂಬು ಹೇಳುತ್ತಿದೆ. ಮಾತ್ರವಲ್ಲ ಪರಂಪರೆಯಂತೆ ಉರುಸ್ ಆಚರಿಸಲು ಅಲ್ಲಿನ ಧಾರ್ಮಿಕ ಮುಖ್ಯಸ್ಥ ಶಾಖಾದ್ರಿಯವರುಮುಂದಾಗಿ ಕಾರ್ಯಕ್ರಮ ಪ್ರಕಟಿಸಿದ್ದನ್ನು ರದ್ದುಪಡಿಸಿದ ಜಿಲ್ಲಾಡಳಿತವು ಗಿರಿಯ ಮೇಲೆ ಯಾರೂ ಹೋಗದಂತೆ ನಿಷೇಧಾಜ್ಞೆ ಜಾರಿಗೊಳಿಸಿದೆ. ಇದು ನ್ಯಾಯಾಲಯದ ಆದೇಶ, ಪರಂಪರೆಗೆ ವಿರುದ್ಧವಾದ ಕೃತ್ಯವಾಗಿದ್ದು ಖಂಡನೀಯ.

ಪುಟ 10 ಕ್ಕೆ

ಜನರ ಪ್ರಶ್ನೆಗಳಿಗೆ ಕುರುಡಾಗಿರುವ

ಭ್ರಷ್ಟ ಬಿಜೆಪಿ ಸರ್ಕಾರದ ವಿರುದ್ಧ ಒಂದು ಜನಾಂದೋಲನ

ಎಪ್ರಿಲ್ 19,2011 ರಂದು ತಾಲ್ಲೂಕು ಕಛೇರಿಗಳಿಗೆ ಮುತ್ತಿಗೆ.

ಲಜ್ಜೆಗೇಡಿ ಭ್ರಷ್ಟ ರಾಜ್ಯ ಬಿಜೆಪಿ ಸರ್ಕಾರ ಹಾಗೂ ಕೇಂದ್ರದ ಯುಪಿಎ ಸರ್ಕಾರಗಳ ಜನದ್ರೋಹಿ ನೀತಿಗಳ ವಿರುದ್ಧ ಆಂದೋಲನದ ಕರೆ ಇದು. ಲೇಖನದ ಎರಡನೇ ಕಂತು....

■ ನಿತ್ಯಾನಂದಸ್ವಾಮಿ
ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು

ರೈತರ ಕಣ್ಣಿಗೆ ಮಣ್ಣು :

ಯಡಿಯೂರಪ್ಪನವರು ಹಸಿರು ಶಾಲು ಹಾಕಿಕೊಂಡು ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದ ದಿನದಿಂದಲೂ ರೈತರಿಗೆ ಮೋಸಮಾಡುತ್ತಾ ಬಂದಿದ್ದಾರೆ. ಹೀಗಾಗಿ ಕಳೆದ ಎರಡುವರೆ ವರ್ಷಗಳ ಅವಧಿಯಲ್ಲಿ 3000ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಸಲ ಅಬ್ಬರದ ಪ್ರಚಾರಂದೊಂದಿಗೆ ಮಂಡಿಸಲಾದ ಕೃಷಿ ಬಜೆಟ್ ರೈತರ ಪಾಲಿಗೆ ಮರಣಶಾಸನವಾಗಲಿದೆ. ನಮ್ಮ ಕೃಷಿರಂಗದಲ್ಲಿ ಬಂಡವಾಳ ಹೂಡಲು ವಿದೇಶಿ ಕಂಪನಿಗಳಿಗೆ ಆಹ್ವಾನ ನೀಡಲಾಗಿದೆ. ಇದರೊದಿಗೆ ನಮ್ಮ ವ್ಯವಸಾಯ ರಂಗದ ಕಂಪೆನೀಕರಣಕ್ಕೆ ನಾಂದಿಯಾಗಲಿದೆ! ಯಡಿಯೂರಪ್ಪನವರು ಈ ವಿದೇಶಿ ಕಟುಕರೊಂದಿಗೆ ಕೈ ಜೋಡಿಸಿ ನಮ್ಮ ರೈತರಿಗೆ ಬಲೆ ಬೀಸಲು ಹೊರಟಿದ್ದಾರೆ.

ನಮ್ಮ ರೈತರಿಗೆ ಬೇಕಾಗಿರುವುದು ಒಳ್ಳೆಯ ಗುಣಮಟ್ಟದ ಬೀಜ, ಗೊಬ್ಬರ, ಕ್ರಿಮಿನಾಶಕಗಳು. ಅವುಗಳು ರಿಯಾಯ್ತಿ ದರದಲ್ಲಿ ಸಿಗುವಂತಿರಬೇಕು. ಹಾಗೆಯೇ ನೀರಾವರಿ ಮತ್ತು ವಿದ್ಯುಚ್ಛಕ್ತಿ ಬೇಕು. ಆನಂತರ, ತಾವು ಬೆಳೆದ ಫಸಲಿಗೆ ಯೋಗ್ಯ ಬೆಲೆ ಮತ್ತು ಅವರ ಕೃಷಿ ಭೂಮಿಗೆ ರಕ್ಷಣೆ. ಇದ್ಯಾವುದನ್ನೂ ಖಚಿತ ಪಡಿಸದೆ, ರೈತರ ಕೃಷಿ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡು ಕೈಗಾರಿಕೆ, ರಸ್ತೆ, ವಿಮಾನ ನಿಲ್ದಾಣ ನಿರ್ಮಾಣದ ಹೆಸರಿನಲ್ಲಿ ಭೂ ಮಾಫಿಯಾಗಳಿಗೆ ಸುಲಭವಾಗಿ ನೀಡಲು ಭೂ ಸುಧಾರಣಾ ಕಾದ್ದೆ ಮತ್ತು ಭೂ ಕಂದಾಯ ಕಾಯ್ದೆಗಳಿಗೆ ತಿದ್ದುಪಡಿ ಮಾಡಲು ಬಿಜೆಪಿ ಸರ್ಕಾರ ಮುಂದಾಗಿದೆ. ರೈತರ ಭೂಮಿಗೆ ಯೋಗ್ಯ ಬೆಲೆ ದೊರಕಿಸುವ ಬಗ್ಗೆಯೂ ಕಾಳಜಿ ಇಲ್ಲ.

ಇದರ ಜೊತೆಯಲ್ಲಿ ರೈತರ ಕಣ್ಣಿಗೆ ಮಣ್ಣೆರಚಲು, ಶೇ.1ರ ಬಡ್ಡಿದರದಲ್ಲಿ ಸಾಲ ನೀಡುವ ಭರವಸೆಯನ್ನು ಘೋಷಿಸಿದ್ದಾರೆ. ಇದು ಕೇವಲ ಸಹಕಾರಿ ಬ್ಯಾಂಕುಗಳಿಂದ ಪಡೆಯುವ ಬೆಳೆ ಸಾಲಕ್ಕೆ ಮಾತ್ರ ಅನ್ವಯಿಸುತ್ತದೆ ಎಂಬುದನ್ನು ವ್ಯವಸ್ಥಿತವಾಗಿ ಮರೆಮಾಚಲಾಗಿದೆ. ರೈತರು ಬಹುದೊಡ್ಡ ಪ್ರಮಾಣದಲ್ಲಿ ದುಬಾರಿ ಬಡ್ಡಿಯ ಖಾಸಗಿ ಸಾಲವನ್ನು ಅವಲಂಭಿಸಬೇಕಾಗಿರುವುದರಿಂದ ಅಂತಹ ರೈತರಿಗೆ ಯಡಿಯೂರಪ್ಪನವರ ಕೃಷಿ ಬಜೆಟ್ ಯಾವುದೇ ಪರಿಹಾರ ಒದಗಿಸುವುದಿಲ್ಲ. ಕೇರಳದ ಸಿಪಿಎಂ ನೇತೃತ್ವದ ಸರ್ಕಾರ ರೈತರ ಖಾಸಗಿ ಸಾಲದ ಹೊರೆಯನ್ನು ವಹಿಸಿಕೊಂಡು ರೈತರು ಆತ್ಮಹತ್ಯೆ ಮಾಡಿಕೊಳ್ಳುವುದನ್ನು ತಡೆಗಟ್ಟುವಲ್ಲಿ ಯಶಸ್ವಿಯಾಗಿದೆ. ಕೃಷಿ ಬಜೆಟ್ ಇದ್ಯಾವುದನ್ನು ಪ್ರಸ್ತಾಪಿಸುವುದಿಲ್ಲ ಕರ್ನಾಟಕದಲ್ಲಿ ಈ ಸಲ ಭತ್ತ, ಈರುಳ್ಳಿ, ಕಬ್ಬು, ತೊಗರಿ, ಅಡಿಕೆ, ರೇಷ್ಮೆ ಬೆಳೆಗಾರರು ಬೆಲೆ ಕುಸಿತದಿಂದ ಭಾರೀ ಹಾನಿ ಅನುಭವಿಸಿದರೂ ಸರ್ಕಾರ ರೈತರ ನೆರವಿಗೆ ಧಾವಿಸಲಿಲ್ಲ! ಅತಿವೃಷ್ಟಿಯಿಂದ ಬೆಳೆಹಾನಿ ಅನುಭವಿಸಿದ ರೈತರಿಗೆ ಇದುವರೆಗೆ ಪರಿಹಾರ ನೀಡಲಾಗಿಲ್ಲ. ಅನೇಕ ನೀರಾವರಿ ಯೋಜನೆಗಳು ಪೂರ್ಣಗೊಳ್ಳದೆ ಇರುವುದರಿಂದ ಬರಗಾಲ ಪೀಡಿತ ಪ್ರದೇಶಗಳ ರೈತರ ಬವಣೆ ತಪ್ಪಲಿಲ್ಲ.

ಭ್ರಷ್ಟಾಚಾರಕ್ಕೆ ಬಲಿಯಾದ ಉದ್ಯೋಗ ಖಾತ್ರಿ ಯೋಜನೆ :

ಗ್ರಾಮೀಣ ಕೂಲಿಕಾರರಿಗೆ ಮತ್ತು ಇತರ ಬಡವರ ಪಾಲಿಗೆ ವರದಾನ ಆಗಬಹುದಾದ ಈ ಯೋಜನೆಯನ್ನು ಸಮರ್ಪಕವಾಗಿ ಜಾರಿಗೆ ತರಲು ಬಿಜೆಪಿ ಸರ್ಕಾರ ಆರಂಭದಿಂದಲೂ ಆಸಕ್ತಿ ವಹಿಸಲಿಲ್ಲ. ಯೋಜನೆಯ ಜಾರಿಗಾಗಿ ಕೇಂದ್ರ ಸರ್ಕಾರದಿಂದ ಬರುತ್ತಿರುವ ಕೋಟಿಗಟ್ಟಲೆ ರೂ.ಹಣವನ್ನು ಕಂಟ್ರಾಕ್ಟರುಗಳು, ರಾಜಕೀಯ ಪುಡಾರಿಗಳು ಲಪಟಾಯಿಸುತ್ತಿರುವುದನ್ನು ಗಮನಿಸಿಯೂ ಸರ್ಕಾರ ಸುಮ್ಮನೆ ಕುಳಿತಿದೆ. ಸುಳ್ಳು ಜಾಬ್ ಕಾರ್ಡ್ ಸಿದ್ದಪಡಿಸಿ ಯಂತ್ರಗಳ ಮೂಲಕ ಅಲ್ಪ ಸ್ವಲ್ಪ ಕೆಲಸ ಮಾಡಿಸಿ, ಹಣವನ್ನೆಲ್ಲಾ ಕಬಳಿಸಲಾಗುತ್ತದೆ. ನಿಜವಾಗಿ ಕೆಲಸ ಮಾಡ ಬಯಸುವವರಿಗೆ ಅರ್ಜಿಕೊಟ್ಟನಂತರವೂ ಕೆಲಸವನ್ನು ನೀಡಲಾಗುವುದಿಲ್ಲ. ಮಾಡಿದ ಕೆಲಸದ ಬಗ್ಗೆ ಸರಿಯಾದ ದಾಖಲೆಗಳನ್ನು ಇಡಲಾಗುವುದಿಲ್ಲ. ಮಾಡಿದ ಕೆಲಸದ ಅಳತೆ ಮಾಡುವಾಗ ಮೋಸ ಮಾಡಲಾಗುತ್ತದೆ. ಮಹಿಳೆಯರು ಕೆಲಸಕ್ಕೆ ಬರುವುದನ್ನು ತಡೆಯಲು ಕೆಲಸದ ವಿಷಯದಲ್ಲಿ ಅವರಿಗೆ ಕಿರುಕುಳ ಕೊಡಲಾಗುತ್ತದೆ. ಕೆಲಸ ಮಾಡಿದ ನಂತರವೂ, ತಿಂಗಳುಗಟ್ಟಲೆ ಕೂಲಿ ಹಣ ಸಂದಾಯ ಮಾಡದೆ ಸತಾಯಿಸುತ್ತಾರೆ. ಹೀಗೆ ಬಿಜೆಪಿ ಸರ್ಕಾರದ ನಿಷ್ಕಾಳಜಿಯಿಂದಾಗಿ ಗಾಮೀಣಪ್ರದೇಶದ ಅಭಿವೃದ್ಧಿ, ಬಡ ರೈತರ ಕೃಷಿ ಭೂಮಿಯ ಅಭಿವೃದ್ಧಿ ಸಾಧಿಸಲು ಒದಗಿಬಂದಿರುವ ಅವಕಾಶಗಳನ್ನು ಕಳೆದುಕೊಳ್ಳಲಾಗುತ್ತಿದೆ.

ಇತ್ಯರ್ಥ ಆಗದೆ ಉಳಿದಿರುವ ಭೂಮಿಯ ಪ್ರಶ್ನೆ :

'ನೈಜ ಅಭಿವೃದ್ಧಿಯನ್ನು ತಡೆಯುವ ಪಾಳೆಗಾರಿ ಭೂ ಸಂಬಂಧ'ಗಳನ್ನು ಬದಲಾಯಿಸಿದರೆ ಮಾತ್ರ ಒಂದು ಸಮುದಾಯದ ಅಭಿವೃದ್ಧಿ ಚಕ್ರಕ್ಕೆ ಚಾಲನೆ ದೊರೆಯಲು ಸಾಧ್ಯ, ಕರ್ನಾಟಕದಲ್ಲಿ ಮೊದಲು 1961ರಲ್ಲಿ ಮತ್ತು 1994ರಲ್ಲಿ ಜಾರಿಗೆ ತರಲಾದ ಭೂಸುದಾರಣೆ ಕಾಯ್ದೆಗಳು ರಾಜ್ಯದಲ್ಲಿ ಒಂದೇ ತೆರನಾಗಿ ಅನುಷ್ಠಾನಗೊಳ್ಳಲಿಲ್ಲ. ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಗೇಣಿದಾರರಿಗೆ, ಅರ್ಜಿ ಹಾಕಲಿಕ್ಕೂ ಅವಕಾಶ ಕೊಡಲಿಲ್ಲ ದಕ್ಷಿಣ ಕರ್ನಾಟಕದಲ್ಲಿ ಮುಖ್ಯವಾಗಿ ಕರಾವಳಿ ಕರ್ನಾಟಕದಲ್ಲಿ ಗೇಣಿದಾರರಿಗೆ, ಅವರು ನಡೆಸಿದ ಚಳಿವಳಿಯ ಪರಿಣಾಮವಾಗಿ ಭೂಮಿಯ ಹಕ್ಕು ಸಿಗುವಂತಾಯಿತು. ಆದರೆ ದಕ್ಷಿಣ ಕನ್ನಡ' ಉಡುಪಿ ಮೊದಲಾದ ಜಿಲ್ಲೆಗಳಲ್ಲಿಯೂ ಗೇಣಿದಾರರ ಸಾವಿರಾರು ಅರ್ಜಿಗಳು ಇನ್ನೂ ಇತ್ಯರ್ಥವಾಗದೆ ಉಳಿದಿವೆ. ಭೂ ಸುಧಾರಣೆಗಳ ಬಗ್ಗೆ ಚಕಾರ ಶಬ್ದ ಎತ್ತದಿರುವ ಬಿಜೆಪಿ ಸರ್ಕಾರಕ್ಕೆ ಇದೊಂದು ಆದ್ಯತೆಯ ವಿಷಯವಾಗಿರುವುದಿಲ್ಲ. ಕರ್ನಾಟಕ ಭೂ ಸುಧಾರಣೆ ಕಾಯ್ದೆಯಲ್ಲಿರುವ ಲೋಪದೋಷಗಳನ್ನು ತೆಗೆದು



ಹಾಕಿ ಸಮಗ್ರವಾದ ಭೂಸುಧಾರಣೆಯನ್ನು ಜಾರಿಗೆ ತರುವ ಬದಲು ಈಗ ಇರುವ ಕಾಯ್ದೆಯನ್ನೆ ಸಡಿಲಗೊಳಿಸಿ ಕೃಷಿಯೇತರ ಉದ್ದೇಶಕ್ಕೆ ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಮುಂದಾಗುತ್ತಿದೆ.

ಸರ್ಕಾರಿ ಬಂಜರು ಭೂಮಿಯನ್ನು ಅನಧಿಕೃತವಾಗಿ ಸಾಗುವಳಿ ಮಾಡಿಕೊಂಡು ಬಂದಿರುವ ಬಡವರ ಪ್ರಶ್ನೆ ಅನೇಕ ವರ್ಷಗಳಿಂದ ನೆನಗುದಿಗೆ ಬಿದ್ದಿದೆ. ನಮೂನೆ 50 ಮತ್ತು 53ರಲ್ಲಿ ಸಲ್ಲಿಸಲಾದ ಲಕ್ಷಾಂತರ ಅರ್ಜಿಗಳು ತಿರಸ್ಕರಿಸಲ್ಪಟ್ಟಿವೆ ಅಥವಾ ಇತ್ಯರ್ಥವಾಗದೆ ಉಳಿದಿವೆ. ಈ ಭೂಮಿಯನ್ನೆ ಅವಲಂಭಿಸಿರುವ ಬಡವರಿಗೆ ಹಕ್ಕು ಪತ್ರ ನೀಡದೆ ಇರುವುದರಿಂದ ಆ ಭೂಮಿಯನ್ನು ಅಭಿವೃದ್ಧಿಪಡಿಸಲು ಸರ್ಕಾರದ ಯಾವುದೇ ಯೋಜನೆಯ ಲಾಭ ಪಡೆಯಲು ಅವರಿಗೆ ಸಾಧ್ಯವಾಗುತ್ತಿಲ್ಲ.

ಅದರಂತೆಯೇ ಅರಣ್ಯ ಭೂಮಿ ಎಂದು ಕರೆದುಕೊಳ್ಳುವ ಮರಗಳೇ ಇಲ್ಲದ ಕೃಷಿ ಯೋಗ್ಯ ಭೂಮಿಯಲ್ಲಿ ಸಾಗುವಳಿ ಮಾಡಿಕೊಂಡು ಬಂದವರಿಗೂ ನ್ಯಾಯ ದೊರೆತಿಲ್ಲ. 2006ರ ಅರಣ್ಯ ಹಕ್ಕುಗಳ ಕಾಯ್ದೆ ಜಾರಿಗೆ ಬಂದ ನಂತರವೂ ರಾಜ್ಯ ಸರ್ಕಾರದ ಅನಾಸಕ್ತಿಯಿಂದಾಗಿ ಬಡವರಿಗೆ ಈ ಕಾಯ್ದೆಯ ಪ್ರಯೋಜನ ದೊರೆಯದಂತಾಗಿದೆ.

ಕುಡಿಯುವ ನೀರಿನ ಸಮಸ್ಯೆ :

ಬೇಸಿಗೆ ಆರಂಭವಾಗುತ್ತಿದ್ದಂತೆ ಕುಡಿಯುವ ನೀರಿನ ಸಮಸ್ಯೆ ಈಗಾಗಲೇ ಗಂಭೀರವಾಗ ತೊಡಗಿದೆ. ಸರ್ಕಾರ ಸಮಸ್ಯೆಯನ್ನು ".ಎದುರಿಸಲು ಯಾವುದೇ ಸಿದ್ದತೆ ಮಾಡಿಕೊಂಡಿಲ್ಲ. ಬೀದರ್, ಗುಲಬರ್ಗಾ, ರಾಯಚೂರು, ಬಳ್ಳಾರಿ, ವಿಜಾಪುರ, ಬಾಗಲಕೋಟೆ, ಗದಗ ಮೊದಲಾದ ಉತ್ತರ ಕರ್ನಾಟಕದ ಜಿಲ್ಲೆಗಳ ಬಹುತೇಕ ಗ್ರಾಮಗಳಲ್ಲಿ ಹಾಗೂ ಪಟ್ಟಣಗಳಲ್ಲಿ ವಾರಕ್ಕೊಮ್ಮೆ 2ವಾರಗಳಿಗೊಮ್ಮೆ ನೀರು ಪೂರೈಕೆ ಮಾಡಲಾಗುತ್ತಿದೆ. ಗ್ರಾಮೀಣ ಪ್ರದೇಶಗಳಲ್ಲಿ ದೂರದಿಂದ ನೀರು ತರುವುದು ಸಾಮಾನ್ಯವಾಗ ತೊಡಗಿದೆ. ದಾವಣಗೆರೆ, ಚಿತ್ರದುರ್ಗ, ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ ಮೊದಲಾದ ಜಿಲ್ಲೆಗಳ ಬಹಳಷ್ಟು ಪ್ರದೇಶಗಳಲ್ಲಿ ಫ್ಲೋರೈಡ್ ನೀರಿನ ಸಮಸ್ಯೆ ತೀವ್ರವಾಗುತ್ತಿದೆ. ಕಳೆದ ಮುಂಗಾರು ಮತ್ತು ಹಿಂಗಾರು ಮಳೆಯಿಂದ ತುಂಬಿಕೊಂಡ ಕೆರೆ-ಕಟ್ಟೆಗಳು ಈಗಾಗಲೇ ಒಣಗಲು ಆರಂಭವಾಗಿದ್ದು ಅಲ್ಲಿ ಉಳಿದಿರುವ ನೀರು ಬಳಕೆಗೆ ಯೋಗ್ಯವಾಗಿಲ್ಲ. ಬೇಸಿಗೆಯ ತಾಪ ಹೆಚ್ಚುತ್ತಿರುವಂತೆ ಸಮಸ್ಯೆ ಜಟಿಲವಾಗುವ ಲಕ್ಷಣಗಳು ಸ್ಪಷ್ಟವಾಗಿ ಗೋಚರಿಸುತ್ತಿವೆ . ಆದರೆ ರಾಜ್ಯ ಸರ್ಕಾರ ಈ ಬಗ್ಗೆ ತಲೆಕೆಡಿಸಿಕೊಳ್ಳುವ ಬದಲು ನಗರ ಪ್ರದೇಶಗಳಲ್ಲಿ ನೀರು ಸರಬರಾಜು ಮಾಡುವುದನ್ನು ವಿದೇಶಿ ಕಂಪನಿಗಳಿಗೆ ವಹಿಸಿಕೊಡಲು ಮುಂದಾಗಿದೆ. ಬೆಂಗಳೂರು ನಗರವೂ ಸೇರಿದಂತೆ ರಾಜ್ಯದ 16 ನಗರಗಳಲ್ಲಿ ಕುಡಿಯುವ ನೀರು ಸರಬರಾಜು ಖಾಸಗೀಕರಣಕ್ಕೆ ಸರ್ಕಾರ ಮುಂದಾಗಿದ್ದು ಇದೇನಾದರೂ ಜಾರಿಯಾದರೆ ಕಾರ್ಮಿಕರು, ಮಧ್ಯಮ ವರ್ಗದವರು ಮತ್ತು ಇತರ ಜನ ಸಾಮಾನ್ಯರು ಈ ಕಂಪನಿಗಳು ವಿಧಿಸುವ ದುಬಾರಿ ದರಗಳನ್ನು ತೆರಬೇಕಾಗುತ್ತದೆ.

ಪುಟ 17ಕ್ಕೆ

ಕವಿತೆ

ರೈತನ ಅಳಲು !

ರೈತ
ದೇಶಕ್ಕೇ ಅನ್ನದಾತ
ಅಂತಾರೆ ಸ್ವಾಮಿ ನಮ್ಮನ್ನಾಳೋರು!
ರೈತನೇ ದೇಶದ ಬೆನ್ನೆಲುಬು
ಅಂತಾನೂ ಹೇಳ್ತಾರೆ ಸ್ವಾಮಿ ನಮ್ಮನ್ನಾಳೋರು!
ಹಿಂಗೇ...... ಹೇಳೀ ಹೇಳೀ....
ರೈತನಿಗೇ ಅನ್ನವಿಲ್ಲದಂತೆ ಮಾಡಿ
ಅವನ ಬೆನ್ನೆಲುಬನ್ನೇ ಮುರಿತಾರೆ ಸ್ವಾಮಿ
ನಮ್ಮನ್ನಾಳೋರು!
ಜಾಗತೀಕರಣವಂತೆ, ಉದಾರೀಕರಣವಂತೆ
ಮತ್ತೇನೇನೋ ಅಂತೆಕಂತೆಗಳಲ್ಲಿ
ನಮ್ಮ ನಾಯಿಪಾಡನ್ನು ಕೇಳೋರ್ಯಾರು ಸ್ವಾಮಿ
ಕೇಳೋರ್ಯಾರು?
ನಾನು ಉಂಡರೆ ತಾನೂ ಉಂಡು
ನಾನು ಮಲಗಿದರೆ ತಾನು ಎಚ್ಚರವಿದ್ದು!
ನಮ್ಮ ಹೊಲ, ಮನೆ ಕಾಯುವ
ಈ ನಾಯಿಯ ನಿಯತ್ತಾದರೂ ಇವರಿಗಿದ್ದಿದ್ದರೆ?!
ನಮ್ಮ ಪಾಡು ಹೀಗಿರುತ್ತಿರಲಿಲ್ಲ ಸ್ವಾಮಿ
ಹೀಗಿರುತ್ತಿರಲಿಲ್ಲ!
ಮನೆ ಮುರುಕರು ಸ್ವಾಮಿ ಮನೆ ಮುರುಕರು
ನಮ್ಮನ್ನಾಳೋರೇ ಮನೆಮುರುಕರು!

- ಹುರುಕಡ್ಲಿ ಶಿವಕುಮಾರ

'ಹುರುಕಡ್ಲಿ ಶಿವಕುಮಾರ' ಅವರು ಒಬ್ಬ ಸಂವೇದನಾಶೀಲ ಬರಹಗಾರರು. ಮೊನ್ನೆ ಮೊನ್ನೆ ಯಡಿಯೂರಪ್ಪನವರು ಮಂಡಿಸಿದ 'ರಾಷ್ಟ್ರೀಯ ಪ್ರಥಮ' ಹೆಗ್ಗಳಿಕೆಯ ಬಜೆಟ್ ಮತ್ತು ವಸ್ತುಸ್ಥಿತಿ ಕುರಿತು ನೊಂದು "ದೇಶದ ಇತಿಹಾಸದಲ್ಲೇ ಮೊದಲ ಕೃಷಿ ಬಜೆಟ್ ಎಂದು ಮುಖ್ಯಮಂತ್ರಿ ಸರ್ಕಸ್ ಮಾಡಿದರು. ಆದರೆ ಯಾವ ರೈತನ ಮುಖದಲ್ಲೂ ಆತ್ಮವಿಶ್ವಾಸವಿಲ್ಲ" ಎಂದಿರುವ ಅವರ ಸಾತ್ವಿಕ ಆಕ್ರೋಶ ಇಲ್ಲಿ ಹೀಗೆ ಅಭಿವ್ಯಕ್ತಿಗೊಂಡಿದೆ.

ವಿದ್ಯುತ್ ಕೊರತೆ :

ಅನೇಕ ಕಡೆಗಳಲ್ಲಿ ನೀರು ಇದ್ದರೂ ವಿದ್ಯುತ್ ಕೊರತೆಯಿಂದಾಗಿ ನೀರಿನ ಸಮಸ್ಯೆ ಉಲ್ಬಣಗೊಳ್ಳುತ್ತಿದೆ. ರಾಜ್ಯದ ವಿದ್ಯುತ್ ಕೊರತೆ ನೀಗಿಸಲು ಯಡಿಯೂರಪ್ಪ ಸರ್ಕಾರಕ್ಕೆ ಸಾಧ್ಯವಾಗಲೇ ಇಲ್ಲ. ಈಗಾಗಲೇ ಜಾರಿಗೆ ತರಲಾದ ಅನಿಯಮಿತ ಲೋಡ್‌ಶೆಡ್ಡಿಂಗ್ ಕಾರಣದಿಂದಾಗಿ ರಾಜ್ಯದ ಕೃಷಿ ಹಾಗೂ ಕೈಗಾರಿಕಾ ಉತ್ಪಾದನೆಗೆ ಹಾನಿ ತಟ್ಟುವಂತಾಗಿದೆ.ಸರ್ಕಾರದ 24ಗಂಟೆಗಳ ನಿರಂತರ ವಿದ್ಯುತ್ ಪೂರೈಕೆಯ ಭರವಸೆ ನೀಡಿದ್ದರೂ ವಿದ್ಯಾರ್ಥಿಗಳ ಪರೀಕ್ಷಾ ಸಮಯದಲ್ಲೇ ವಿದ್ಯುತ್ ಕೈಕೊಡುತ್ತಿದೆ. ಇಂಧನ ವಲಯಕ್ಕೆ 2011-12ನೇ ಸಾಲಿನಲ್ಲಿ 8,523ಕೋಟಿ ರೂ.ಗಳು ಹಂಚಿಕೆ ಮಾಡಿದ್ದು ಏನೇನೂ ಸಾಲದು.

ಕೃಷಿ ಉತ್ಪಾದನೆಯನ್ನು ಹೆಚ್ಚಿಸುವ ದೃಷ್ಟಿಯಿಂದ ರೈತರ ನೀರಾವರಿ ಪಂಪ್‌ಸೆಟಗಳಿಗೆ ಮತ್ತು ಕೃಷಿಕೂಲಿಕಾರರ ಭಾಗ್ಯಜ್ಯೋತಿ /ಕುಟಿರ ಜ್ಯೋತಿ ಸಂಪರ್ಕಗಳಿಗೆ ಉಚಿತ ವಿದ್ಯುತ್ ನೀಡುವುದು ಸರ್ಕಾರದ ಆದ್ಯತೆ ಆಗಬೇಕಾಗಿದೆ. ರೈತರ ಪಂಪ್ ಸೆಟ್ ಗಳಿಗೆ ಮತ್ತು ಭಾಗ್ಯಜ್ಯೋತಿ ಸಂಪರ್ಕಗಳಿಗೆ ಮೀಟರ್ ಅಳವಡಿಸುವುದನ್ನು ಅದು ಕೈಬಿಡಬೇಕಾಗಿದೆ. ಇದಕ್ಕಾಗಿ, ಬಜೆಟ್ ನಲ್ಲಿ ಅಗತ್ಯ ಮೊತ್ತವನ್ನು ಒದಗಿಸಲು ಸರ್ಕಾರ ಮುಂದಾಗಬೇಕಾಗಿದೆ. ಜನತೆಯ ಮೇಲೆ ದುಬಾರಿ ವಿದ್ಯುತ್ ದರಗಳನ್ನು ಹೇರುವ ಕ್ರಮವನ್ನು ಸರ್ಕಾರ ಕೈಬಿಡಬೇಕಾಗಿದೆ.

ನೆನೆಗುದಿಗೆ ಬಿದ್ದಿರುವ ನೀರಾವರಿ ಯೋಜನೆಗಳು: ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸುವುದು ಯಡಿಯೂರಪ್ಪ ಸರ್ಕಾರಕ್ಕೆ ಒಂದು ಆದ್ಯತೆ ಆಗಲೇ ಇಲ್ಲ. 2011-12ನೇ ಸಾಲಿನಲ್ಲಿ ನೀರಾವರಿ ವಲಯಕ್ಕೆ ಕೇವಲ 7,800 ಕೋಟಿ ರೂ.ಗಳನ್ನು ನಿಗದಿಪಡಿಸಲಾಗಿದೆ. ಅನೇಕ ಯೋಜನೆಗಳು ದೀರ್ಘಕಾಲದಿಂದ ನೆನೆಗುದಿಗೆ ಬಿದ್ದಿವೆ. ನಿರಂತರ ಬರಗಾಲ ಪೀಡಿತ ಪ್ರದೇಶಗಳಾದ ಚಿತ್ರದುರ್ಗ, ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ ಮೊದಲಾದ ಜಿಲ್ಲೆಗಳಿಗೆ ನೀರನ್ನು ಒದಗಿಸುವ ಯೋಜನೆ ಕೇವಲ ಕನಸಾಗಿ ಉಳಿದಿದೆ. ಕೃಷ್ಣಾ ಜಲ ವಿವಾದದಲ್ಲಿ ನ್ಯಾಯಾಧಿಕರಣವು 177 ಟಿ.ಎಂ.ಸಿ.ಯಷ್ಟು ಹೆಚ್ಚುವರಿ ನೀರನ್ನು ರಾಜ್ಯಕ್ಕೆ ನೀಡಿದ್ದರೂ ಅದನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಸಿದ್ಧತೆಗಳಿಲ್ಲ.

ಕಾರ್ಮಿಕ ವಿರೋಧಿ ನೀತಿಗಳು:

ವಿದೇಶಿ ಕಂಪೆನಿಗಳ ಬಂಡವಾಳ ಹೂಡಿಕೆಗೆ ಅಂಗಲಾಚುತ್ತಿರುವ ರಾಜ್ಯ ಬಿಜೆಪಿ ಸರ್ಕಾರವು ವಿದೇಶಿ ದೊರೆಗಳ ಮೆಚ್ಚುಗೆ ಸಂಪಾದಿಸಲು ಹೆಚ್ಚು ಹೆಚ್ಚಾಗಿ ಕಾರ್ಮಿಕ ವಿರೋಧಿ ಧೋರಣೆಗಳನ್ನು ಪ್ರತಿಪಾದಿಸುತ್ತಿದೆ. ಗುತ್ತಿಗೆ ಹಾಗೂ ಹೊರಗುತ್ತಿಗೆ ಪದ್ಧತಿಯನ್ನು ಹೆಚ್ಚೆಚ್ಚು ಪ್ರೋತ್ಸಾಹಿಸಲಾಗುತ್ತಿದೆ. ದಿನದ ದುಡಿಮೆಯ ಅವಧಿಯನ್ನು 8 ರಿಂದ 10 ಗಂಟೆಗಳಿಗೆ ಹೆಚ್ಚಿಸಲು ರಾಜ್ಯ ಸಚಿವ ಸಂಪುಟ ತೀರ್ಮಾನಿಸಿದ್ದು ಇದು ಸರ್ಕಾರದ ಬಂಡವಾಳಿಗರ ಪರ ನೀತಿಯ ಪ್ರತೀಕವಾಗಿದೆ. ಅಂಗನವಾಡಿ ನೌಕರರು ತಮ್ಮ ಹಕ್ಕುಗಳಿಗಾಗಿ ಹೋರಾಡುತ್ತಿದ್ದಾರೆ. ಅವರನ್ನು ಸರ್ಕಾರಿ ನೌಕರರೆಂದು ಪರಿಗಣಿಸಲು ಈ ಸರ್ಕಾರ ತಯಾರಿಲ್ಲ. ಆದರೆ ಇತ್ತೀಚಿಗೆ ಸುತ್ತೋಲೆಯೊಂದನ್ನು ಹೊರಡಿಸಿ ಅಂಗನವಾಡಿ ನೌಕರರು ಯಾವುದೇ ಮುಷ್ಕರ ನಡೆಸುವಂತಿಲ್ಲ ಎಂದು ಆದೇಶ ಹೊರಡಿಸಿ ನೌಕರರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ದಮನ ಮಾಡಲು ಹೊರಟಿದೆ. ಅದೇ ರೀತಿಯಲ್ಲಿ ರಾಜ್ಯ ಗ್ರಾಮ ಪಂಚಾಯತಿ ನೌಕರರು ತಮ್ಮ ಸೇವಾ ಸೌಲಭ್ಯಗಳಿಗಾಗಿ ಹೋರಾಟ ನಡೆಸುತ್ತಾ ಬಂದಿದ್ದಾರೆ. ಇತ್ತೀಚೆಗೆ ಅವರ ವೇತನ ಪರಿಷ್ಕರಣೆಯ ಸರ್ವಾನುಮತದ ಶಿಫಾರಸ್ಸನ್ನು ರಾಜ್ಯ ಕನಿಷ್ಟ ವೇತನ ಸಲಹಾ ಮಂಡಳಿಯು ನೀಡಿತ್ತು. ಆದರೆ ರಾಜ್ಯ ಕಾರ್ಮಿಕ ಮಂತ್ರಿ ಈ ಶಿಫಾರಸ್ಸನ್ನು ತಿರಸ್ಕರಿಸಿ ಸೂಚಿತ ಹೆಚ್ಚಳದಂತೆ ತಲಾ 1000 ರೂ. ಗಿಂತಲೂ ಹೆಚ್ಚು ಕಡಿತ ಮಾಡಿ ಆದೇಶ ಹೊರಡಿಸಿದ್ದಾರೆ! ರಾಜ್ಯದ ಅಸಂಘಟಿತ ವಲಯದ ಕಾರ್ಮಿಕರು ತಮ್ಮ ಮಾಸಿಕ ವೇತನ ಕನಿಷ್ಟ 6000/- ರೂ.ಗಳಿಗೆ ಹೆಚ್ಚಿಸಬೇಕೆಂದೂ, ನಗರ ಪ್ರದೇಶಗಳಲ್ಲಿ ಅದು 10,000ರೂ. ಆಗಿರಬೇಕೆಂದೂ ಒತ್ತಾಯಿಸುತ್ತಾ ಕಳೆದ 3 ವರ್ಷಗಳಲ್ಲಿ ಅನೇಕ ಹೋರಾಟಗಳನ್ನು ನಡೆಸಿದ್ದರೂ ರಾಜ್ಯ ಸರ್ಕಾರಕ್ಕೆ ಅವರ ಕೂಗು ಕೇಳದಂತಾಗಿದೆ. ತೀವ್ರ ಬೆಲೆ ಏರಿಕೆಯ ಹಿನ್ನೆಲೆಯಲ್ಲಿ ಬೀಡಿ ಕಾರ್ಮಿಕರು ಕನಿಷ್ಟ ಕೂಲಿಯನ್ನು ಪರಿಷ್ಕರಿಸಬೇಕೆಂದು ಒತ್ತಾಯಿಸುತ್ತಿದ್ದಾರೆ. ಕಟ್ಟಡ ನಿರ್ಮಾಣ ಕಾರ್ಮಿಕರು ತಮಗೆ ಇ.ಎಸ್.ಐ. ಅಂತಹ ಕಾರ್ಮಿಕ ಕಾನೂನುಗಳನ್ನು ವಿಸ್ತರಿಸುವಂತೆ ಒತ್ತಾಯಿಸುತ್ತಿದ್ದಾರೆ. ಹಮಾಲಿ ಕಾರ್ಮಿಕರು ತಮಗೂ ಕಲ್ಯಾಣ ಮಂಡಳಿಯನ್ನು ರಚಿಸಿ ಸಾಮಾಜಿಕ ಭದ್ರತೆಯನ್ನು ಒದಗಿಸಬೇಕೆಂದು ಕೇಳುತ್ತಿದ್ದಾರೆ. ಆಶಾ ಕಾರ್ಯಕರ್ತೆಯರು ತಮ್ಮನ್ನು ಆರೋಗ್ಯ ಸಹಾಯಕಿಯರೆಂದು ಖಾಯಂಗೊಳಿಸಿ ಯೋಗ್ಯ ವೇತನ ಕೊಡಬೇಕೆಂದು ಆಗ್ರಹಿಸುತ್ತಿದ್ದಾರೆ. ಶಾಲಾ ಮಕ್ಕಳಿಗೆ ಬಿಸಿಯೂಟ ಒದಗಿಸುವುದನ್ನು ಖಾಸಗೀಕರಣ ಮಾಡುವ ವಿಚಾರವನ್ನು ಕೈ ಬಿಟ್ಟು ಬಿಸಿಯೂಟ ತಯಾರಿಸುತ್ತಿರುವ ಕಾರ್ಯಕರ್ತೆಯರಿಗೆ ಯೋಗ್ಯ ವೇತನ ನೀಡಬೇಕೆಂದು ಅವರು ಹೋರಾಟ ಮಾಡುತ್ತಿದ್ದಾರೆ. ಅಂಗನವಾಡಿ ನೌಕರರು ನಿರಂತರ ಹೋರಾಟ ಮಾಡಿ ಪಿಂಚಣಿ ಸೌಲಭ್ಯವನ್ನು ಪಡೆಯಲು ಯಶಸ್ವಿಯಾಗಿದ್ದರೂ ರಾಜ್ಯ ಸರ್ಕಾರ ಅಪಾಯಕಾರಿಯಾದ ಶೇರು ಮಾರುಕಟ್ಟೆ ಆಧಾರಿತ ಪಿಂಚಣಿ ಯೋಜನೆಯನ್ನು ಒಪ್ಪಿಕೊಳುವಂತೆ ಒತ್ತಡ ಹೇರುತ್ತಿದೆ. ಇವೆಲ್ಲದರಲ್ಲೂ ಸರ್ಕಾರದ ಕಾರ್ಮಿಕ ವಿರೋಧಿ ಧೋರಣೆ ಬಹಳ ಸ್ಪಷ್ಟವಾಗಿದೆ. ಅದರಂತೆಯೇ ಪುರಸಭೆ, ನಗರ ಸಭೆ ಮತ್ತು ಮಹಾನಗರ ಪಾಲಿಕೆಗಳಲ್ಲಿ ದುಡಿಯುತ್ತಿರುವ ಪೌರ ಕಾರ್ಮಿಕರು ತಮ್ಮನ್ನು ಖಾಯಂ ಕೆಲಸಗಾರರೆಂದು ಪರಿಗಣಿಸಿ ಖಾಯ?ಂ ಕೆಲಸಗಾರರಿಗೆ ಸಿಗುವ ಸೌಲಭ್ಯಗಳನ್ನು ನೀಡಬೇಕೆಂದು ಒತ್ತಾಯಿಸುತ್ತಿದ್ದಾರೆ.

ರಾಜ್ಯದ ಪ್ರೌಢ ಶಾಲಾ ಶಿಕ್ಷಕರು ವೇತನ ತಾರತಮ್ಯ ನಿವಾರಣೆಗಾಗಿ ಹೋರಾಟ ಮಾಡುತ್ತಿದ್ದಾರೆ. ತಮ್ಮ ಸೇವಾ ಅವಧಿಯನ್ನು ಗಣನೆಗೆ ತೆಗೆದುಕೊಳ್ಳುವಂತೆ ಆಗ್ರಹಿಸಿ ಗ್ರಾಮೀಣ ಕೃಪಾಂಕ ನೌಕರರು ಹೋರಾಟ ನಡೆಸಿದ್ದಾರೆ. ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅತಿಥಿ ಉಪನ್ಯಾಸಕರು ತಮ್ಮ ವೇತನ ಹೆಚ್ಚಳಕ್ಕಾಗಿ ಒತ್ತಾಯಿಸುತ್ತಿದ್ದಾರೆ. ಅಂಗವಿಕಲ ಮಕ್ಕಳ ಶಿಕ್ಷಣಕ್ಕಾಗಿ ನೇಮಿಸಲ್ಪಟ್ಟ ರಾಜ್ಯ ಸಂಪನ್ಮೂಲ ಶಿಕ್ಷಕರು ತಮಗೆ ಸೇವಾ ಭದ್ರತೆ ಒದಗಿಸಬೇಕೆಂದು ಒತ್ತಾಯಿಸುತ್ತಿದ್ದಾರೆ. ರಾಜ್ಯ ಅನುದಾನ ರಹಿತ ಶಾಲೆಗಳ ಶಿಕ್ಷಕರು ಸಹ ಸೇವಾ ಭದ್ರತೆ ಹಾಗೂ ಕನಿಷ್ಟ ವೇತನಕ್ಕಾಗಿ ಪರಿತಪಿಸುತ್ತಿದ್ದಾರೆ. ಆದರೆ ರಾಜ್ಯ ಸರ್ಕಾರ ಇಂತಹ ಯಾವುದೇ ಹೋರಾಟಗಳಿಗೆ, ಜನರ ಹಕ್ಕೊತ್ತಾಯಗಳಿಗೆ ಸ್ಪಂದಿಸುತ್ತಿಲ್ಲ.

ದಲಿತ ವಿರೋಧಿ ಸರ್ಕಾರ: ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದ ದಲಿತರ ಮೇಲೆ ಸವರ್ಣೀಯರ ದೌರ್ಜನ್ಯಗಳು ಹೆಚ್ಚಾಗಿವೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರ ಅಭಿವೃದ್ಧಿಗಾಗಿ ಅವರ ಜನಸಂಖ್ಯೆಗೆ ಅನುಗುಣವಾಗಿ ಶೇ 24ರಷ್ಟು ಮೊತ್ತವನ್ನು ಬಜೆಟ್ ಹಂಚಿಕೆಯಲ್ಲಿ ತೆಗೆದಿಡುವ ಕ್ರಮ ಜಾರಿಗೆ ಬಂದಿಲ್ಲ. ದಲಿತರಿಗಾಗಿ ಮೀಸಲಿಟ್ಟ ಹಣ ವರ್ಷದ ಅವಧಿ ಒಳಗಾಗಿ ಖರ್ಚು ಮಾಡುವುದಕ್ಕೂ ಸರ್ಕಾರ ಕಾಳಜಿ ವಹಿಸುವುದಿಲ್ಲ. ದಲಿತ ವಿದ್ಯಾರ್ಥಿಗಳ ವಿದ್ಯಾರ್ಥಿ ನಿಲಯಗಳ ಪರಿಸ್ಥಿತಿಯಾಗಲೀ ಅವರಿಗೆ ಕೊಡಬೇಕಾದ ಶಿಷ್ಯ ವೇತನವನ್ನಾಗಲೀ ಗಣನೀಯವಾಗಿ ಪರಿಷ್ಕರಿಸಲಾಗಿಲ್ಲ. ದಲಿತ ಯುವಕರಿಗೆ ಸ್ವಯಂ ಉದ್ಯೋಗದ ಅವಕಾಶಗಳನ್ನು ಹೆಚ್ಚಿಸಲಾಗಿಲ್ಲ. ಖಾಸಗಿ ರಂಗದಲ್ಲಿ ಮೀಸಲಾತಿಯನ್ನು ಜಾರಿಗೊಳಿಸಬೇಕೆಂಬ ಬೇಡಿಕೆಗೆ ಸರ್ಕಾರ ಸ್ಪಂದಿಸುತ್ತಿಲ್ಲ. ದೇವದಾಸಿ ಮಹಿಳೆಯರು ತಮ್ಮ ವಿಮೋಚನೆಗಾಗಿ ಹೋರಾಟ ನಡೆಸುತ್ತಿದ್ದರೂ ಸರ್ಕಾರ ಅವರ ಪುನರ್ವಸತಿಗೆ ಮುಂದಾಗುತ್ತಿಲ್ಲ.

ರಾಜ್ಯದಲ್ಲಿ ಮಲ ಹೊರುವ ಪದ್ಧತಿ, ದಲಿತರಿಗೆ ದೇವಸ್ಥಾನ ಪ್ರವೇಶ ನಿರಾಕರಿಸುವ ಪದ್ಧತಿ, ಹೊಟೇಲುಗಳಲ್ಲಿ ಎರಡು ಗ್ಲಾಸು ಪದ್ಧತಿ, ಸಾರ್ವಜನಿಕ ಕೆರೆ-ಬಾವಿಗಳಿಗೆ ಪ್ರವೇಶ ನಿಷೇಧಿಸುವ ಅಸ್ಪೃಶ್ಯತಾ ಆಚರಣೆಗಳು ಜಾರಿಯಲ್ಲಿದ್ದರೂ ಸರ್ಕಾರ ಅವುಗಳನ್ನು ತಡೆಗಟ್ಟಲು ಮುಂದಾಗುತ್ತಿಲ್ಲ. ಅಂತರ್ ಜಾತಿ ವಿವಾದಗಳನ್ನು ವಿರೋಧಿಸುವ ಪ್ರವೃತ್ತಿಯನ್ನು ದೃಢವಾಗಿ ತಡೆಯಲು ಸರ್ಕಾರ ಗಮನ ನೀಡುತ್ತಿಲ್ಲ.

ಅಲ್ಪ ಸಂಖ್ಯಾತರಿಗೆ ರಕ್ಷಣೆ ಇಲ್ಲ:

ರಾಜ್ಯ ಬಿಜೆಪಿ ಸರ್ಕಾರ ಧಾರ್ಮಿಕ ಅಲ್ಪಸಂಖ್ಯಾತರಾದ ಮುಸಲ್ಮಾನರಿಗೆ ಮತ್ತು ಕ್ರೈ?ಸ್ತರಿಗೆ ಸಂಘ ಪರಿವಾರದ ಧಾಳಿಗಳ ಹಿನ್ನೆಲೆಯಲ್ಲಿ ಯಾವುದೇ ರಕ್ಷಣೆ ಕೊಡಲು ಮುಂದಾಗುತ್ತಿಲ್ಲ. ಅಲ್ಪ ಸಂಖ್ಯಾತರ ಮೇಲೆ, ಅವರ ಪ್ರಾರ್ಥನಾಲಯಗಳ ಮೇಲೆ ಧಾಳಿ ಮಾಡಿ ಸಿಕ್ಕಿಬಿದ್ದಿರುವ ಸಂಘ ಪರಿವಾರದ ಕಾರ್ಯಕರ್ತರ ಮೇಲೆ ಹೂಡಲಾದ ಕ್ರಿಮಿನಲ್ ಪ್ರಕರಣಗಳನ್ನು ಸರ್ಕಾರ ಹಿಂಪಡೆದುಕೊಂಡಿದೆ. 2008ರಲ್ಲಿ ನಡೆದ ಚರ್ಚ್ ಧಾಳಿಗೆ ಸಂಬಂಧಿಸಿ ನ್ಯಾಯಮೂರ್ತಿ ಬಿ.ಕೆ.ಸೋಮಶೇಖರ್ ಆಯೋಗದ ಏಕಪಕ್ಷೀಯ ವರದಿಯನ್ನು ಸರ್ಕಾರ ಅಂಗೀಕರಿಸಲು ಮುಂದಾಗಿದೆ. ಗೋಮಾಂಸ ನಿಷೇಧ ಕಾಯ್ದೆಯನ್ನು, ಅಂಗೀಕರಿಸುವ ಮೂಲಕ ಅಲ್ಪಸಂಖ್ಯಾತರ, ದಲಿತರ ಮತ್ತು ಇತರ ಬಡವರ ಆಹಾರದ ಹಕ್ಕನ್ನು ಕಿತ್ತುಕೊಳ್ಳಲು ಹೊರಟಿದೆ. ಮಾತ್ರವಲ್ಲ ದನಗಳನ್ನು ಸಾಕುವ ರೈತರಿಗೂ ಅವುಗಳ ವ್ಯಾಪಾರದಲ್ಲಿ ತೊಡಗಿರುವವರಿಗೂ ಕಿರುಕುಳ ನೀಡಲು ಮುಂದಾಗಿದೆ. ಚುನಾವಣೆಗಳ ಸಮಯದಲ್ಲಿ ಹಿಂದೂ ಸಮಾಜೋತ್ಸವಗಳನ್ನು ಏರ್ಪಡಿಸಿ ಹಿಂದೂ ಮತಗಳ ಕ್ರೋಢೀಕರಣ ಮಾಡಲಾಗುತ್ತಿದೆ. ಸಾರ್ವಜನಿಕ ಹಣವನ್ನು ಮಠಗಳಿಗೆ ನೀಡು ಮೂಲಕ, ಸಾವಯವ ಕೃಷಿ, ಗೋ ಶಾಲೆಗಳನ್ನು ನಡೆಸುವ ಹೆಸರಿನಲ್ಲಿ ಸಂಘ ಪರಿವಾರದ ಸಂಸ್ಥೆಗಳಿಗೆ ವ್ಯವಸ್ಥಿತವಾಗಿ ಹಣವನ್ನು ಒದಗಿಸಲಾಗುತ್ತಿದೆ. ○

ಮುಗಿಯದ ಭೂಮಿ ಬೇಡಿಕೆಗಳು



ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಸ್ವಂತದ್ದೇ ಆದ ನಿವೇಶನರಹಿತರು ಮಿತಿಮೀರಿದ ಸಂಖ್ಯೆಯಲ್ಲಿ ಇದ್ದಾರೆ ಅನ್ನುವುದು ಕರ್ನಾಟಕ ಪ್ರಾಂತ ರೈತಸಂಘ ಹಾಗೂ



ಡಿವೈಎಫ್ಐ ಕಾರ್ಯಕ್ರಮಗಳನ್ನು ಹಮ್ಮಿಕೊಂಡ ಅನಂತರ ಅನುಭವಕ್ಕೆ ಬರುತ್ತಿದೆ. ಮಂಗಳೂರು, ಉಳ್ಳಾಲಗಳಿಂದ ಪ್ರಾರಂಭವಾದ ಭೂಮಿ ಹೋರಾಟಗಳು ನಿಧಾನವಾಗಿ ಜಿಲ್ಲೆಯ ಬೇರೆ ಪ್ರದೇಶಗಳಿಗೂ ಹಬ್ಬುವ ದಿನಗಳು ದೂರವಿಲ್ಲ. ಭೂರಹಿತರು ಸ್ವಂತ ನಿವೇಶನ ಬಯಸಿ, ಬಹಳ ಕಾಲದಿಂದ ಸರ್ಕಾರೀ ಜಮೀನಿನಲ್ಲಿ 'ಅಕ್ರಮ' ವಾಸವಿದ್ದವರು ಸಕ್ರಮೀಕರಣಗೊಳಿಸಲು ಕೋರಿ, ಸರ್ಕಾರದಿಂದ ಆಶ್ವಾಸನೆ ಪಡೆದು ಸರ್ಕಾರೀ ಜಾಗದಲ್ಲಿ ವಾಸವಿರುವವರು ಹಕ್ಕುಪತ್ರ ಬಯಸಿ ಸರ್ಕಾರಕ್ಕೆ ಆಗಿಂದಾಗ್ಗೆ ಮನವಿ ಸಲ್ಲಿಸುತ್ತಲೇ ಬಂದಿದ್ದರೂ, ಭೂಮಿ ಅವರಿಗೆ ಲಭಿಸಿರುವುದಿಲ್ಲ. ಇದರಿಂದ ಕಂಗೆಟ್ಟಿರುವ ಜನಸಮುದಾಯ ಕರ್ನಾಟಕ ಪ್ರಾಂತ ರೈತಸಂಘ ಹಾಗೂ ಡಿವೈಎಫ್ಐ ಕರೆಕೊಡುತ್ತಿರುವ ಸಮಾವೇಶಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದಾರೆ.

ತೊಕ್ಕೊಟಿನಲ್ಲಿ ಪ್ರಾಂತ ರೈತ ಸಂಘದಿಂದ ಭೂಮಿ ಸಮಾವೇಶ :

ರಾಜ್ಯ ಸರಕಾರ ಬಡವರ ಭೂಮಿಯನ್ನು ಬಂಡವಾಳಶಾಹಿಗಳಿಗೆ ಕಡಿಮೆ ಬೆಲೆಯಲ್ಲಿ ಮಾರಾಟ ಮಾಡುತ್ತಿದೆ. ಒಂದು ಕೋಟಿಗೂ ಅಧಿಕ ಹಣವನ್ನು ತಮ್ಮ ಮನೆಗೆ ಖರ್ಚು ಮಾಡುತ್ತಿರುವ ಮುಖ್ಯಮಂತ್ರಿಗಳು, ಬಡವರು ಮನೆ ದುರಸ್ತಿಗೆಂದು ಕೇಳುವ ರೂ.50,000 ಕೊಡಲು ಹಿಂದೇಟು ಹಾಕುತ್ತಾರೆ. ಸಿ.ಎಂ. ತಮ್ಮ ಮನೆಯ ಶೌಚಾಲಯಕ್ಕೆ ರೂ.16 ಲಕ್ಷ ಖರ್ಚು ಮಾಡಿ, ಆಶ್ರಯ ಮನೆಗಳನ್ನು ಹಂದಿಗೂಡಿನಂತೆ ನಿರ್ಮಿಸಿ ಬಡವರಿಗೆ ನೀಡುತ್ತಿರುವುದು ಸಮಂಜಸವಲ್ಲ ಎಂಬುದಾಗಿ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಸಮಿತಿ ಅಧ್ಯಕ್ಷ ಮಾರುತಿ ಮಾನ್ಪಡೆ ಹೇಳಿದರು. ಕರ್ನಾಟಕ ಪ್ರಾಂತ ರೈತ ಸಂಘ ಕೋಟೆಕಾರು ಸರ್ಕಲ್ ಸಮಿತಿ ಮಾರ್ಚ್ 20 ರಂದು ತೊಕ್ಕೊಟಿನಲ್ಲಿ ಏರ್ಪಡಿಸಿದ ಬೃಹತ್ ಭೂಮಿ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಪ್ರಾಂತ ರೈತ ಸಂಘದ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಉಪಾಧ್ಯಕ್ಷ ಕೃಷ್ಣಪ್ಪ ಸಾಲ್ಯಾನ್ ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾಸಮಿತಿ ಕಾರ್ಯದರ್ಶಿ ಕೆ.ಯಾದವಶೆಟ್ಟಿ, ಕೋಟೆಕಾರು ಸರ್ಕಲ್ ರೈತ ಸಂಘದ ಅಧ್ಯಕ್ಷ ಸಂಜೀವ ಪಿಲಾರು, ಉಪಾಧ್ಯಕ್ಷ ಪರಮೇಶ್ವರ ಶೆಟ್ಟಿ, ಲೋಕಯ್ಯ ಪನೀರ್ ಉಳ್ಳಾಲ ವಲಯ ಜನವಾದಿ ಮಹಿಳಾ ಸಂಘಟನೆಯ ಅಧ್ಯಕ್ಷತೆ ನಳಿನಾಕ್ಷಿ ಶೆಟ್ಟಿ, ಕೋಟೆಕಾರು ಗ್ರಾ.ಪಂ. ಉಪಾಧ್ಯಕ್ಷ ನಾಗೇಶ್ ಪೂಜಾರಿ ಕೊಂಡಾಣ ಮೊದಲಾದವರು ಭಾಗವಹಿಸಿದ್ದರು. ಮಹಿಳೆಯರೂ, ಮುಸ್ಲೀಮರನ್ನು ಒಳಗೊಂಡಂತೆ ಸಭಾಂಗಣ ಮೀರಿ ನಿವೇಶನರಹಿತರು ಸಮಾವೇಶದಲ್ಲಿ ಭಾಗವಹಿಸಿದ್ದರು.

ಡಿವೈಎಫ್ಐನಿಂದ ನಿವೇಶನರಹಿತರ ಸಮಾವೇಶ ಸರಣಿ :

ಮಾರ್ಚ್ 20 ರಂದು ಮಂಗಳೂರು ನಗರದ



ಕಣ್ಣೂರು ವಾರ್ಡಿನಲ್ಲಿ ನಿವೇಶನರಹಿತರ ಸಮಾವೇಶ ಕಣ್ಣೂರು ಡಿವೈಎಫ್ಐ ಘಟಕದ ಆಶ್ರಯದಲ್ಲಿ ನಡೆಯಿತು. ಡಿವೈಎಫ್ಐ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಅಧ್ಯಕ್ಷ ಮುನೀರ್ ಕಾಟಿಪಳ್ಳ ಸಮಾವೇಶವನ್ನುದ್ದೇಶಿಸಿ ಮಾತನಾಡಿದರು. ನೂರಕ್ಕೂ ಮಿಕ್ಕಿ ನಿವೇಶನರಹಿತರು ಸಮಾವೇಶದಲ್ಲಿ ಭಾಗವಹಿಸಿದ್ದು, ಡಿವೈಎಫ್ಐ ನಗರ ಸಮಿತಿ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್ ಕಣ್ಣೂರು ಘಟಕ



ಬೋರುಗುಡ್ಡೆ, ಹಾರಿಸ್, ಸಾದಿಕ್, ಹಬೀಜ್, ಹೈದರ್ ಮೊದಲಾದವರು ಸಭೆಯಲ್ಲಿ ಉಪಸ್ಥಿತರಿದ್ದರು.

ಉಳ್ಳಾಲ ವಲಯದ ಮುನ್ನೂರು ಗ್ರಾ.ಪಂ. ಎದುರು ಮಾರ್ಚ್ 21 ರಂದು ಮನೆ ನಿವೇಶನ ಆಗ್ರಹಿಸಿ ಗ್ರಾಮ ಪಂಚಾಯತ್ ಸಾಮೂಹಿಕ ಅರ್ಜಿ ಸಲ್ಲಿಕೆ ಕಾರ್ಯಕ್ರಮ ಉಳ್ಳಾಲ ವಲಯ ಡಿವೈಎಫ್ಐ ನೇತೃತ್ವದಲ್ಲಿ ನಡೆಯಿತು. ಡಿವೈಎಫ್ಐ ಜಿಲ್ಲಾಸಮಿತಿ ಅಧ್ಯಕ್ಷ ಮುನೀರ್ ಕಾಟಿಪಳ್ಳ, ಉಳ್ಳಾಲ ವಲಯದ ಬಹಾಬಲ.ಟಿ, ಉಳ್ಳಾಲ ವಲಯ ಸಿಪಿಎಂ ಕಾರ್ಯದರ್ಶಿ ಕೃಷ್ಣಪ್ಪ ಸಾಲ್ಯಾನ್ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು. ಪ್ರತಿಭಟನೆಗು ಮುನ್ನ 200ಕ್ಕೂ ಮೀರಿ ನಿವೇಶನರಹಿತರಿಂದ ಕುತ್ತಾರು ಜಂಕ್ಷನ್‌ನಿಂದ ಪಂಚಾಯತಿ ಕಚೇರಿಗೆ ರ್‍ಯಾಲಿ ನಡೆಸಲಾಯಿತು. ಉಳ್ಳಾಲ ವಲಯ ಡಿವೈಎಫ್ಐ ಕಾರ್ಯದರ್ಶಿ ಅಶೋಕ ಶೆಟ್ಟಿ, ಹರ್ಷವರ್ಧನ ಉಳ್ಳಾಲ, ರೋಹಿದಾಸ್ ಭಟ್ನಗರ, ಭೋಜ ಶೆಟ್ಟಿ, ಜಯರಾಂ ಕುತ್ತೂರು, ಜೀವನ್‌ರಾಜ್, ದಿವ್ಯನ್, ರೂಪೇಶ್, ಇಬ್ರಾಹಿಂ, ಗಣೇಶ್ ಟೈಲರ್, ಜಯಂತ ಅಂಬ್ಲಮೊಗರು, ಶಶಿಕಲಾ, ಭಾಸ್ಕರ ಕುತ್ತಾರು, ಸಿಐಟಿಯು ಮುಖಂಡ ಜಯಂತ ನಾಯ್ಕ ಉಪಸ್ಥಿತರಿದ್ದರು.



ವಾ.ಉ.

ಡಿವೈಎಫ್ಐ ಕಾವೂರು ಘಟಕವು ಮಾರ್ಚ್ 20 ರಂದು ಮಂಗಳೂರು ನಗರ ಕಾವೂರು ವಾರ್ಡಿನ ನಿವೇಶನರಹಿತರ ಸಮಾವೇಶವನ್ನು ಏರ್ಪಡಿಸಿತ್ತು. ಈ ಸಮಾವೇಶವನ್ನು ಉದ್ದೇಶಿಸಿ ದಕ್ಷಿಣ ಕನ್ನಡ ಜಿಲ್ಲಾ ಡಿವೈಎಫ್ಐ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್ ಮಾತನಾಡಿದರು. 200 ರಷ್ಟು ನಿವೇಶನರಹಿತರು ಸಮಾವೇಶದಲ್ಲಿ ಪಾಲ್ಗೊಂಡಿದ್ದರು. ಡಿವೈಎಫ್ಐ ಜಿಲ್ಲಾಧ್ಯಕ್ಷ ಮುನೀರ್ ಕಾಟಿಪಳ್ಳ ಕಾವೂರು ಡಿವೈಎಫ್ಐ ಘಟಕದ ಅಧ್ಯಕ್ಷೆ ರುಕ್ಮಿಣಿ ಕಾವೂರು, ತಿಮ್ಮಕ್ಕ ಕಾವೂರು, ಗೀತಾ, ಶೋಭಾ, ಗೋಪಾಲ್, ಉಮೇಶ್ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಅದೇ ದಿನ ಬೆಳಿಗ್ಗೆ ಮಂಗಳೂರು ನಗರ ಪಂಜಿನಮೊಗರು ವಾರ್ಡಿನಲ್ಲಿ ನಡೆದ ನಿವೇಶನರಹಿತರ ಸಮಾವೇಶವನ್ನು ಪಂಜಿನಮೊಗರು ಘಟಕ ಏರ್ಪಡಿಸಿತ್ತು. ಮುನೀರ್ ಕಾಟಿಪಳ್ಳ, ದಯಾನಂದಶೆಟ್ಟಿ, ಬಿ.ಕೆ. ಇಮ್ತಿಯಾಜ್ ಸಮಾವೇಶವನ್ನುದ್ದೇಶಿಸಿ ಮಾತನಾಡಿದರು. 200 ರಷ್ಟು ನಿವೇಶನರಹಿತರು ಭಾಗವಹಿಸಿದ್ದರು. ಡಿವೈಎಫ್ಐ ಪಂಜಿನಮೊಗರು ಘಟಕದ ಬಶೀರ್, ಸೌಮ್ಯ, ನೌಷದ್‌ಬಾವಾ ಮೊದಲಾದವರು ಸಮಾವೇಶದಲ್ಲಿ ಭಾಗವಹಿಸಿದ್ದರು.

ಮಾರ್ಚ್ 23 ರಂದು ಉಳ್ಳಾಲ ವಲಯದ ಪಾವೂರು ಗ್ರಾಮ ಪಂಚಾಯತ್ ಕಚೇರಿಯ ಎದುರು ಪಾವೂರು ಡಿವೈಎಫ್ಐ ಘಟಕದ ನೇತೃತ್ವದಲ್ಲಿ ನಿವೇಶನರಹಿತರ ಪ್ರತಿಭಟನೆ ನಡೆಯಿತು. ಡಿವೈಎಫ್ಐ ಜಿಲ್ಲಾ ಸಮಿತಿ ಕಾರ್ಯದರ್ಶಿ ದಯಾನಂದಶೆಟ್ಟಿ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು. 100 ಕ್ಕೂ ಹೆಚ್ಚು ನಿವೇಶನರಹಿತರು ಪ್ರತಿಭಟನೆಯಲ್ಲಿ ಭಾಗವಹಿಸಿದರು. ಡಿವೈಎಫ್ಐ ಉಳ್ಳಾಲ ವಲಯಸಮಿತಿ ಸದಸ್ಯ ರಫೀಕ್ ಹರೇಕಳ, ಪಾವೂರು ಘಟಕದ ಅಧ್ಯಕ್ಷ ಖಾಲಿದ್, ಕಾರ್ಯದರ್ಶಿ ಚಿತ್ತರಂಜನ್, ಗ್ರಾಮಪಂಚಾಯತಿ ಸದಸ್ಯರಾದ ದುಗ್ಗಪ್ಪ ಟೈಲರ್, ಯೋಗೇಶ್ ಪಾವೂರು ಕಾರ್ಮಿಕ ಸಂಘಟನೆಯ ಕಾರ್ಯಕರ್ತರಾದ ವಿಶ್ವನಾಥ ಪಾವೂರು, ಎಂ.ಆರ್.ಸುಲೇಮಾನ್, ಗೀತಾ ಪಾವೂರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಪಿಂಚಣಿ ಯೋಜನೆ ವಿರುದ್ಧ ಮಂಗಳೂರಿನಲ್ಲಿ ಅಂಗನವಾಡಿ ನೌಕರರ ಪ್ರತಿಭಟನೆ :

ಸರಕಾರದ ನೂತನ ಸ್ವಾವಲಂಬನಾ ಪಿಂಚಣಿ ಯೋಜನೆ ಖಾತ್ರಿರಹಿತವಾಗಿದ್ದು, ಈ ಯೋಜನೆ ಅಂಗನವಾಡಿ ನೌಕರರಿಂದ ಕಡ್ಡಾಯವಾಗಿ ನಿಧಿ ಸಂಗ್ರಹಿಸುತ್ತಿರುವುದನ್ನು ಕೈಬಿಡಬೇಕು ಹಾಗೂ ಎಲ್ಐಸಿ ಆಧಾರಿತ ಪಿಂಚಣಿ ಯೋಜನೆ ಜಾರಿಗೆ ತರಬೇಕು ಎಂದು ಒತ್ತಾಯಿಸಿ ಮಾರ್ಚ್ 22 ರಂದು ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತಿ ಕಚೇರಿ ಎದುರು ಸಿಐಟಿಯು ಸಂಯೋಜಿತ ರಾಜ್ಯ ಅಂಗನವಾಡಿ ನೌಕರರ ಸಂಘದ ದಕ್ಷಿಣ ಕನ್ನಡ ಜಿಲ್ಲಾ ಘಟಕದ ನೇತೃತ್ವದಲ್ಲಿ ಜಿಲ್ಲೆಯ ಅಂಗನವಾಡಿ ನೌಕರರು ಪ್ರತಿಭಟನೆ ನಡೆಸಿದರು.

ಪ್ರತಿಭಟನಾಕಾರರನ್ನುದ್ದೇಶಿಸಿ ನೌಕರರ ಸಂಘದ



ಸಲಹೆಗಾರ ಹಾಗೂ ಸಿಐಟಿಯು ಜಿಲ್ಲಾ ಸಮಿತಿ ಉಪಾಧ್ಯಕ್ಷ ಬಿ.ಎಂ.ಭಟ್, ಸಿಐಟಿಯು ದಕ್ಷಿಣಕನ್ನಡ ಜಿಲ್ಲಾ ಸಮಿತಿ ಅಧ್ಯಕ್ಷ ವಸಂತ ಆಚಾರಿ, ಸಂಘದ ಜಿಲ್ಲಾಧ್ಯಕ್ಷೆ ರವಿಕಲಾ ಮಾತನಾಡಿದರು. ಪ್ರತಿಭಟನೆಯ ನೇತೃತ್ವವನ್ನು ಕಾರ್ಯದರ್ಶಿ ಸುಕನ್ಯಾ, ಲಕ್ಷ್ಮಿ ರಾಜೀವಿ, ಸುಮತಿ, ದಮಯಂತಿ, ಎಮ್ಮಿ ಫರ್ನಾಂಡೀಸ್, ಕಾರ್ಮಿಕ ಮುಂದಾಳುಗಳಾದ ಶಿವಕುಮಾರ್, ಈಶ್ವರಿ, ಎಲ್.ಟಿ.ಸುವರ್ಣ ಮೊದಲಾದವರು ವಹಿಸಿದ್ದರು.


ಡಿವೈಎಫ್ಐನಿಂದ ಭಗತ್‌ಸಿಂಗ್ ದಿನಾಚರಣೆ

ಭಗತ್‌ಸಿಂಗ್ ಅವರ 80ನೇ ಹುತಾತ್ಮ

ಪುಟ .....ಕ್ಕೆ

ಲಿಬ್ಯಾದಲ್ಲಿ ಪಾಶ್ಚಿಮಾತ್ಯರ ಕ್ರೌರ್ಯದ ನಗ್ನ ಪ್ರದರ್ಶನ

'ನಾಗರಿಕರನ್ನು ರಕ್ಷಿಸುವ' ನೆಪದಲ್ಲಿ ಲಿಬ್ಯಾದಲ್ಲಿ ನಾಟೊ ತನ್ನ ಮಿಲಿಟರಿ ದಾಳಿಗಳನ್ನು ಮುಂದುವರೆಸುತ್ತಿರುವಾಗಲೇ, ಯೆಮೆನ್ ಮತ್ತು ಬಹ್ರೇನ್ ದೇಶಗಳ ನಿರಂಕುಶ ಆಡಳಿತಗಳು ತಮ್ಮ ಜನಗಳನ್ನು ಸಾಯಿಸಲು, ಅವರ ಕೈಕಾಲುಗಳನ್ನು ಮುರಿಯಲು ಅವಕಾಶ ನೀಡಲಾಗಿದೆ. ಯೆಮೆನ್‌ನ ಅಧ್ಯಕ್ಷ ಪಾಶ್ಚಿಮಾತ್ಯರ ಬಹುಮೂಲ್ಯ ಮಿತ್ರ ಮತ್ತು ಬಹ್ರೇನ್ ಅಮೆರಿಕಾದ ಐದನೇ ನೌಕಾಪಡೆಗೆ ಆತಿಥ್ಯ ಕೊಟ್ಟಿದೆ. ಆದ್ದರಿಂದ ಈ ದೇಶಗಳ ನಾಗರಿಕರು ಸತ್ತರೆ ಪರವಾಗಿಲ್ಲ! ವಿಶ್ವಸಂಸ್ಥೆಯ ಆದೇಶವನ್ನು ಅಮೆರಿಕ ಮತ್ತು ನಾಟೊ ಹೀಗೆ ಕ್ರೂರ ಲೆಕ್ಕಾಚಾರದಿಂದ ಹೈಜಾಕ್ ಮಾಡಲು ಸಾಧ್ಯವಾಗಬಾರದು.



ಸರಿಯಾಗಿ ನೂರು ವರ್ಷಗಳ ಹಿಂದೆ ಜಗತ್ತು ಆಕಾಶದಿಂದ ದಾಳಿಯ, ಅಂದರೆ ಒಂದು ವಿಮಾನ ಭೂಮಿಯ ಮೇಲಿನ ಸ್ಥಳಗಳಿಗೆ ಗುರಿಯಿಟ್ಟು ಬಾಂಬುಗಳನ್ನು ಉದುರಿಸಿದ ಘಟನೆಯನ್ನು ಕಂಡಿತ್ತು. 1911ರ ಅಕ್ಟೋಬರ್ 26 ರಂದು ಇಟಾಲಿಯನ್ ವಿಮಾನಗಳು ತುರ್ಕಿ ಸೇನಾಪಡೆಗಳ ಮೇಲೆ ಟ್ರಿಪೋಲಿ ಬಳಿ ಬಾಂಬುಗಳನ್ನು ಹಾಕಿದವು. ಆಗ ಲಿಬ್ಯಾ ಒಟ್ಟೊಮಾನ್ ಸಾಮ್ರಾಜ್ಯದ ಭಾಗವಾಗಿತ್ತು. ಇಟಲಿ ನಂತರ ಲಿಬ್ಯಾವನ್ನು ವಸಾಹತುವಾಗಿ ಮಾಡಿಕೊಂಡಿತು. ಲಿಬ್ಯಾದ ಜನತೆ ಇಟಲಿಯ ವಸಾಹತುಶಾಹಿಗಳ ಎದುರು ವೀರಾವೇಶದಿಂದ ಹೋರಾಡಿದರು. 1920ರ ದಶಕದಲ್ಲಿ ಮುಸೊಲಿನಿಯ ಇಟಲಿ ಗುಂಡುಗಳ ಮಳೆ ಸುರಿಸಲು ವಿಮಾನಗಳನ್ನು ಬಳಸಿ ಕುದುರೆ ಮೇಲೆ ಕುಳಿತು ಹೋರಾಡುತ್ತಿದ್ದ ಸಾವಿರಾರು ಬುಡಕಟ್ಟು ಹೋರಾಟಗಾರರನ್ನು ಕೊಂದು ಹಾಕಿತು.

ನೂರು ವರ್ಷಗಳ ನಂತರ ಲಿಬ್ಯಾ ಈಗ ಅಮೆರಿಕ, ಫ್ರಾನ್ಸ್ ಮತ್ತು ಬ್ರಿಟನ್ನಿನ ಹಡಗುಗಳು ಮತ್ತು ವಿಮಾನಗಳ ಬೃಹತ್ ಬಾಂಬು ದಾಳಿಗಳಿಗೆ ಒಳಗಾಗಿದೆ. ಇಟಲಿ ಈ ದಾಳಿಯಲ್ಲಿ ಸೇರಿಕೊಳ್ಳಲಿಲ್ಲ. ಏಕೆಂದರೆ ಅದು ಅದರ ಬರ್ಬರ ವಸಾಹತುಶಾಹಿ ಇತಿಹಾಸದ ಭೀತಿಯನ್ನು ಎಬ್ಬಿಸುತ್ತಿತ್ತು. ಆದರೆ ಅದರ ಮಿತ್ರರ ಹಲವು ವಿಮಾನಗಳು ಅಲ್ಲಿಯ ವಿಮಾನ ನೆಲೆಯಿಂದಲೇ ಹಾರಿ ಹೋಗಿ ಬಾಂಬು ಸುರಿಸಿದವು. ಈ ವಿಮಾನಗಳು ಸುರಿಸಿದ ಬಾಂಬುಗಳಿಂದ ನೂರಾರು ಲಿಬ್ಯಾದ ನಾಗರಿಕರು ಪ್ರಾಣ ಕಳಕೊಂಡರೂ, ಈ ದಾಳಿಗಳನ್ನು ನಡೆಸಿದ್ದು ಅವರನ್ನು ರಕ್ಷಿಸಲಿಕ್ಕಾಗಿ ಎಂದು ಪಾಶ್ಚಿಮಾತ್ಯ ಶಕ್ತಿಗಳು ತಮ್ಮ ಸಿನಿಕತನವನ್ನು ಪ್ರದರ್ಶಿಸಿವೆ.

ಇದು ನಾಟೊ ಆಕ್ರಮಣ

ಲಿಬ್ಯಾದ ಮೇಲೆ ಈ ದಾಳಿ ಮಾರ್ಚ್ 19ರಂದು ಆರಂಭವಾಯಿತು. ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ನಿರ್ಣಯ ಸಂಖ್ಯೆ 1973 ಒಂದು ಸಾರ್ವಭೌಮ ದೇಶದ ಮೇಲಿನ ಈ ದಾಳಿಗೆ ನ್ಯಾಯ ಬದ್ಧತೆಯ ಮುಸುಕು ಹೊದಿಸಿದೆ. ಲಿಬ್ಯಾದ ಮೇಲೆ ಹಾರಾಟ ನಿಷೇಧ ವಲಯವನ್ನು ಹೇರಲು ಈ ನಿರ್ಣಯ ಕರೆ ನೀಡಿತ್ತು. ಹಸ್ತಕ್ಷೇಪಕ್ಕೆ ನೆಪ ಒದಗಿಸಲು ಅನುಕೂಲ ಕಲ್ಪಿಸುವಂತೆ ನಾಗರಿಕರನ್ನು ರಕ್ಷಿಸುವ ಅಗತ್ಯ ಕ್ರಮಗಳ ಬಗ್ಗೆ ಈ ನಿರ್ಣಯ ಮಾತಾಡಿತ್ತು. ಈ ಅವಕಾಶವನ್ನು ಬಳಸಿ ಲಿಬ್ಯಾದ ಎಲ್ಲ ಮಿಲಿಟರಿ ಸ್ಥಾವರಗಳ ಮೇಲೆ ಬಾಂಬುಗಳನ್ನು ಸುರಿಯಲಾಗಿದೆ; ಹಾರಾಟ ನಿಷೇಧ ವಲಯವನ್ನು ಹೇರಿದ ನಂತರ ಮುಂದಿನ ಹೆಜ್ಜೆಯೆಂದರೆ ಗದ್ದಾಫಿಯ ಸಶಸ್ತ್ರ ಪಡೆಗಳ ಮೇಲೆ ವಿಮಾನ ದಾಳಿಗಳು. ಈ ಮೂಲಕ ನಾಟೋದ ಮಿಲಿಟರಿ ಶಕ್ತಿಯನ್ನು ಬಂಡುಕೋರರ ಬೆಂಬಲಕ್ಕೆ ವಹಿಸಲಾಗಿದೆ.

ಲಿಬ್ಯಾದ ಮೇಲೆ ಯುದ್ಧಕ್ಕೆ ಕರೆ ಕೊಡುವಲ್ಲಿ ಎಲ್ಲರಿಗಿಂತ ಮುಂದಿದ್ದದ್ದು ಫ್ರಾನ್ಸ್ ಮತ್ತು ಬ್ರಿಟನ್. ಅವರಿಗೆ ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ನಿರ್ಣಯ ಎಂದರೆ ಗದ್ದಾಫಿಯನ್ನು ತೆಗೆದು ಹಾಕಲು ಕೊಟ್ಟ ಪರವಾನಿಗೆ. ವಿಶ್ವ ಸಂಸ್ಥೆಯ ನಿರ್ಣಯದಲ್ಲಿ ಹೇಳಿದಂತೆ ನಾಗರಿಕರ ಸಾವುಗಳನ್ನು ತಪ್ಪಿಸುವುದಾದರೆ ಲಿಬ್ಯಾದ ಮುಖಂಡನನ್ನು ಸಾಯಿಸುವುದು ಕಾನೂನುಬದ್ಧವಾಗುತ್ತದೆ ಎಂದು ಬ್ರಿಟಿಶ್ ಸರಕಾರೀ ಅಧಿಕಾರಿಗಳು ಹೇಳಿದ್ದಾರೆ. ಮಿಲಿಟರಿ ಹಸ್ತಕ್ಷೇಪದ ಗುರಿಯ ಬಗ್ಗೆ ವಿಭಿನ್ನ ವ್ಯಾಖ್ಯೆಗಳು ಮತ್ತು ನಾಟೊ ಮಿತ್ರದೇಶಗಳ ನಡುವೆಯೇ ಇದ್ದ ಅನುಮಾನಗಳಿಂದಾಗಿ ಕಾರ್ಯಾಚರಣೆಗಳ ಹತೋಟಿಯನ್ನು ನಾಟೋಗೆ ವಹಿಸಲು ಅಂತಿಮವಾಗಿ ನಿರ್ಧರಿಸಲಾಯಿತು. ನಾಟೊ ಲಿಬ್ಯಾದ ಮೇಲೆ ಆಕ್ರಮಣ ನಡೆಸುತ್ತದೆ ಎಂದು ಆರಂಭದಲ್ಲೇ ಫಿಡೆಲ್ ಕಾಸ್ಟ್ರೊ ಹೇಳಿದ ಮಾತು ನಿಜವಾಗಿದೆ.

'ನಾಗರಿಕರನ್ನು ರಕ್ಷಿಸುವ' ನೆಪದಲ್ಲಿ ನಾಟೊ ತನ್ನ ಮಿಲಿಟರಿ ದಾಳಿಗಳನ್ನು ಮುಂದುವರೆಸುತ್ತಿರುವಾಗಲೇ, ಯೆಮೆನ್ ಮತ್ತು ಬಹ್ರೇನ್‌ನ ದೇಶಗಳ ನಿರಂಕುಶ ಆಡಳಿತಗಳು ತಮ್ಮ ಜನಗಳನ್ನು ಸಾಯಿಸಲು, ಅವರ ಕೈಕಾಲುಗಳನ್ನು ಮುರಿಯಲು ಅವಕಾಶ ನೀಡಲಾಗಿದೆ. ಯೆಮೆನ್‌ನ ಅಧ್ಯಕ್ಷ ಅಲಿ ಅಬ್ದುಲ್ಲಾ ಸಲೇಹ್ ಪಾಶ್ಚಿಮಾತ್ಯರ ಬಹುಮೂಲ್ಯ ಮಿತ್ರ ಮತ್ತು ಬಹ್ರೇನ್ ಅಮೆರಿಕಾದ ಐದನೇ ನೌಕಾಪಡೆಗೆ ಆತಿಥ್ಯ ಕೊಟ್ಟಿದೆ. ಆದ್ದರಿಂದ ಈ ದೇಶಗಳ ನಾಗರಿಕರು ಸತ್ತರೆ ಪರವಾಗಿಲ್ಲ!

ಪಾಶ್ಚಿಮಾತ್ಯ ಇಬ್ಬಂದಿತನ ಒಬಾಮ ಗೋಸುಂಬೆತನ

ಪಾಶ್ಚಿಮಾತ್ಯರ ಇಬ್ಬಂದಿತನ ಇಷ್ಟೊಂದು ಕಣ್ಣು ಕುಕ್ಕುವಂತಿದ್ದರೆ, ಅತ್ತ ಒಬಾಮರ ಗೋಸುಂಬೆತನವಂತೂ ನಿಜವಾಗಿಯೂ ಉಸಿರು ಕಟ್ಟಿಸುವಂತದ್ದು. ನೋಬೆಲ್ ಶಾಂತಿ ಪ್ರಶಸ್ತಿಯ ಕಿರೀಟ ಹೊತ್ತ ಈತ ತನ್ನ ಯುದ್ಧಕೋರತನವನ್ನು ಮರೆಮಾಚಲು ಹೆಣಗುತ್ತಿದ್ದಾರೆ. 'ನಾವು ಈ ಆಡಳಿತಕ್ಕೆ ಶಸ್ತ್ರಾಸ್ತ್ರಗಳು ಸಿಗದಂತೆ ಮಾಡುತ್ತೇವೆ, ನಗದು ಪೂರೈಕೆಯನ್ನು ಕಡಿದು ಹಾಕುತ್ತೇವೆ, ವಿರೋಧಿಗಳಿಗೆ ನೆರವು ಕೊಡುತ್ತೇವೆ ಮತ್ತು ಗದ್ದಾಫಿ ಅಧಿಕಾರ ಬಿಡುವ ದಿನ ಬೇಗನೇ ಬರುವಂತೆ ಇತರ ದೇಶಗಳೊಂದಿಗೆ ಕೆಲಸ ಮಾಡುತ್ತೇವೆ' ಎಂದು ಹೇಳುತ್ತಾ, ಅದೇ ಉಸಿರಿನಲ್ಲೇ 'ನಾವು ಗದ್ದಾಫಿಯನ್ನು ಬಲಪ್ರಯೋಗಿಸಿ ಕಿತ್ತೆಸೆಯಲು ಪ್ರಯತ್ನಿಸಿದರೆ ನಮ್ಮ ಮೈತ್ರಿಕೂಟ ಒಡೆಯುತ್ತದೆ' ಎಂದೂ ಆತ ಹೇಳುತ್ತಾರೆ!

ಈ 'ಮಾನವೀಯ ಮಧ್ಯಪ್ರವೇಶ'ದ ಬಗ್ಗೆ ಅವರ ಮೈತ್ರಿಕೂಟದಲ್ಲಿ ಭಿನ್ನಾಭಿಪ್ರಾಯಗಳೂ ಕಾಣಬಂದಿವೆ. ನಾಟೊ ಕಾರ್ಯಾಚರಣೆಯನ್ನು ವಹಿಸಿಕೊಂಡ ನಂತರ ಜರ್ಮನಿ ತನ್ನ ಎರಡು ನಾವಿಕ ಪಡೆಗಳನ್ನು ಮತ್ತು ಪತ್ತೇದಾರಿ ವಿಮಾನಗಳನ್ನು ಹಿಂತೆಗೆದುಕೊಂಡಿದೆ. ವಿಶ್ವಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಲಿಬ್ಯಾದ ಮೇಲೆ ನಿರ್ಣಯ ಅಂಗೀಕರಿಸುವಾಗ ಗೈರು ಹಾಜರಾದ ಐದು ದೇಶಗಳಲ್ಲಿ ಜರ್ಮನಿಯೂ ಒಂದು. ನಾಟೋದ ಮತ್ತೊಂದು ಪಾಲುದಾರ ದೇಶವಾದ ಟರ್ಕಿ ಮಿಲಿಟರಿ ಮಧ್ಯಪ್ರವೇಶ ಹಾರಾಟ ನಿಷೇಧ ವಲಯಕ್ಕಿಂತ ಮುಂದೆ ಹೋಗುವುದನ್ನು ಒಪ್ಪುವುದಿಲ್ಲ ಎಂದಿದೆ, ತಾನು ಲಿಬ್ಯಾಕ್ಕೆ ತನ್ನ ಪಡೆಗಳನ್ನು ಕಳಿಸುವುದಿಲ್ಲ ಎಂದೂ ಹೇಳಿದೆ.

ಲಿಬ್ಯಾ ಕುರಿತಂತೆ ಲಂಡನಿನಲ್ಲಿ ಇತ್ತೀಚೆಗೆ ನಡೆದ ಸಮ್ಮೇಳನದಲ್ಲಿ ಅರಬ್ ಲೀಗ್ ಪ್ರತಿನಿಧಿಗಳು ಇದ್ದರು ಎಂದು ಹೇಳಿದ್ದರೂ, ಅದರ ಮಹಾ ಕಾರ್ಯದರ್ಶಿಯಾಗಲೀ, ಇಜಿಪ್ಟ್, ಅಲ್ಜೀರಿಯಾ ಸೇರಿದಂತೆ ಹಲವು ಅರಬ್ ದೇಶಗಳಾಗಲೀ ಭಾಗವಹಿಸಲಿಲ್ಲ. ಯುಎಇ, ಕತಾರ್‌ನಂತಹ ಪಾಶ್ಚಿಮಾತ್ಯರ ಗಿರಾಕಿ ಪ್ರಭುತ್ವಗಳು ಮಾತ್ರವೇ ತಾವು ಅರಬ್ ದೇಶಗಳ ಪರವಾಗಿ ಮಾತಾಡುತ್ತಿದ್ದೇವೆ ಎಂದು ಹೇಳಿಕೊಂಡವು.

ಸಿನಿಕ ಲೆಕ್ಕಾಚಾರ

ಅಮೆರಿಕಾ ಮತ್ತು ಬ್ರಿಟನ್ ಬಂಡುಕೋರರಿಗೆ ಶಸ್ತ್ರಾಸ್ತ್ರಗಳನ್ನು ಪೂರೈಸುವ ಬಗ್ಗೆ ಮಾತಾಡಲಾರಂಭಿಸಿವೆ. ಅದೇ ವೇಳೆಗೆ, ನಾಟೋ ಸೇನಾಪತಿ ಬಂಡುಕೋರರ ನಡುವೆ ಇಸ್ಲಾಮೀ ಮೂಲಭೂತವಾದಿಗಳು ಮತ್ತು ಅಲ್ ಖೈದಾ ಕೂಡ ಇರಬಹುದು ಎಂದು ಸೂಚನೆ ನೀಡಿದ್ದಾರೆ. ನಾಟೋಗೆ ಒಂದು ಪಾಶ್ಚಿಮಾತ್ಯ-ಪರ ಪರ್ಯಾಯ ಆಡಳಿತವನ್ನು ಸೃಷ್ಟಿಸುವ ಕೆಲಸವೂ ಇದೆ.

ನಾಟೋದ ಈ ಹಸ್ತಕ್ಷೇಪದ ಹಿಂದೆ ಅರಬ್ ಜಗತ್ತಿನಲ್ಲಿ ಸಂಭವಿಸುತ್ತಿರುವ ಜನಪ್ರಿಯ ಬಂಡಾಯಗಳನ್ನು ಹಿಮ್ಮೆಟ್ಟಿಸುವ ಮತ್ತು ಅವನ್ನು ಒಂದು ಸರ್ವಾಧಿಕಾರಶಾಹಿ ಆಳ್ವಿಕೆಯ ವಿರುದ್ಧ ಮಾನವೀಯ ಮಧ್ಯಪ್ರವೇಶದ ಹೆಸರಿನಲ್ಲಿ ದಾರಿ ತಪ್ಪಿಸಿ ತನಗೆ ಬೇಕಾದ ದಾರಿಯಲ್ಲಿ ಒಯ್ಯುವ ಸಿನಿಕ ಲೆಕ್ಕಾಚಾರವೂ ಇದೆ. ಇರಾಕಿನಲ್ಲಿ ಸದ್ದಾಂ ಹುಸೇನರನ್ನು ಮಾಡಿದಂತೆ, 2003ರಲ್ಲಿ ಪಾಶ್ಚಿಮಾತ್ಯರೊಂದಿಗೆ ರಾಜಿ ಮಾಡಿಕೊಂಡು, ತೈಲ ಬಹುರಾಷ್ಟ್ರೀಯ ಕಂಪನಿಗಳಿಗೆ ಸುಸ್ವಾಗತ ಕೋರಿ, ಬ್ರಿಟನ್ ಮತ್ತು ಇತರ ಪಾಶ್ಚಿಮಾತ್ಯ ದೇಶಗಳ ಪ್ರೀತಿಪಾತ್ರನೆನಿಸಿದ ಗದ್ದಾಫಿ ಆಳ್ವಿಕೆಯನ್ನು ಈಗ ರಕ್ಕಸ ಪ್ರಭುತ್ವ ಎಂಬಂತೆ ಚಿತ್ರಿಸಲಾಗುತ್ತಿದೆ.

ಪಾಶ್ಚಿಮಾತ್ಯರು ಅಂತರ್ಯುದ್ಧಕ್ಕೆ ತುಪ್ಪ ಸುರಿಯುತ್ತಿದ್ದಾರೆ. ಲಿಬ್ಯಾ ವಿನಾಶದ ಪ್ರಪಾತದತ್ತ ಸಾಗುವಂತೆ ಮಾಡಲಾಗುತ್ತಿದೆ. ಭಾರತದಲ್ಲಿ, ನಾಟೋದ ಈ ಮಿಲಿಟರಿ ಹಸ್ತಕ್ಷೇಪವನ್ನು ಸಂಸತ್ತಿನಲ್ಲಿ ಎಲ್ಲ ವಿಭಾಗಗಳು ಖಂಡಿಸಿವೆ. ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ನಿರ್ಣಯದಲ್ಲಿ ಗೈರು ಹಾಜರಾಗಿ ಯುಪಿಎ ಸರಕಾರ ಸರಿಯಾದ ಕೆಲಸ ಮಾಡಿದೆ. ಆದರೆ ಅದಷ್ಟೇ ಸಾಲದು. ರಶ್ಯ, ಚೀನ, ಜರ್ಮನಿ ಮತ್ತು ಬ್ರೆಝಿಲ್ ಈ ಇತರ ನಾಲ್ಕು ದೇಶಗಳ ಜತೆಗೂಡಿ ಭದ್ರತಾ ಸಮಿತಿಯು ನಿರ್ಣಯವನ್ನು ಹೇಗೆ ಜಾರಿ ಮಾಡಲಾಗುತ್ತಿದೆ ಎಂಬುದರ ತುರ್ತು ಪರಾಮರ್ಶೆ ನಡೆಸುವಂತೆ ಆಗ್ರಹಿಸಬೇಕು. ವಿಶ್ವಸಂಸ್ಥೆಯ ಆದೇಶವನ್ನು ಅಮೆರಿಕ ಮತ್ತು ನಾಟೊ ಹೀಗೆ ಹೈಜಾಕ್ ಮಾಡಲು ಸಾಧ್ಯವಾಗಬಾರದು. ○

(ಏಪ್ರಿಲ್ 03, 2011 'ಪೀಪಲ್ಸ್ ಡೆಮಾಕ್ರಸಿ' ವಾರಪತ್ರಿಕೆಯ ಸಂಪಾದಕೀಯ ಆಧರಿಸಿ)

ಬೇಕಾಗಿದ್ದಾರೆ

ದುಡಿಯುವ ಜನರ ಪ್ರಾಣಮಿತ್ರ 'ಜನಶಕ್ತಿ' ಕನ್ನಡ ವಾರಪತ್ರಿಕೆಯಲ್ಲಿ ಕೆಲಸ ಮಾಡಲು ಆಸಕ್ತಿಯುಳ್ಳ ಸಂಗಾತಿಗಳು ಬೇಕಾಗಿದ್ದಾರೆ.

ಪತ್ರಿಕೆಗೆ ವರದಿಗಾರಿಕೆ, ಛಾಯಾಗ್ರಹಣಗಳಿಗೆ ಮತ್ತು ಪತ್ರಿಕೆಯ ವಿತರಣೆ ಸೇರಿದಂತೆ ಆಡಳಿತಾತ್ಮಕ ನಿರ್ವಹಣೆ ಹಾಗೂ ಟಿಡಿಪಿ, ಡಿಸೈನಿಂಗ್ ಇತ್ಯಾದಿಗಳನ್ನು ಮಾಡಬಲ್ಲ ಸಂಗಾತಿಗಳು ಅಗತ್ಯವಾಗಿದ್ದಾರೆ. ಅನುಭವ - ಇದ್ದರೆ ಒಳ್ಳೆಯದು. ಇಲ್ಲವಾದರೂ ಕಲಿಯುವ ಆಸಕ್ತಿ ಮತ್ತು ಜನಪರ ಚಳುವಳಿಗೆ ಬದ್ಧತೆ ಕಡ್ಡಾಯ.

ವಿವರಗಳಿಗೆ ಸಂಪರ್ಕಿಸಿ : ಆರ್.ರಾಮಕೃಷ್ಣ - 9448505789
ಎಸ್.ವೈ.ಗುರುಶಾಂತ್ - 9448230114

ಜನಶಕ್ತಿ ಚಂದಾದಾರರಾಗಿ

ಬಿಡಿ ಪ್ರತಿ	:	ರೂ.5.00
ವಾರ್ಷಿಕ ಚಂದಾ	:	ರೂ.250.00
ದ್ವೈವಾರ್ಷಿಕ ಚಂದಾ	:	ರೂ.500.00

ವಿ.ಸೂ : ಅವಧಿ ಮುಗಿಯುತ್ತಿರುವ ಚಂದಾದಾರರು ತಮ್ಮ ಚಂದಾವನ್ನು ಪರಿಶೀಲಿಸಿ, ನವೀಕರಿಸಬೇಕಾಗಿ ವಿನಂತಿ.

ವಿಕಿಲೀಕ್ಸ್ : ಮಾಹಿತಿ ಸ್ಫೋಟ

ಅಮೇರಿಕ ಪದತಡಿಗೆ ಭಾರತ

'ವಿಕಿಲೀಕ್ಸ್'ನ ಮಾಹಿತಿ ಸ್ಫೋಟದಲ್ಲಿ ಬಯಲಾದ ಸಂಗತಿಗಳು ಆಘಾತಕಾರಿಯಾಗಿದೆ. ದೇಶದ ಆಳುವ ಜನರು ದೇಶದ ಸಾರ್ವಭೌಮತೆಯೊಂದಿಗೆ ರಾಜಿ ಮಾಡಿಕೊಂಡುಬಿಟ್ಟಿದ್ದಾರೆ.

■ ಪ್ರಕಾಶ್ ಕಾರಟ್


ಭಾರತದಿಂದ ಕಳಿಸಲಾದ ಅಮೇರಿಕದ ರಾಜತಾಂತ್ರಿಕ ತಂತಿ ಸಂದೇಶಗಳ ರಹಸ್ಯ ದಾಖಲೆಗಳು ಬಯಲಾಗಿ ಪ್ರಕಟಗೊಂಡಿರುವುದು ಗಂಭೀರ ಪರಿಣಾಮವನ್ನೇ ಬೀರಲಿದೆ. ಏಕಕಾಲಕ್ಕೆ ಅದು ಯುಪಿಎ ಸರ್ಕಾರದ ಅವಧಿಯ ಹಾಗೂ ಹಿಂದಿನ ಎನ್.ಡಿ.ಎ ಸರ್ಕಾರದ ಅವಧಿಯ ಅಮೇರಿಕ-ಭಾರತ ಸಂಬಂಧದ ಸ್ವರೂಪವನ್ನು ನಗ್ನಗೊಳಿಸಿದೆ.

'ವಿಕಿಲಿಕ್ಸ್' ನ ಮೂಲಕ 'ದಿ ಹಿಂದೂ' ಪತ್ರಿಕೆಯು ಪಡೆದುಕೊಂಡಿರುವ ಈ ಅಮೇರಿಕದ ರಾಯಭಾರ ಕಛೇರಿಯ ತಂತಿ ಸಂದೇಶ (ಕೇಬಲ್) ಪ್ರಕಟಣೆ ಹಾಗೂ ವಿಶ್ಲೇಷಣೆ ಇನ್ನೂ ನಡೆಯುತ್ತಿದೆ. ಆದರೆ ಇಲ್ಲಿಯವರೆಗೆ ಬಯಲು ಮಾಡಲಾಗಿರುವ ಅಂಶಗಳು ಬಹಳ ಆತಂಕಕಾರಿಯಾದ ಚಿತ್ರಣವನ್ನು ಕೊಡುತ್ತಿವೆ. ಭಾರತದ ವಿದೇಶಾಂಗ ನೀತಿ, ಆರ್ಥಿಕ ನೀತಿಗಳು, ರಣತಂತ್ರ ಅಥವಾ ವ್ಯೂಹಾತ್ಮಕ ವ್ಯವಹಾರಗಳು ಮುಂತಾದ ವಿವಿಧ ವಲಯಗಳಲ್ಲಿ ಅಮೇರಿಕವು ಪ್ರಭಾವಶಾಲಿ ಸ್ಥಾನವನ್ನು ಗಳಿಸಿಕೊಂಡಿದೆ. ಅಮೇರಿಕ ಭಾರತದ ಅಧಿಕಾರಶಾಹಿ, ಮಿಲಿಟರಿ, ಗುಪ್ತಚರ ಮತ್ತು ಭದ್ರತಾ ವ್ಯವಸ್ಥೆಗಳೊಂದಿಗೆ ಸಂಪರ್ಕ ಹೊಂದಿದೆ ಮತ್ತು ಈ ವಲಯಗಳಲ್ಲಿ ವಿವಿಧ ಹಂತಗಳವರೆಗೆ ಒಳನುಸುಳಿದೆ. ಈ ತಂತಿ ಸಂದೇಶಗಳು ಮುಖ್ಯವಾಗಿ 2005 ರಿಂದ 2009ರ ನಡುವಿನ ಅವಧಿಯದಾಗಿದೆ. ಈ ಅವಧಿಯು ಯುಪಿಎ ಸರ್ಕಾರ ಅಮೇರಿಕದೊಂದಿಗೆ ರಣಮೈತ್ರಿಗೆ ಮುಂದಾದ ಅವಧಿಯಾಗಿದೆ.

ವಿದೇಶಾಂಗ ನೀತಿ ತಿರುಗು ಮುರುಗು

ಮನಮೋಹನಸಿಂಗ್ ಸರ್ಕಾರವು ಯುಪಿಎ ಸರ್ಕಾರದ ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿ ಘೋಷಿಸಲಾದ ಸ್ವತಂತ್ರ ವಿದೇಶಾಂಗ ನೀತಿಗೆ ಬದ್ಧತೆ ತೋರದೆ ಅದಕ್ಕೆ ಬೆನ್ನು ತಿರುಗಿಸಿತು ಎಂಬುದು ಚೆನ್ನಾಗಿ ಗೊತ್ತಿರುವ ಸಂಗತಿಯೇ ಆಗಿದೆ. ಸಿಪಿಐ(ಎಂ) ಮತ್ತು ಎಡಪಕ್ಷಗಳು ವಿದೇಶಾಂಗ ನೀತಿಯಲ್ಲಿನ ಈ ತಿರುವು ಮುರುವನ್ನು ಸಾರಾಸಗಟಾಗಿ ವಿರೋಧಿಸಿದ್ದವು. ಬುಷ್ ಆಡಳಿತದ ಉನ್ನತಾಧಿಕಾರಿಗಳು ಹಾಗೂ ಅಮೇರಿಕದ ರಾಯಭಾರ ಕಾರ್ಯಾಲಯ ನಿರಂತರವಾಗಿ ಪ್ರಯತ್ನಿಸಿ ಹೇಗೆ ನೀತಿಗಳಲ್ಲಿನ ಈ ತಿರುಗು ಮುರುಗನ್ನು ಸಾಧಿಸಿಕೊಂಡಿತು ಎಂಬುದು ಈ ಸಂಬಂಧದ ಹಲವಾರು ತಂತಿ ಸಂದೇಶಗಳ ಮೂಲಕ ಬಯಲಾಗಿದೆ. 2005 ರ ಸೆಪ್ಟೆಂಬರ್‌ನಲ್ಲಿ ಅಂತರರಾಷ್ಟ್ರೀಯ ಅಣುಶಕ್ತಿ ಆಯೋಗ (ಐ.ಎ.ಇ.ಎ)ದಲ್ಲಿ ಇರಾನ್ ವಿರುದ್ಧ ಭಾರತ ಮತ ಚಲಾಯಿಸಿದ್ದು ಮನಮೋಹನ್‌ಸಿಂಗ್ ಸರ್ಕಾರವು ಮಾತಿಗೆ ತಪ್ಪಿದ ಒಂದು ಪ್ರಮುಖ ಉದಾಹರಣೆ.

ತಂತಿ ಸಂದೇಶಗಳು ಹೇಗೆ ಅಮೇರಿಕದ ಸರ್ಕಾರ ಈ ತಿರುಗುಮುರುಗನ್ನು ಸಾಧಿಸುವ ಸಲುವಾಗಿ ಗರಿಷ್ಟ ಪ್ರಮಾಣದ ಒತ್ತಡ ಹೇರಿ ಕಸರತ್ತು ನಡೆಸಿತು ಎಂಬುದನ್ನು ವಿವರಿಸುತ್ತವೆ. ಭಾರತವು ಇರಾನ್‌ನ ವಿರುದ್ಧ ಒಂದು ದೃಢವಾದ ನಿಲುವು ತಳೆಯದಿದ್ದರೆ ಅಮೇರಿಕದ ಕಾಂಗ್ರೆಸ್ ಅಣು ಒಪ್ಪಂದದ ಸಂಬಂಧವಾದ ಶಾಸನವನ್ನು ಅಂಗೀಕರಿಸುವುದಿಲ್ಲ ಎಂದು ಹೇಳಲಾಯಿತು. ಸೆಪ್ಟೆಂಬರ್ 13 ರಂದು ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯ ಅಧಿವೇಶನದ ಸಂದರ್ಭದಲ್ಲಿ ನಡೆದ ಬುಷ್- ಮನಮೋಹನ್ ಸಿಂಗ್ ಭೇಟಿಗೆ ಮೊದಲು ಯುಪಿಎ ಸರ್ಕಾರದ ಮೇಲೆ ತೀವ್ರತರದ ಒತ್ತಡವನ್ನು ಹೇರಲಾಯಿತು. ಮನಮೋಹನ್, ಬುಷ್‌ರ ನಡುವಿನ ಈ ಭೇಟಿಯ ನಂತರ ವಿಯನ್ನಾದಲ್ಲಿನ ಭಾರತದ ರಾಯಬಾರಿಗೆ ಐಎಇಎ ಸಭೆಯಲ್ಲಿ 'ಅಮೇರಿಕದ ಜೊತೆಗೆ ಸಾಗುವಂತೆ' ಸೂಚನೆಗಳನ್ನು ಕಳಿಸಲಾಯಿತು. ಮತದಾನದ ನಂತರ ಅಮೇರಿಕದ ರಾಯಬಾರಿಯು ಕಳಿಸಿದ ತಂತಿ ಸಂದೇಶದಲ್ಲಿ 'ಭಾರತ ಅಮೇರಿಕ ಬಾಂಧವ್ಯವನ್ನು ರೂಪಿಸುವ ನಿಟ್ಟಿನಲ್ಲಿ ಯುಪಿಎ ಸರ್ಕಾರದ ಬದ್ಧತೆಯ ಸಂಬಂಧ ಇದು ಅತ್ಯಂತ ಪ್ರಮುಖ ಸಂಕೇತವಾಗಿದೆ.' ಎಂದು ಹೇಳಲಾಗಿದೆ.



ಕೃಪೆ : ದಿ ಹಿಂದೂ

ನೇಪಾಳ, ಶ್ರೀಲಂಕ, ಬಾಂಗ್ಲಾದೇಶ ಮುಂತಾದ ದಕ್ಷಿಣ ಏಷ್ಯಾ ದೇಶಗಳ ವಿಷಯದಲ್ಲಿ ಭಾರತವು ನೀತಿ ನಿರೂಪಣೆಯಲ್ಲಿ ತನ್ನೊಂದಿಗೆ ಸಮನ್ವಯ ಹೊಂದುವಂತೆ ಮಾಡಿಕೊಳ್ಳುವಲ್ಲಿ ಅಮೇರಿಕವು ಯಶಸ್ವಿಯಾಗಿದೆ. ಅಮೇರಿಕದ ಆಶ್ರಯದಲ್ಲಿ ಇಸ್ರೇಲ್ ದೇಶದೊಂದಿಗಿನ ಆಪ್ತ ಸಹಕಾರದ ಕುರಿತು ಸಹ ಇಲ್ಲಿ ಹೇಳಲಾಗಿದೆ.

ರಕ್ಷಣಾ ಸಹಕಾರ

ಗಮನಾರ್ಹವಾಗಿ ಅಮೆರಿಕಾದ ಪ್ರಭಾವ ಹೆಚ್ಚಾಗಿರುವ ಎರಡನೇ ವಲಯವೆಂದರೆ ಸೇನಾ ಹಾಗೂ ಭದ್ರತಾ ಸಹಕಾರ ಕ್ಷೇತ್ರ. ರಕ್ಷಣಾ ಸಹಕಾರ ಕುರಿತ ಚೌಕಟ್ಟು ಒಪ್ಪಂದಕ್ಕೆ ಜೂನ್ 2005 ರಲ್ಲೇ ಯುಪಿಎ ಸರ್ಕಾರವು ಅಮೆರಿಕಾದೊಂದಿಗೆ ಸಹಿಮಾಡಿದೆ. ಆಗ ರಕ್ಷಣಾ ಸಚಿವರಾಗಿದ್ದ ಪ್ರಣಬ್ ಮುಖರ್ಜಿಯವರು ವಾಷಿಂಗ್‌ಟನ್ನಿಗೆ ಹೊರಟು ನಿಂತಾಗ ನೀಡಿದ ಪತ್ರಿಕಾಹೇಳಿಕೆಯಲ್ಲಿ ಅದೊಂದು ಕೇವಲ ಪರಿಶೋಧನಾತ್ಮಕ ಭೇಟಿಯಷ್ಟೆ ಅಂದಿದ್ದರು. ಅಮೆರಿಕಾ ರಾಯಭಾರಿಯಿಂದ ಅಮೆರಿಕಾ ರಕ್ಷಣಾ ಕಾರ್ಯದರ್ಶಿ ಡೊನಾಲ್ಡ್ ರಮ್‌ಫೀಲ್ಡ್‌ರವರಿಗೆ ಕಳಿಸಿದ ತಂತಿ (ಕೇಬಲ್) ಸಂದೇಶವೊಂದು ಆ ಭೇಟಿಯಿಂದ ಅಮೆರಿಕಾದವರು ತಾವು ಏನನ್ನು ಸಾಧಿಸಬಹುದೆಂದು ಹೇಳುವ ಮೂಲಕ ಕಾರ್ಯಸೂಚಿ ಏನಿತ್ತೆಂದು ಸ್ಪಷ್ಟಪಡಿಸಿತ್ತು. ಆ ರಕ್ಷಣಾ ಚೌಕಟ್ಟು ಒಪ್ಪಂದವು ಬೇರೊಂದು ದೇಶದೊಂದಿಗೆ ಭಾರತ ಮಾಡಿಕೊಳ್ಳಬಹುದಾದ ಒಪ್ಪಂದಗಳಲ್ಲಿ ಇಂಥ ಮಾದರಿಯ ಒಪ್ಪಂದವಾಗುತ್ತಿರುವುದು ಇದೇ ಪ್ರಪ್ರಥಮವಾಗಿತ್ತು. ಎರಡು ದೇಶಗಳ ಸೇನಾ ದಳಗಳ ನಡುವಿನ ಎಲ್ಲಾ ರೀತಿಯ ಸಹಕಾರದ ನಕ್ಷೆ ಅದಾಗಿತ್ತು. ಅಮೆರಿಕಾ ಸರ್ಕಾರ ಮತ್ತು ಪೆಂಟಗನ್ ಅಂತಹ ಒಂದು ಒಪ್ಪಂದಕ್ಕಾಗಿ ಎನ್.ಡಿ.ಎ. ಕಾಲದಿಂದಲೂ ಮಾತುಕತೆ ನಡೆಸುತ್ತಿದ್ದರು ಹಾಗೂ ಉಪಾಯ ಹೂಡಿದ್ದರು ಎಂಬ ಸಂಗತಿ ಕೇಬಲ್‌ಗಳಿಂದ ಸಾಬೀತಾಗಿದೆ.

ಭದ್ರತೆ ಮತ್ತು ಬೇಹುಗಾರಿಕೆ ಸಹಕಾರ

ಮುಂಬಯಿ ಭಯೋತ್ಪಾದಕರ ದಾಳಿಯ ನಂತರ ಎರಡೂ ದೇಶಗಳಲ್ಲಿನ ಭದ್ರತಾ ವ್ಯವಸ್ಥೆಗಳ ನಡುವೆ ಅನ್ಯೋನ್ಯ ಸಂಬಂಧ ಹೆಚ್ಚಾಗುತ್ತಾ ಹೋಗಿ ಉನ್ನತ ಮಟ್ಟದ ಸಹಕಾರ ಏರ್ಪಟ್ಟಿತು ಎಂಬುದನ್ನು ಕೇಬಲ್‌ಗಳು ಹೊರಹಾಕಿದವು. ಎಫ್.ಬಿ.ಐ ಮತ್ತು ಸಿ.ಐ.ಎ. ಅಂತಹ ಸಂಸ್ಥೆಗಳೊಂದಿಗೆ ಉನ್ನತ ದರ್ಜೆಯ ಭದ್ರತಾ ಸಹಕಾರ ಹೊಂದಲು ರಾಷ್ಟ್ರೀಯ ಭದ್ರತಾ ಸಲಹೆಗಾರ ಎಂ.ಕೆ. ನಾರಾಯಣನ್ ಉತ್ಸುಕರಾಗಿದ್ದಾರೆ ಎಂದು ಅಮೆರಿಕಾಕ್ಕೆ ಅನಿಸಿತ್ತು. ಬೇಹುಗಾರಿಕೆ ಹಾಗೂ ಭದ್ರತಾ ವ್ಯವಸ್ಥೆಯೊಳಗಡೆ ಅಮೆರಿಕಾದವರು ಹೇಗೆ ನುಸುಳಲು ಸಾಧ್ಯವಾಗಿದೆ ಎಂಬ ನಸುನೋಟವನ್ನು ಕೂಡ ಕೇಬಲ್ ಒದಗಿಸಿದೆ. ಬ್ರಿಟಿಷ್ ಪತ್ರಿಕೆ, ಗಾರ್ಡಿಯನ್ ಮೊದಲು ಪ್ರಕಟಪಡಿಸಿದ ನಲವತ್ತು ಕೇಬಲ್‌ಗಳಲ್ಲಿ ಅನುಚಿತ ಸಂಪರ್ಕಗಳ ಎರಡು ಉದಾಹರಣೆಗಳು ಇವೆ. ಮೊದಲನೆಯದರಲ್ಲಿ, ರಾಷ್ಟ್ರೀಯ ಭದ್ರತಾ ಸಲಹಾ ಮಂಡಳಿಯ ಸದಸ್ಯರೊಬ್ಬರು ಅಮೆರಿಕಾದ ರಾಯಭಾರ ಕಛೇರಿಯ ಸಿಬ್ಬಂದಿಯನ್ನು ಭೇಟಿ ಮಾಡಿ ಭಾರತದಲ್ಲಿರುವ ಇರಾನ್ ಸಂಪರ್ಕಗಳ ಮಾಹಿತಿಯನ್ನು ಒದಗಿಸುವುದಾಗಿ ಮಾತುಕೊಡುತ್ತಾ ಅದಕ್ಕೆ ಬದಲಾಗಿ ತನಗೆ ಅಮೆರಿಕಾ ಭೇಟಿಯ ವ್ಯವಸ್ಥೆ ಮಾಡಬೇಕೆಂದು ಗೋಗರೆಯುತ್ತಾರೆ. ಮತ್ತೊಂದರಲ್ಲಿ, ಅಧಿಕೃತ ಸರಕಾರಿ ಮೂಲಗಳ ಬದಲು ದೆಹಲಿಯ ಪೋಲಿಸ್ ಸೇವೆಯಲ್ಲಿರುವ ಪೋಲಿಸ್ ನೌಕರನೊಬ್ಬನಿಂದ ಭಯೋತ್ಪಾದನೆ ಸಂಭಂಧದ ಮಾಹಿತಿಗಳನ್ನು ತನಗೆ ನೇರವಾಗಿ ಪಡೆಯಲು ಸಾಧ್ಯವಾಗಿದೆ ಎಂದು ಅಮೆರಿಕಾ ರಾಯಭಾರ ಕಛೇರಿ ವರದಿ ಮಾಡಿತ್ತು.

ಪ್ರಸ್ತುತ ಪ್ರಕಟವಾದ ತಂತಿ ಸಂದೇಶ (ಕೇಬಲ್ ಗುಚ್ಛ) ಪುಂಜದಲ್ಲಿ, 2006ರ ಸಂಪುಟ ವಿಸ್ತರಣೆಯ ಕುರಿತು ಒಂದು ವರದಿ ಇದೆ. ಸರ್ಕಾರಿ ಒಡೆತನದಲ್ಲಿರುವ ಭಾರತೀಯ ಅನಿಲ ಪ್ರಾಧಿಕಾರ ನಿಯಮಿತ(ಜಿಐಎಎಲ್- ಗೈಲ್)ದಲ್ಲಿ ಕೆಲಸಮಾಡುವ 'ನಮ್ಮ ಸಂಪರ್ಕ' (ಹೆಸರನ್ನು ಮುಚ್ಚಿಡಲಾಗಿದೆ) ದ ಬಗ್ಗೆ ಒಂದು ಉಲ್ಲೇಖವಿದೆ. ಕೇವಲ ಮಾಧ್ಯಮಗಳಿಂದ ಮಾತ್ರವಲ್ಲ, ಹಲವಾರು ಸರ್ಕಾರಿ ಸಚಿವಾಲಯಗಳ ಮೂಲಗಳಿಂದ ಕೂಡ ಮಾಹಿತಿಗಳನ್ನು ಪಡೆಯಲಾಗಿದೆ ಎಂಬುದನ್ನು ಕೇಬಲ್‌ಗಳು ತೋರಿಸಿವೆ.

ಒಳನುಸುಳುವಿಕೆ ಮತ್ತು ಬೇಹುಗಾರಿಕೆ

ಎರಡು ದೇಶಗಳ ಬೇಹುಗಾರಿಕಾ ಹಾಗೂ ಭದ್ರತಾ ಇಲಾಖೆಗಳ ನಡುವಿನ ಸಹಯೋಗ ಈಗಾಗಲೇ ಅಮೆರಿಕನ್ನರ ನುಸುಳುವಿಕೆಗೆ ಕಾರಣವಾಗಿದೆ. ಗೂಢಚರ್ಯೆಯ ಎರಡು ದೃಷ್ಟಾಂತಗಳು ಹೊರಬಂದಿವೆ. ಎನ್.ಡಿ.ಎ. ಸರ್ಕಾರದ ಅವಧಿಯಲ್ಲಿ ರಬಿಂದರ್ ಸಿಂಗ್ ಎಂಬ ರಾ(ಆರ್.ಎ.ಡಬ್ಲ್ಯೂ) ಅಧಿಕಾರಿಯೊಬ್ಬನನ್ನು ಸಿ.ಐ.ಎ. ನೇಮಿಸಿಕೊಂಡಿತ್ತು. ಯಾವಾಗ ಅವನ ಸಂಪರ್ಕ ಹೊರಬಿತ್ತೋ, ಆಗ ಅವನಿಗೆ ಅಮೆರಿಕಾಕ್ಕೆ ಓಡಿಹೋಗಲು ಸಿ.ಐ.ಎ. ನೆರವು ನೀಡಿತ್ತು. ಯು.ಪಿ.ಎ. ಅಧಿಕಾರದ ಅವಧಿಯಲ್ಲಿ, ರಾಷ್ಟ್ರೀಯ ಭದ್ರತಾ ಪರಿಷತ್ ಕಾರ್ಯಕಾರಿ ಮಂಡಳಿಯಲ್ಲಿರುವ ಸಿಸ್ಟಮ್ ಅನಲಿಸ್ಟ್‌ನೊಬ್ಬನನ್ನು ಸಿ.ಐ.ಎ. ನೇಮಕ ಮಾಡಿಕೊಂಡಿತ್ತು ಎಂಬ ಸಂಗತಿ ಪತ್ತೆಯಾಗಿತ್ತು. ಅಮೆರಿಕಾ-ಭಾರತ ಸೈಬರ್ ಸೆಕ್ಯುರಿಟಿ ಫೋರಮ್ ಮೂಲಕ ಈ ಸಂಪರ್ಕ ಸಾಧಿಸಲಾಗಿತ್ತು. 2005-2008 ರ ಅವಧಿಯಲ್ಲಿ ವಿದೇಶಾಂಗ ನೀತಿ ಹಾಗೂ ಆರ್ಥಿಕ ನೀತಿಗಳಲ್ಲಿ ಅಮೆರಿಕಾ ಪರ ತೀರ್ಮಾನಗಳ ಹೆಚ್ಚಳವಾಗಿತ್ತು ಎಂಬುದನ್ನು ಕೇಬಲ್‌ಗಳು ಸಾಬೀತುಮಾಡಿವೆ. ಅಣು ಒಪ್ಪಂದಕ್ಕೆ ವಿನಿಮಯವಾಗಿ ತನ್ನೆಲ್ಲಾ ಹಿತಾಸಕ್ತಿಗಳನ್ನು ಭಾರತ ಒಪ್ಪಿಕೊಳ್ಳುವಂತೆ ಬಲಪ್ರಯೋಗದ ಎಲ್ಲಾ ಸಾಧನಗಳನ್ನು ಅಮೆರಿಕಾ ಬಳಸಿಕೊಂಡಿತ್ತು.

ಪುಟ 9 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸೆಪ್ಟೆಂಬರ್ 2005 ಮತ್ತು ಫೆಬ್ರವರಿ 2006 ರಲ್ಲಿ ಸತತವಾಗಿ ಎರಡು ಬಾರಿ ಇರಾನಿನ ವಿರುದ್ಧ ಐಎಇಎ (ಅಂತರಾಷ್ಟ್ರೀಯ ಅಣುಶಕ್ತಿ ಆಯೋಗ) ದಲ್ಲಿಮತ ಹಾಕಿದ ನಂತರ, ಪ್ರಧಾನ ಮಂತ್ರಿಯವರ ಅಧ್ಯಕ್ಷತೆಯಲ್ಲಿ 2006 ರಲ್ಲಿ ನಡೆದ ಸಚಿವ ಸಂಪುಟವು ಅಮೆರಿಕಾ ಬಯಸಿದ್ದ ತುರ್ಕ್‌ಮೆನಿಸ್ತಾನ್- ಅಫ್ಘಾನಿಸ್ತಾನ್ -ಪಾಕಿಸ್ತಾನ್-ಭಾರತ ತೈಲಕೊಳವೆ ಯೋಜನೆಗೆ ಸೇರಿಕೊಳ್ಳಲು ನಿರ್ಧರಿಸಿತು. ಅಮೆರಿಕಾದ ಒತ್ತಡಕ್ಕೆ ಮಣಿದು ಇರಾನ್-ಪಾಕಿಸ್ತಾನ-ಭಾರತ ತೈಲಕೊಳವೆ ಯೋಜನೆಯನ್ನು ಹಾಳುಗೆಡಹುವ ಸ್ಪಷ್ಟ ಸೂಚನೆ ಇದಾಗಿತ್ತು. ಈ ಅವಧಿಯಲ್ಲೇ ಸೇನಾ ಜಂಟೀ ಕಾರ್ಯಾಚರಣೆ ಹಾಗೂ ಇನ್ನಿತರ ರಕ್ಷಣಾ ಸಹಯೋಗಗಳು ಗಣನೀಯವಾಗಿ ಹೆಚ್ಚಾದವು. ಸೈನ್ಯ ವ್ಯವಸ್ಥಾಪನಾ ತಂತ್ರ ಒಪ್ಪಂದ(ಲಾಜಿಸ್ಟಿಕ್ಸ್ ಸಪ್ಲೈ ಅಗ್ರಿಮೆಂಟ್)ವೆಂದು ಜನಜನಿತವಾಗಿರುವ ಅಕ್ವಿಸಿಷನ್ ಅಂಡ್ ಕ್ರಾಸ್ ಸರ್ವಿಸಿಂಗ್ ಅಗ್ರಿಮೆಂಟ್‌ಗೆ ಭಾರತದ ಸಹಿ ಪಡೆಯುವಲ್ಲಿ ಅಮೆರಿಕಾಗಿದ್ದ ಆದ್ಯತೆಯನ್ನು ಕೇಬಲ್‌ಗಳು ಸ್ಪಷ್ಟವಾಗಿ ಹೊರಹಾಕಿದ್ದವು. ಇದು ಅಮೆರಿಕಾದ ನೌಕಾ ಹಡಗುಗಳಿಗೆ ಮತ್ತು ವಾಯು ಸೇನಾ ವಿಮಾನಗಳಿಗೆ ಭಾರತದ ನೌಕಾ ನೆಲೆಗಳಲ್ಲಿ ಮತ್ತು ವಿಮಾನ ನಿಲ್ದಾಣಗಳಲ್ಲಿ ತೈಲಪೂರೈಕೆ, ನಿರ್ವಹಣೆ ಮತ್ತು ಇತರೆ ಪೂರೈಕೆಗೆ ಸಹಕಾರಿಯಾಗಲಿದೆ. ಸಚಿವ ಸಂಪುಟವು ಸಿದ್ಧಪಡಿಸಿದ್ದ ಇಂತಹ ಒಪ್ಪಂದದ ಕರಡಿಗೆ ಸಹಿ ಮಾಡುವ ಬಗ್ಗೆ ಎಡ ಪಕ್ಷಗಳು ಕಟುವಿರೋಧ ವ್ಯಕ್ತಪಡಿಸಿದ್ದವು.

ರಾಜಕೀಯ ಪ್ರಭಾವ

2006 ರಲ್ಲಿ ಆದ ಸಂಪುಟ ವಿಸ್ತರಣೆಗೆ ಸಂಬಂಧಪಟ್ಟಂತೆ ಕೇಬಲ್ ಹೊರತಂದ ಮತ್ತೊಂದು ಮಾಹಿತಿಯು ಅಮೆರಿಕಾವು ಹೊಂದಿರುವ ರಾಜಕೀಯ ಪ್ರಭಾವವನ್ನು ಸಂಪೂರ್ಣವಾಗಿ ಬಹಿರಂಗಗೊಳಿಸಿದೆ. 'ಸಚಿವರಿಗೆ ಖಾತೆ ಮರುಹಂಚಿಕೆ ಮಾಡಿರುವುದರ ಒಟ್ಟು ಪರಿಣಾಮವೇನೆಂದರೆ, ಸಚಿವ ಸಂಪುಟವು ಭಾರತದಲ್ಲಿನ (ಇರಾನಿನಲ್ಲಿನ) ಅಮೆರಿಕಾದ ಉದ್ದೇಶ ಗಳಿಗೆ ಅತ್ಯುತ್ತಮವಾದಂತಾಗಿದೆ ' ಎಂಬ ಸಚಿವರ ಖಾತೆ ಮರುಹಂಚಿಕೆ ಬಗ್ಗೆ ಅಮೆರಿಕಾ ರಾಯಭಾರಿಗಳು ಮಾಡಿದ ಅಂದಾಜು ಹೇಳುತ್ತದೆ. ಅಮೆರಿಕಾ ಪರ ಗಟ್ಟಿ ನಿಲುವು ಹೊಂದಿರುವ ಐದು ಸಚಿವರುಗಳನ್ನು-ಮುರಳಿ ದೇವ್ರ, ಕಪಿಲ್ ಸಿಬಲ್, ಆನಂದ್ ಶರ್ಮಾ, ಅಶ್ವಿನಿ ಕುಮಾರ್ ಮತ್ತು ಸೈಫುದ್ದಿನ್ ಸೋಜ್-ನೇಮಕ ಮಾಡಿಕೊಳ್ಳಲಾಗಿದೆ ಎಂದು ಆ ವರದಿ ಟಿಪ್ಪಣಿ ಮಾಡಿದೆ. 'ಈ ಖಾತೆ ಮರುಹಂಚಿಕೆಯಿಂದ ಎಡಪಕ್ಷಗಳು ಕೋಪೋದ್ರಿಕ್ತರಾಗುತ್ತಾರೆ, ಎಂದು ಸರಿಯಾಗಿಯೇ ಅಂದಾಜು ಮಾಡಿರುವ ಆ ವರದಿಯು ಮುಂದುವರಿದು ಈ ಖಾತೆ ಮರುಹಂಚಿಕೆಯು ಅಮೆರಿಕಾ ಪರವಾಗಿದೆ ಎಂದು ಪರಿಗಣಿಸುವ ಎಡಪಕ್ಷಗಳು ಕಾಂಗ್ರೆಸ್ ಪಕ್ಷದಿಂದ ದೂರಸರಿದು ಯುಪಿಎ ಸರ್ಕಾರದ ಆರ್ಥಿಕ ಉದಾರೀಕರಣ ಮತ್ತು ವಿದೇಶಾಂಗ ನೀತಿಗಳನ್ನು ದೃಢವಾಗಿ ಹಿಮ್ಮೆಟ್ಟಿಸಲು ಮುಂದಾಗುತ್ತವೆ ಹಾಗೂ ಇದು ಮುಂದಿನ ದಿನಗಳಲ್ಲಿ ತೀವ್ರ ರಾಜಕೀಯ ತಿಕ್ಕಾಟಕ್ಕೆ ದಾರಿ ಮಾಡಿಕೊಡುತ್ತದೆ' ಎಂದು ಹೇಳಿದೆ. ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಖಾತೆಯಿಂದ ಮಣಿ ಶಂಕರ್ ಅಯ್ಯರನ್ನು ಕಿತ್ತುಹಾಕಿ ಮುರಳಿ ದೇವ್ರರನ್ನು ನೇಮಿಸಿದ ಬಗ್ಗೆ ತನ್ನ ಸಂತೋಷವನ್ನು ಅಮೆರಿಕಾ ರಾಯಭಾರಿಗೆ ತಡೆಹಿಡಿಯಲಾಗಲಿಲ್ಲ. ಇಂಧನ ಕ್ಷೇತ್ರದಲ್ಲಿನ ಭಾರತ-ಪಾಕಿಸ್ತಾನ-ಇರಾನ್ ತೈಲಕೊಳವೆ ಯೋಜನೆಯ ಬಗ್ಗೆ ಅವರು ಹೊಂದಿದ್ದ ಕಾಳಜಿ ಮತ್ತು ಅವರ ಚೀನಾ ಭೇಟಿ ಬಗ್ಗೆ ಅಯ್ಯರ್‌ರವರನ್ನು ಅಪಹಾಸ್ಯಕ್ಕೀಡು ಮಾಡಲಾಯಿತು. ಮುರಳಿ ದೇವ್ರರವರ ಅಮೆರಿಕಾ ಪರ ನೀತಿ ಮತ್ತು ದೊಡ್ಡ ಉದ್ದಿಮೆದಾರರ ಜತೆ ಅವರು ಹೊಂದಿದ್ದ ನಿಕಟ ಸಂಬಂಧದಿಂದಾಗಿ ಅವರನ್ನು ಹೊಗಳಿದರು.

ಮನಮೋಹನ್ ಸಿಂಗ್ ಆಳ್ವಿಕೆಯಡಿಯಲ್ಲಿ ಸರ್ಕಾರದ ಪ್ರತಿಯೊಂದು ಕ್ಷೇತ್ರದಲ್ಲೂ ಅಮೆರಿಕಾದವರು ನುಸುಳಲು ಹಾಗೂ ಪ್ರಭಾವ ಬೀರಲು ಮುಕ್ತ ಅವಕಾಶ ಒದಗಿಸಲಾಯಿತು. ಇಂತಹ ಅವಕಾಶಗಳನ್ನು ಬಳಸಿಕೊಂಡ ಅಮೆರಿಕಾದವರನ್ನು ದೂರಿ ಏನೂ ಪ್ರಯೋಜನವಿಲ್ಲ. ಯುಪಿಎ ಸರ್ಕಾರವೇ 2007 ರಲ್ಲಿ ಐ.ಎ.ಎಸ್. ಅಧಿಕಾರಿಗಳಿಗೆ ಅಮೆರಿಕಾದ ಹಲವಾರು ವಿಶ್ವವಿದ್ಯಾನಿಲಯಗಳಲ್ಲಿ ತರಬೇತಿ ನೀಡಬೇಕೆಂಬ ತೀರ್ಮಾನ ಮಾಡಿತು. ಅವರು ಸಾರ್ವಜನಿಕ ಸೇವೆಯಲ್ಲಿರಲಿ ಅಥವಾ ಮಿಲಿಟರಿ ಸೇವೆಯಲ್ಲಿರಲಿ ನಾವು ಮುಂದುವರಿಯಬೇಕೆಂದರೆ ಅಮೆರಿಕಾದಲ್ಲಿ ತರಬೇತಿ ಹೊಂದಲೇಬೇಕಿದೆ.

ರಾಜಕೀಯ ಭ್ರಷ್ಟಾಚಾರ

ಭಾರತದ ರಾಜಕೀಯ ವ್ಯವಸ್ಥೆಯಲ್ಲಿ ಉನ್ನತ ಮಟ್ಟದ ಭ್ರಷ್ಟಾಚಾರ ಅಸ್ತಿತ್ವದಲ್ಲಿದೆ ಎಂದು ಅಮೆರಿಕಾದವರು ತೀವ್ರ ಗಮನಹರಿಸುತ್ತಿದ್ದಾರೆ ಎಂಬ ಅಂಶವನ್ನು ಕೇಬಲ್ ತೋರಿಸಿದೆ. ಜುಲೈ 2008ರಲ್ಲಿ ವಿಶ್ವಾಸ ಮತ ಯಾಚನೆ ಸಂದರ್ಭದಲ್ಲಿ ವಿರೋಧ ಪಕ್ಷದ ಸಂಸದರನ್ನು ಖರೀದಿಸಲು ದೊಡ್ಡ ಮೊತ್ತದ ಹಣ ಬಳಸಲಾಯಿತು ಎಂಬ ಕೇಬಲ್‌ನ ಮಾಹಿತಿ ಸಹಜವಾಗಿಯೇ ಗದ್ದಲಕ್ಕೆ ಕಾರಣವಾಯಿತು. ಮತದಾನದಲ್ಲಿ ಮನಮೋಹನ್ ಸಿಂಗ್ ಸರ್ಕಾರ ಏನಾದರೂ ಮಾಡಿ ಗೆಲ್ಲಲೇಬೇಕೆಂಬುದು ಅಮೆರಿಕಾದ ಬಯಕೆಯಾಗಿತ್ತು. ಏಕೆಂದರೆ ಆಗ ಮಾತ್ರ ಅಣು ಒಪ್ಪಂದ ಜಾರಿಯಾಗುವುದು ಎಂದು. ಅಕ್ರಮವೋ ಸಕ್ರಮವೋ ಯಾವ ವಿಧಾನವಾದರೂ ಅಮೆರಿಕಾಗೆ ಒಪ್ಪಿಗೆ ಇತ್ತು. ಚೆನ್ನೈನ ಅಮೆರಿಕಾ ದೂತಾವಾಸವು ತನ್ನ ಕೇಬಲ್ ಸಂದೇಶದಲ್ಲಿ, ತಿರುಮಂಗಳಮ್ ಮರು ಚುನಾವಣೆಯಲ್ಲಿ ಮತ್ತು ಮಧುರೈ ಲೋಕಸಭಾ ಚುನಾವಣೆಯಲ್ಲಿ ಡಿಎಂಕೆಯು ಮತದಾರರಿಗೆ ಹೇಗೆ ಹಣ ಹಂಚುತ್ತದೆ ಎಂಬ ಸ್ಪಷ್ಟ ಹಾಗೂ ಕರಾರುವಾಕ್ಕಾದ ಚಿತ್ರಣವನ್ನು ನೀಡುತ್ತದೆ. ಇಂತಹ

ಪುಟ 15 ಕ್ಕೆ

ಪಿಂಚಣಿ ಹಣ ಷೇರುಪೇಟೆಗೆ

ಸಮಾವೇಶದಲ್ಲಿ ವ್ಯಾಪಕ ಖಂಡನೆ



ಅಂಗನವಾಡಿ ನೌಕರರಿಗೆ ನೆಮ್ಮದಿ ನೀಡದ, ಶೇರು ಮಾರುಕಟ್ಟೆ ಆಧಾರಿತ, ಅಭದ್ರತೆಯ ಹೊಸ ಪಿಂಚಣಿ ಯೋಜನೆ ವಿರೋಧಿಸಿ ರಾಜ್ಯ ಮಟ್ಟದ ಸಮಾವೇಶ ಮಾರ್ಚ್ 30, 2011ರಂದು ಬೆಂಗಳೂರಿನ ಡಾ।ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆಯಿತು.

ಈ ಸಮಾವೇಶದ ಉದ್ಘಾಟನೆಯನ್ನು ನಾಡೋಜ, ಡಾ.ಬರಗೂರು ರಾಮಚಂದ್ರಪ್ಪನವರು ಉದ್ಘಾಟನೆ ಮಾಡಿ ಅಂಗನವಾಡಿ ಕಾರ್ಯಕರ್ತೆಯರ ಹಣವನ್ನು ಅಡ ಇರಿಸಿಕೊಳ್ಳುವಷ್ಟು ಕೀಳುಮಟ್ಟಕ್ಕೆ ಸರ್ಕಾರ ಇಳಿದಿದೆ ಎಂದು ಚಾಟಿ ಬೀಸಿದರು.

ನೂತನ ಪಿಂಚಣಿ ಯೋಜನೆ ವಿರೋಧಿಸಿ ಅಂಗನವಾಡಿ ಕಾರ್ಯಕರ್ತರು ಅಂಬೇಡ್ಕರ್ ಭವನದಲ್ಲಿ ಬುಧವಾರ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಸಮಾವೇಶದಲ್ಲಿ ಮಾತನಾಡಿದರು.

ಅಂಗನವಾಡಿ ಕಾರ್ಯಕರ್ತರ ಹಣವನ್ನು ಷೇರುಪೇಟೆಯಲ್ಲಿ ತೊಡಗಿಸಿ ಪಿಂಚಣಿ ನೀಡಲು ತೀರ್ಮಾನಿಸಿ ಸರ್ಕಾರ ದಳ್ಳಾಳಿ ಕೆಲಸಕ್ಕೆ ಇಳಿದಿದೆ ಎಂದು ಕಿಡಿಕಾರಿದ ಅವರು, ಒಂದು ವೇಳೆ ಷೇರುಪೇಟೆಯಲ್ಲಿ ಹಣದ ಸೂಚ್ಯಂಕ ಕಡಿಮೆಯಾದರೆ, ಕಾರ್ಯಕರ್ತರ ಹಣಕ್ಕೆ ಮೋಸ ಆಗುತ್ತದೆ. ಈ ವಿವೇಚನೆ ಇಲ್ಲದೆ ಸರ್ಕಾರ ಇಂಥ ಅವೈಜ್ಞಾನಿಕ ನಿರ್ಧಾರ ಕೈಗೊಂಡಿರುವುದು ಯಾಕೆ? ಎಂದೂ ಅವರು ಪ್ರಶ್ನಿಸಿದರು.

ಸ್ತ್ರೀ ವಿರೋಧಿ ಕ್ರಮ

ಷೇರುಪೇಟೆಯಲ್ಲಿ ಹಣವನ್ನು ತೊಡಗಿಸಲೇಬೇಕು. ಇಲ್ಲವಾದರೆ ಕೆಲಸ ಬಿಟ್ಟು ಹೋಗಿ ಎನ್ನುವ ಸಂದೇಶ ರವಾನಿಸುವ ಮೂಲಕ ಸರ್ಕಾರ ಸ್ತ್ರೀ ವಿರೋಧಿ ಕ್ರಮ ಪಾಲಿಸುತ್ತಿದೆ. ನೌಕರರ ಸೇವೆಯನ್ನು ಕಾಯಂಗೊಳಿಸುವ ಬದಲಿಗೆ, ಇವರ ಹೋರಾಟವನ್ನು ವಿಫಲ ಮಾಡಲು ಸಂಚು ನಡೆಸುತ್ತಿದೆ ಎಂದು ಬರಗೂರು ಕಟುವಾಗಿ ಟೀಕಿಸಿದರು.

ದೇವರಿಗೇ ಬಿಟ್ಟಿದ್ದಾರೆ!

ವಿಧಾನಸೌಧದ ಎದುರು 'ಸರ್ಕಾರಿ ಕೆಲಸ ದೇವರ ಕೆಲಸ' ಎಂಬ ಬರಹವಿದೆ. ಹೀಗಾಗಿ ಸರ್ಕಾರದ ಎಲ್ಲಾ ಕೆಲಸಗಳನ್ನು ರಾಜಕಾರಣಿಗಳು ದೇವರಿಗೇ ಬಿಟ್ಟು ದೇವರ ಕೆಲಸಗಳನ್ನು ಮಾಡಲು ಮಠ-ಮಂದಿರಗಳನ್ನು ಎಡತಾಕುತ್ತಿದ್ದಾರೆ ಎಂದು ವ್ಯಂಗ್ಯವಾಡಿದರು.


ಸಿ.ಎಂ. ಮನೆ ಮುಂದೆ

ಪುಟ 15 ಕ್ಕೆ

ಸರ್ಕಾರದ ನಿರ್ಧಾರ ಹಿಮ್ಮೆಟ್ಟಿಸಿದ ಅಂಗನವಾಡಿ ಬಾಯಿಯರು

ಮಾರ್ಚ್ 31: ಯಶಸ್ವಿ ಹೋರಾಟ



ನೂತನ ಪಿಂಚಣಿ ನೀತಿ ವಿರೋಧಿಸಿ, 60 ವರ್ಷ ನಿವೃತ್ತಿಯಾಗುವವರಿಗೆ 1 ಲಕ್ಷ ಮತ್ತು 50 ಸಾವಿರ ಪರಿಹಾರ ಮತ್ತು ಅವರಿಗೂ ಮಾಸಿಕ ನಿವೃತ್ತಿ ವೇತನ, 2011, ಫೆಬ್ರವರಿ 1 ರಿಂದ ಅಂಗನವಾಡಿ ನೌಕರರು ಪ್ರತಿಭಟನೆ ಮಾಡಬಾರದು, ಮಾಡಿದರೆ ಗೌರವಧನ ಕಡಿತ ಹಾಗೂ ಸೇವೆಯಿಂದ ವಜಾ ಎಂಬ ಸುತ್ತೋಲೆಯನ್ನು ವಾಪಾಸ್ಸು ಪಡೆಯಬೇಕೆಂದೂ ಒತ್ತಾಯಿಸಿ ಒಂದು ವಾರದಲ್ಲಿ ನಿರ್ಣಯ ಮಾಡಿ 31ರಂದು ಹೋರಾಟಕ್ಕೆ ಕರೆಯನ್ನು ಕೊಡಲಾಗಿತ್ತು. ಈ ಕರೆಯ ಮೇರೆ 4 ಸಾವಿರದಷ್ಟು ಅಂಗನವಾಡಿ ನೌಕರರು ಮುಖ್ಯಮಂತ್ರಿಗಳ ಮನೆಯ ಮುಂದೆ ಜಮಾಯಿಸಿದ್ದರು.

ಮುಖ್ಯಮಂತ್ರಿಗಳ ಮನೆಯ ಮುಂದೆ ಸರ್ಪಗಾವಲಿದ್ದ ಪೋಲೀಸರಿಗೆ ಚಳ್ಳೇ ಹಣ್ಣು ತಿನ್ನಿಸಿ ಅಂಗನವಾಡಿ ನೌಕರರು ಬಹಳಷ್ಟು ಶ್ರಮಪಟ್ಟು ಅಲ್ಲಿಗೆ 20 ಗುಂಪುಗಳಾಗಿ ಹರಿದು ಬಂದರು. ಮುಖ್ಯಮಂತ್ರಿಗಳ ಮನೆಗೆ ನುಗ್ಗಲು ಯತ್ನಿಸಿದಾಗ ಪೋಲೀಸರು ಅಡ್ಡಗಟ್ಟಿದರು. ಅದನ್ನು ಲೆಕ್ಕಿಸದೇ ನುಗ್ಗಿದರು. "ತುಂಬಾ ಟ್ರಾಫಿಕ್ ಇರುವ ರೇಸ್ ಕೋರ್ಸ್ ರಸ್ತೆಯನ್ನು ಸಂಪೂರ್ಣವಾಗಿ 1 ಗಂಟೆಗೂ ಹೆಚ್ಚು ಕಾಲ ಜಾಮ್ ಆಗಿತ್ತು". ನಂತರ ಪೋಲೀಸರ ಸಂಪೂರ್ಣ ವಿನಂತಿ ಮೇರೆಗೆ ಒಂದು ಸಿಂಗಲ್ ರಸ್ತೆಯಿಂದ ಮಾತ್ರ ವಾಹನಗಳು ಚಲಿಸಲಿಕ್ಕೆ ಅನುವು ಮಾಡಿ ಕೊಡಲಾಯಿತು. ಬೆಳಿಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಸಂಪೂರ್ಣ ರಸ್ತೆಯ ಮೇಲೆ ಉರಿ ಬಿಸಿಲಲ್ಲಿ ನೌಕರರು ಕುಳಿತಿದ್ದರು. ಬೇಡಿಕೆ ಈಡೇರಿಸುವವರೆಗೂ ಹೋರಾಟ ನಿಲ್ಲಿಸಿದರು. ನಿರ್ಧಾರ ಮಾಡಿದರು. ಎಲ್ಲಾ ರೀತಿಯ ಪ್ರತಿಭಟನಾ ಪ್ರಯತ್ನಕ್ಕೆ ಕೊನೆಗೂ ಮಣಿದ ಇಲಾಖಾ ಸಚಿವಾದ ಸಿ.ಸಿ.ಪಾಟೀಲ ಆಗಮಿಸಿದರು. "ಮುಷ್ಕರ ಹೂಡುವುದು ಉದ್ಧಟತನದ ವರ್ತನೆ" ಎಂಬ ಸುತ್ತೋಲೆ ವಾಪಾಸ್ ಪಡೆಯುವುದಾಗಿಯೂ, ಎನ್‌ಪಿಎಸ್ ಲೈಟ್‌ಗೆ ಒತ್ತಾಯಿಸುವುದಿಲ್ಲವೆಂದೂ, ತಕ್ಷಣ ನಿವೃತ್ತರಾಗುವವರಿಗೆ ಸಂಧ್ಯಾ ಸುರಕ್ಷಾ ಯೋಜನೆಯನ್ನು ವಿಶೇಷವಾಗಿ ಅನ್ವಯಿಸಲು ತಾತ್ವಿಕ ಒಪ್ಪಿಗೆ ನೀಡಿದರು. ಏಪ್ರಿಲ್ 12ರಂದು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಲು ಅಧಿಕೃತ ಪತ್ರ ನೀಡಿದರು. ಆ ಬಳಿಕವೇ ರಾತ್ರಿ 7.30ರ ಸುಮಾರಿಗೆ ಹೋರಾಟವನ್ನು ಹಿಂಪಡೆಯಲಾಯಿತು.

ಪರ್ಯಾಯ ತೋರಿದ ಎಡರಂಗಗಳು ಚುನಾವಣಾ ಮುನ್ನಡೆಯಲ್ಲಿ

■ ಸಿಬ್ಬಿಸಿ

ವಿಧಾನಸಭಾ ಚುನಾವಣೆಗಳ ಸುತ್ತ ಒಂದು ಸುತ್ತು

ಐದು ರಾಜ್ಯಗಳ ಚುನಾವಣೆಯ ಕಾವು ಏರತೊಡಗಿದೆ. ಕೇರಳ, ಪಶ್ಚಿಮ ಬಂಗಾಳ, ತಮಿಳುನಾಡು, ಅಸ್ಸಾಂ ಹಾಗೂ ಪಾಂಡಿಚೇರಿ ಚುನಾವಣೆಯನ್ನು ಎದುರಿಸುವಂಥ ರಾಜ್ಯಗಳು. 5.61 ಕೋಟಿ ಮತದಾರರು ಇರುವ ಪಶ್ಚಿಮ ಬಂಗಾಳ, 2.30 ಕೋಟಿ ಮತದಾರರು ಇರುವ ಕೇರಳ, 4.60 ಕೋಟಿ ಮತದಾರರು ಇರುವ ತಮಿಳುನಾಡು... ಹೀಗೆ ಐದು ರಾಜ್ಯಗಳ ಜನರ ಜನಾದೇಶ ರಾಷ್ಟ್ರ ರಾಜಕಾರಣದಲ್ಲಿ ಮಹತ್ವದ ಪ್ರಕ್ರಿಯೆ ಎಂದು ರಾಜಕೀಯ ಪಂಡಿತರು ನಂಬಿದ್ದಾರೆ. ಅದೇನೋ ಇರಲಿ, ಎಡಪಕ್ಷಗಳ ಪಾಲಿಗೆ ಇದೊಂದು ಅಗ್ನಿಪರೀಕ್ಷೆ ಕೂಡ ಆಗಿದೆ.

ಕಳೆದ ಲೋಕಸಭಾ ಚುನಾವಣೆಯಲ್ಲಿ ಪಶ್ಚಿಮ ಬಂಗಾಳ ಮತ್ತು ಕೇರಳದಲ್ಲಿ ಪಕ್ಷ ಸೋಲು ಕಂಡಿತ್ತು. ಪಕ್ಷದ ಇತಿಹಾಸದಲ್ಲಿ ಇದೇ ಮೊದಲ ಬಾರಿ ಅತ್ಯಂತ ಕಡಿಮೆ ಅಂದರೆ 16 ಅಭ್ಯರ್ಥಿಗಳು ಗೆಲುವು ಸಾಧಿಸಿದ್ದರು. ಆ ಬಳಿಕ, ಈ ರಾಜ್ಯಗಳಲ್ಲಿ ನಡೆಯುತ್ತಿರುವ ವಿಧಾನಸಭಾ ಚುನಾವಣೆ ಇದು. ಸಹಜವಾಗಿಯೇ ಸಿಪಿಎಂ ಮತ್ತು ಎಡರಂಗ ಸೋಲುತ್ತದೆ ಎಂಬ ನಿರೀಕ್ಷೆಗಳು ಎಡ ವಿರೋಧಿಗಳಲ್ಲಿ ಹುಟ್ಟಿಕೊಂಡಿದೆ. ಅದರಲ್ಲೂ 1977ರಿಂದ ಸತತ ಏಳು ವಿಧಾನಸಭಾ ಚುನಾವಣೆಗಳಲ್ಲಿ ಗೆಲ್ಲುತ್ತಾ ಬಂದ ಪಶ್ಚಿಮ ಬಂಗಾಳದ ಎಡರಂಗ ಈ ಬಾರಿ ಮಣ್ಣು ಮುಕ್ಕುತ್ತದೆ ಎಂದು ಪ್ರತಿಪಕ್ಷಗಳು ಭಾವಿಸಿವೆ.

ಕೇರಳ ಮತ್ತು ಪಶ್ಚಿಮ ಬಂಗಾಳ ಸಿಪಿಐ(ಎಂ) ಹಾಗೂ ಎಡಶಕ್ತಿಗಳ ಪಾಲಿಗೆ ಎರಡು ಪ್ರಮುಖ ಶಕ್ತಿ ಕೇಂದ್ರಗಳು. ದೇಶದ ದುಡಿಯುವ ವರ್ಗದ ಹೋರಾಟದ ಸ್ಫೂರ್ತಿಯ ಸೆಲೆಗಳು. ಜನಪರ ಹಾಗೂ ಪರ್ಯಾಯ ಆರ್ಥಿಕ ನೀತಿಗಳ ಮೂಲಕ ದೇಶಕ್ಕೆ ಮಾರ್ಗದರ್ಶನ ನೀಡುವ ಸರ್ಕಾರವನ್ನು ಮುನ್ನಡೆಸಿದ ರಾಜ್ಯಗಳಿವು. ಕಾರ್ಮಿಕರು, ರೈತರು ಸೇರಿದಂತೆ ತುಳಿತಕ್ಕೆ ಒಳಗಾದವರಿಗೆ ಪರ್ಯಾಯ ದಾರಿ ತೋರಿಸಿದ ಈ ರಾಜ್ಯಗಳಲ್ಲಿ ಎಡ ಶಕ್ತಿಗಳಿಗೆ ಹಿನ್ನಡೆ ಕಂಡುಬಂದರೆ, ಇಡೀ ದೇಶದ ಎಡ, ಪ್ರಜಾಸತ್ತಾತ್ಮಕ ಜಾತ್ಯತೀತ ಶಕ್ತಿಗಳಿಗೆ ತುಂಬಲಾರದ ನಷ್ಟ. ಹಾಗಾಗಿ ಈ ರಾಜ್ಯಗಳಲ್ಲಿ ಎಡಶಕ್ತಿಗಳ ಮುನ್ನಡೆ, ಗೆಲುವು ಪ್ರಸಕ್ತ ಪರಿಸ್ಥಿತಿಯಲ್ಲಿ ತೀರಾ ಅನಿವಾರ್ಯವಾಗಿದೆ.

ರಾಜ್ಯ	ಒಟ್ಟು ಸ್ಥಾನ	ಸಿಪಿಎಂ ಸ್ಪರ್ಧೆ
ಪಶ್ಚಿಮ ಬಂಗಾಳ	294	210
ಕೇರಳ	140	93
ತಮಿಳುನಾಡು	234	12
ಅಸ್ಸಾಂ	125	17
ಪಾಂಡಿಚೇರಿ	30	1

ಪಶ್ಚಿಮ ಬಂಗಾಳ

2006ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಸಿಪಿಐಎಂ ನೇತೃತ್ವದ ಎಡರಂಗ 294 ಸ್ಥಾನಗಳ ಪೈಕಿ 233ರಲ್ಲಿ ಅಭೂತಪೂರ್ವ ಜಯ ದಾಖಲಿಸಿತ್ತು. ಪ್ರತಿಪಕ್ಷ ತೃಣಮೂಲ 30 ಹಾಗೂ ಕಾಂಗ್ರೆಸ್ 24 ಸ್ಥಾನ ಗಳಿಸಲಷ್ಟೇ ಶಕ್ತವಾಗಿತ್ತು. ಸಿಪಿಐ(ಎಂ) 175 ಸ್ಥಾನಗಳಲ್ಲಿ ಭರ್ಜರಿ ಜಯ ದಾಖಲಿಸಿ ಏಳನೇ ಬಾರಿಗೆ ರಾಜ್ಯದಲ್ಲಿ ಅಧಿಕಾರದ ಗದ್ದುಗೆ ಏರಿತ್ತು.



ಕಳೆದ ಲೋಕಸಭಾ ಚುನಾವಣೆಗಳ ಬಳಿಕ ಕೆಲವು ಚುನಾವಣೆಗಳಲ್ಲಿ ಪಕ್ಷ ಹಿನ್ನಡೆ ಕಂಡಿರಬಹುದು. ಆದರೆ, ಕಳೆದ ಎರಡೂವರೆ ವರ್ಷಗಳಲ್ಲಿ ಪರಿಸ್ಥಿತಿ ಸಾಕಷ್ಟು ಬದಲಾಗಿದೆ. (ಈ ಹಿಂದಿನ ಸಂಚಿಕೆಗಳಲ್ಲಿ ಈ ಬಗ್ಗೆ ವಿವರವಾದ ಮಾಹಿತಿಗಳನ್ನು ನೀಡಲಾಗಿದೆ.) ಮಮತಾ ಬ್ಯಾನರ್ಜಿ ಅವರ ಹಿಂಸಾತ್ಮಕ ವಿಕೃತಿಗಳು, ನಕ್ಸಲೀಯರ ಜೊತೆಗಿನ ಒಡನಾಟ, ಶಾಂತಿ-ನೆಮ್ಮದಿ ಕೆಡಿಸಿದ ಕೃತ್ಯಗಳು ಹಾಗೂ ರಾಜ್ಯದ ಅಭಿವೃದ್ಧಿಗೆ ತಡೆಗೋಡೆಯಾದ ಮಮತಾ ಹಾಗೂ ಅವರ ಗೂಂಡಾ ಪಡೆಗಳ ವಿರುದ್ಧ ಜನ ಟೊಂಕಕಟ್ಟಿ ನಿಂತಿದ್ದಾರೆ.

ಪ್ರಾಮಾಣಿಕ ಯತ್ನ

ದಿನದಿಂದ ದಿನಕ್ಕೆ ಎಡರಂಗಕ್ಕೆ ಹೆಚ್ಚಿನ ಒಲವು ವ್ಯಕ್ತವಾಗುತ್ತಿದೆ. ರಾಜ್ಯದ ಅಭಿವೃದ್ಧಿ, ಜನಪರ ನೀತಿಗಳು, ಕಾರ್ಮಿಕ ವರ್ಗದ ಹಿತ ಕಾಪಾಡುವ ನಿಟ್ಟಿನಲ್ಲಿ ಎಡಶಕ್ತಿಗಳು ಮರಳಿ ಅಧಿಕಾರಕ್ಕೆ ಬರುವ ಅಗತ್ಯವಿದೆ. ಇದನ್ನು ರಾಜ್ಯದ ಜನರೂ ಮನಗುಂಡಿದ್ದಾರೆ. ಈ ಕಾರಣಕ್ಕಾಗಿ, ಎರಡು ವರ್ಷಗಳ ಹಿಂದೆ ಧೈರ್ಯದಿಂದ ಚುನಾವಣೆ ಎದುರಿಸುವ ಮಾತುಗಳನ್ನಾಡುತ್ತಿದ್ದ ಮಮತಾ ಧ್ವನಿಯಲ್ಲಿ ಈಗ ಅಳುಕಿದೆ. ಈ ಬಾರಿ ಸೋತರೆ ಇನ್ನು ಚುನಾವಣೆಯಲ್ಲಿ ಸ್ಪರ್ಧಿಸಲಾರೆ ಎಂಬ ಇಮೋಷನಲ್ ಬ್ಲ್ಯಾಕ್‌ಮೇಲ್‌ಗೂ ಮುಂದಾಗಿದ್ದಾರೆ. ಈ ಮೂಲಕ ಜನರ ಭಾವನೆಗಳನ್ನು ಕೆದಕಿಯಾದರೂ ಅಧಿಕಾರ ಗಳಿಸುವ ಪ್ರಯತ್ನ ನಡೆಸಿದ್ದಾರೆ. ಆದರೆ, ಜನ ಏನೂ ದಡ್ಡರಲ್ಲ. ನಂದಿಗ್ರಾಮ, ಸಿಂಗೂರು, ಜಂಗಲ್ ಮಹಲ್‌ಗಳ ಅಮಾನವೀಯ ಕೃತ್ಯಗಳು, ಹಿಂಸಾಚಾರಗಳನ್ನು ನೋಡಿ ಕಂಗೆಟ್ಟ ಜನ ಮಮತಾರತ್ತ ಮುಖಮಾಡುವ ನಿರ್ಧಾರ ಮಾಡಲಾರರು ಎಂಬುದು ಸ್ಪಷ್ಟವಾಗುತ್ತಿದೆ.

ಇದೇ ವೇಳೆ, ರಾಜ್ಯದ ಎಡರಂಗ ಜನರ ಒಲವು ಗಳಿಸುವ ಎಲ್ಲ ಪ್ರಾಮಾಣಿಕ ಪ್ರಯತ್ನಗಳನ್ನು ಮಾಡಿದೆ. ತಪ್ಪುಗಳನ್ನು ತಿದ್ದಿಕೊಳ್ಳುತ್ತಿದ್ದೇವೆ ಎಂಬ ಬುದ್ಧದೇವ್ ಭಟ್ಟಾಚಾರ್ಯರ ಹೇಳಿಕೆಯೇ ಇದಕ್ಕೆ ಸಾಕ್ಷಿ.

ಹೊಸಬಂಗೆ ಹೆಚ್ಚು ಅವಕಾಶ

ಈಗಾಗಲೇ ಚುನಾವಣಾ ಪ್ರಣಾಳಿಕೆ ಹಾಗೂ ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಲಾಗಿದೆ. 210 ಸ್ಥಾನಗಳಲ್ಲಿ ಈ ಬಾರಿ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸಿರುವ ಸಿಪಿಐಎಂ ಹಿಂದಿನ ಬಾರಿಯಂತೆ ಈ ಬಾರಿಯೂ ಹೊಸ ಮುಖಗಳಿಗೆ ಅವಕಾಶ ಕಲ್ಪಿಸಿದೆ. ಬಂಗಾಳದ ಚುನಾವಣಾ ಅಖಾಡದಲ್ಲಿ ಸಿಪಿಐಎಂ 149 ಹೊಸ ಮುಖಗಳನ್ನು ಪರಿಚಯಿಸಿದೆ. ಕಳೆದ ಬಾರಿ ಹೊಸ ಮುಖಗಳ ಸಂಖ್ಯೆ 134. ಈ ಬಾರಿ 46 ಮಹಿಳಾ ಅಭ್ಯರ್ಥಿಗಳು ಕತ್ತಿ-ಸುತ್ತಿಗೆ-ನಕ್ಷತ್ರದ ಚಿಹ್ನೆಯಡಿ ಜನಾದೇಶವನ್ನು ಪಡೆಯುತ್ತಿದ್ದಾರೆ. 56 ಮುಸ್ಲಿಂ ಅಭ್ಯರ್ಥಿಗಳು. ದಲಿತ, ಹಿಂದುಳಿದ ಅಭ್ಯರ್ಥಿಗಳ ಸಂಖ್ಯೆ 18.

ಸಾಕಷ್ಟು ಮಂದಿ ಅಭ್ಯರ್ಥಿಗಳು ಇನ್ನೂ 30ರ ಹರೆಯ ದಾಟದವರು. 210 ಮಂದಿಯಲ್ಲಿ 60 ಅಭ್ಯರ್ಥಿಗಳು ಇನ್ನೂ 40 ವರ್ಷ ದಾಟದವರು. 25 ವರ್ಷದ ಶತ್ರುಪ್ ಘೋಷ್ ಅತ್ಯಂತ ಕಿರಿಯ ಸಿಪಿಐ(ಎಂ) ಅಭ್ಯರ್ಥಿ. ಭಾರತ ವಿದ್ಯಾರ್ಥಿ ಫೆಡರೇಷನ್‌ನ ಮುಖಂಡನಾಗಿರುವ ಘೋಷ್ ಕೊಲ್ಕತ್ತಾದ ಕಸಬಾ ಕ್ಷೇತ್ರದಿಂದ ಸ್ಪರ್ಧಿಸಿದ್ದಾರೆ. ಈತ ಈಗಿನ್ನೂ ಎಂ.ಎ. ಕಲಿಯುತ್ತಿರುವ ವಿದ್ಯಾರ್ಥಿ ಎನ್ನುವುದು ಗಮನಾರ್ಹ.

27 ವಯಸ್ಸಿನ ಹಿಮಾನಿ ಹಂಸ್ದಾ ಕಣದಲ್ಲಿರುವ ಕಿರಿಯ ಮಹಿಳಾ ಅಭ್ಯರ್ಥಿ. ಪುರುಲಿಯಾ ಜಿಲ್ಲೆಯ ಆದಿವಾಸಿ ಕುಟುಂಬದಿಂದ ಬಂದ ಹಿಮಾನಿ ಹೋರಾಟದ ಮೂಸೆಯಲ್ಲಿ ಅರಳಿದಾಕೆ. ಈಕೆಗೆ ಚುನಾವಣೆ ಹೊಸತೇನಲ್ಲ. ಈಗಾಗಲೇ ಈಕೆ ಸ್ಥಳೀಯ ಪಂಚಾಯತ್‌ನ ಸದಸ್ಯೆ. ಇನ್ನು ಡಿವೈಎಫ್‌ಐನ ರಾಜ್ಯಾಧ್ಯಕ್ಷ ಅಭಾಸ್ ರಾಯ್ ಚೌಧರಿ ಇನ್ನೊಬ್ಬ ಯುವ ಅಭ್ಯರ್ಥಿ. ಬರ್ದ್ವಾನ್ ಜಿಲ್ಲೆಯ ಬಾರಾಬನಿಯಲ್ಲಿ ಚೌಧರಿ ಕಣಕ್ಕಿಳಿದಿದ್ದಾರೆ. ಹೌರಾ ಜಿಲ್ಲೆಯ ಸಂಕ್ರೇಲ್‌ನಿಂದ ಎಸ್‌ಎಫ್‌ಐನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಅನಿರ್ಬಾನ್ ಹಜ್ರಾ ಕಣಕ್ಕಿಳಿದ ಇನ್ನೊಬ್ಬ ಯುವ ಅಭ್ಯರ್ಥಿ.

210 ಸ್ಥಾನಗಳಲ್ಲಿ ಸಿಪಿಐ(ಎಂ) ಸ್ಪರ್ಧಿಸಿದರೆ, ಫಾರ್ವರ್ಡ್ ಬ್ಲಾಕ್ 34 ಕ್ಷೇತ್ರಗಳಲ್ಲಿ ಅಭ್ಯರ್ಥಿಯನ್ನು ಕಣಕ್ಕಿಳಿಸಿದೆ. ಆರ್‌ಎಸ್‌ಪಿ-23, ಸಿಪಿಐ 14, ಸೋಷಿಯಲಿಸ್ಟ್ ಪಾರ್ಟಿ-5, ಡಿಎಸ್‌ಪಿ -2, ಮಾರ್ಕ್ಸಿಸ್ಟ್ ಫಾರ್ವರ್ಡ್ ಬ್ಲಾಕ್-2, ಆರ್‌ಸಿ-2,

ಈ ರಾಜ್ಯಗಳಲ್ಲಿ ಎಡ ಶಕ್ತಿಗಳಿಗೆ ಹಿನ್ನಡೆ ಕಂಡುಬಂದರೆ, ಇಡೀ ದೇಶದ ಎಡ, ಪ್ರಜಾಸತ್ತಾತ್ಮಕ ಜಾತ್ಯತೀತ ಶಕ್ತಿಗಳಿಗೆ ತುಂಬಲಾರದ ನಷ್ಟ. ಹಾಗಾಗಿ ಈ ರಾಜ್ಯಗಳಲ್ಲಿ ಎಡಶಕ್ತಿಗಳ ಮುನ್ನಡೆ, ಗೆಲುವು ಪ್ರಸಕ್ತ ಪರಿಸ್ಥಿತಿಯಲ್ಲಿ ತೀರಾ ಅನಿವಾರ್ಯವಾಗಿದೆ.

ಬಿಬಿಸಿ, ಆರ್‌ಜೆಡಿ ತಲಾ ಒಂದು ಸ್ಥಾನಗಳಲ್ಲಿ ಚುನಾವಣೆ ಎದುರಿಸುತ್ತಿದೆ.

ಭಿನ್ನಮತ ಅತೃಪ್ತಿ

ರಾಜ್ಯಾದ್ಯಂತ ಈಗಾಗಲೇ ಪ್ರಚಾರ ಭರದಿಂದ ಸಾಗಿದೆ. ಜನರೂ ಉತ್ತಮ ರೀತಿಯಲ್ಲಿ ಸ್ಪಂದಿಸಿದ್ದಾರೆ.

ಇನ್ನು ತೃಣಮೂಲ ಮೈತ್ರಿಕೂಟದಲ್ಲಿ, ತೂಗಿ ಅಳೆದು ತೃಣಮೂಲ ಕಾಂಗ್ರೆಸ್ 65 ಸ್ಥಾನಗಳನ್ನು ಕಾಂಗ್ರೆಸ್‌ಗೆ ಬಿಟ್ಟುಕೊಟ್ಟಿದೆ. 229 ಸ್ಥಾನಗಳಲ್ಲಿ ತೃಣಮೂಲದ ಅಭ್ಯರ್ಥಿಗಳು ಕಣದಲ್ಲಿದ್ದಾರೆ. ತೃಣಮೂಲ ನಾಯಕಿ ಮಮತಾ ಸ್ಪರ್ಧಿಸುತ್ತಿಲ್ಲ. ಕೇಂದ್ರ ಸಚಿವ ಪ್ರಣಬ್ ಮುಖರ್ಜಿ ಪುತ್ರ ಅಭಿಜಿತ್ ಮುಖರ್ಜಿ ಈ ಬಾರಿ ಕಾಂಗ್ರೆಸ್‌ನ ಅಭ್ಯರ್ಥಿ. ಆದರೆ, ಅಭ್ಯಥಿಗಳ ಪಟ್ಟಿ ಹೊರಬೀಳುತ್ತಲೇ ಕಾಂಗ್ರೆಸ್‌ನಲ್ಲಿ ಭಿನ್ನಮತ ಭುಗಿಲೆದ್ದಿದೆ. ಅಭ್ಯರ್ಥಿ ಪಟ್ಟಿಯಲ್ಲಿ ಹಲವು ಹಿರಿಯ ನಾಯಕರನ್ನು ಕೈಬಿಟ್ಟಿರುವುದು ದುರದೃಷ್ಟಕರ. ಸ್ಥಾಪಿತ ಹಿತಾಸಕ್ತಿಗಳಿಗೆ ಬಲಿಯಾಗಿ ಪಕ್ಷ 65 ಸ್ಥಾನಗಳಲ್ಲಿ ಸ್ಪರ್ಧೆ ನಡೆಸುತ್ತಿದೆ ಎಂದು ಎಸ್.ಎಸ್. ರಾಯ್, ಸೌರವ್ ಚೌಧರಿ ಮುಂತಾದ ಹಿರಿಯ ನಾಯಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕೇರಳ

ಐದು ವರ್ಷಗಳ ಉತ್ತಮ ಸಾಧನೆ ಬೆನ್ನಿಗಿದೆ. ನೇರ, ದಿಟ್ಟ ನಿರ್ಧಾರದ ಚುರುಕಿನ ಹೋರಾಟಗಾರ ಅಚ್ಯುತಾನಂದನ್ ಮುಖ್ಯಮಂತ್ರಿಯಾಗಿ ದಕ್ಷ, ಜನಪರ ಆಡಳಿತ ನೀಡಿದ್ದಾರೆ. ಶಿಕ್ಷಣ, ಆರೋಗ್ಯ, ಗ್ರಾಮೀಣಾಭಿವೃದ್ಧಿ, ಕೃಷಿ... ಹೀಗೆ ಎಲ್ಲ ರಂಗಗಳಲ್ಲೂ ಅತ್ಯುತ್ತಮ ಸಾಧನೆ. ವಿಶ್ವದ ಬೇರೆ ಬೇರೆ ರಾಷ್ಟ್ರಗಳು ಕೇರಳಕ್ಕೆ ಭೇಟಿ ನೀಡಿ ಅಲ್ಲಿನ ಜನಪರ ಯೋಜನೆಗಳ ಅಧ್ಯಯನ ನಡೆಸಿವೆ. ಹಿಂಸಾಚಾರದ ನಾಡು ಎಂದು ಮಾಧ್ಯಮಗಳು ಎಷ್ಟೆಲ್ಲಾ ಬೊಬ್ಬೆ ಹಾಕಿದರೂ ಅಪರಾಧ ತಡೆಯಲ್ಲಿ ಕಳೆದ ಐದು ವರ್ಷಗಳ ಅಂಕಿ ಸಂಖ್ಯೆಗಳು ಸರ್ಕಾರದ ಸಾಧನೆಗೆ ಕನ್ನಡಿ ಹಿಡಿದಿವೆ. ಕೊಲೆ, ದರೋಡೆ, ಕೊಲೆ ಯತ್ನ, ರಾಜಕೀಯ ಹಿಂಸಾಚಾರ.. ಯಾವುದರಲ್ಲೂ ಒಂದೇ ಒಂದು ವರ್ಷ ಅಪರಾಧ ಪ್ರಕರಣ ಏರಿಲ್ಲ.

ಆದರೆ, ರಾಜ್ಯದ ಕೆಲ ದಶಕಗಳ ಚುನಾವಣಾ ಇತಿಹಾಸದಲ್ಲಿ ಒಮ್ಮೆ ಅಧಿಕಾರಕ್ಕೆ ಬಂದ ಪಕ್ಷ ಮುಂದಿನ ಚುನಾವಣೆಯಲ್ಲಿ ಅಧಿಕಾರಕ್ಕೆ ಬಂದಿಲ್ಲ. ಇದನ್ನೇ ಮುಂದಿಟ್ಟುಕೊಂಡು ಪ್ರತಿಪಕ್ಷಗಳು, ಮಾಧ್ಯಮಗಳು ಕಾಂಗ್ರೆಸ್ ನೇತೃತ್ವದ ಸಂಯುಕ್ತರಂಗ ಜಯ ಗಳಿಸುತ್ತದೆ ಎಂಬ ಭಂಡ ಭವಿಷ್ಯವನ್ನು ನುಡಿದಿವೆ.

ಆದರೆ, ವಾಸ್ತವ ಪರಿಸ್ಥಿತಿಯೇ ಬೇರೆ. ಸಿವಿಸಿ ನೇಮಕ ವಿವಾದ, ಪಾಮೋಲಿನ್ ಹಗರಣದ ತನಿಖೆಗೆ ಕೋರ್ಟ್ ಆದೇಶ ಕಾಂಗ್ರೆಸ್ ಮುಖಕ್ಕೆ

ಪುಟ 11 ಕ್ಕೆ

ಮಸಿ ಬಳಿದಿದೆ. ಪ್ರತಿಪಕ್ಷ ಸಂಯುಕ್ತರಂಗವನ್ನು ತ್ಯರಾಣಾಗಿ ಮಾಡಿದೆ. ಇನ್ನೊಂದೆಡೆ, ಎಡರಂಗದ ನಾಯಕರ ವಿರುದ್ಧದ ಕಪೋಲಕಲ್ಪಿತ ಆರೋಪಗಳ ಕುರಿತು ಸಿಬಿಐ ತನಿಖೆಗೆ ಒಪ್ಪಿಸಲಾಗಿದೆ. ಸ್ವತಃ ಸಿಎಂ ಅಚ್ಯುತಾನಂದನ್ ಪುತ್ರನ ವಿರುದ್ಧ ಆರೋಪ ಬಂದ ಮರುಘಳಿಗೆಯಲ್ಲೇ ಸಿಬಿಐ ತನಿಖೆಗೆ ಸರ್ಕಾರ ಆದೇಶಿಸಿ ದಿಟ್ಟ ನಿರ್ಧಾರ ಕೈಗೊಂಡಿದೆ. ಹೀಗಾಗಿ ರಾಜ್ಯ ಸರ್ಕಾರದ ವಿರುದ್ಧ ಭ್ರಷ್ಟಾಚಾರ ಸೇರಿದಂತೆ ಯಾವುದೇ ಗಂಭೀರ ಆರೋಪ ಮಾಡುವ ಧೈರ್ಯ ಯಾರಿಗೂ ಇಲ್ಲ.

ಕಳೆದ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಎಡರಂಗ ಭರ್ಜರಿ ಜಯ ಗಳಿಸಿತ್ತು. 140 ಸ್ಥಾನಗಳ ಪೈಕಿ 98ರಲ್ಲಿ ಎಲ್‌ಡಿಎಫ್ ಹಾಗೂ 42 ಯುಡಿಎಫ್ ಜಯಗಳಿಸಿತ್ತು. ಸಿಪಿಐಎಂ 61, ಸಿಪಿಐ 17 ಸ್ಥಾನಗಳಲ್ಲಿ ಗೆಲುವು ದಾಖಲಿಸಿದ್ದರೆ, ಕಾಂಗ್ರೆಸ್ 24 ಸ್ಥಾನ ಗಳಿಸಲಷ್ಟೇ ಶಕ್ತವಾಗಿತ್ತು.

140 ಸದಸ್ಯ ಬಲದ ಕೇರಳ ವಿಧಾನಸಭೆಗೆ ಅಖಾಡ ಸಿದ್ಧವಾಗಿದೆ. ಈ ಬಾರಿ ಸಿಪಿಐಎಂ 93 ಕ್ಷೇತ್ರಗಳಲ್ಲಿ ಸ್ಪರ್ಧೆ ನಡೆಸಿದೆ. ಸಿಪಿಐ-27, ಜೆಡಿಎಸ್-5, ಆರ್‌ಎಸ್‌ಪಿ-4, ಎನ್‌ಸಿಪಿ-4, ಕೇರಳ ಕಾಂಗ್ರೆಸ್(ಥಾಮಸ್), -3, ಇಂಡಿಯನ್ ನ್ಯಾಷನಲ್ ಲೀಗ್-3 ಸ್ಥಾನಗಳಲ್ಲಿ ಸ್ಪರ್ಧೆ ನಡೆಸುತ್ತಿದೆ.

ಈ ಬಾರಿಯ ಚುನಾವಣೆಗೆ ಅಭ್ಯರ್ಥಿಗಳ ಪಟ್ಟಿ ಪ್ರಕಟವಾಗಿದ್ದು, ಅಚ್ಯುತಾನಂದನ್ ಮತ್ತು ಎಂಟು ಸಚಿವರಿಗೆ ಮತ್ತೊಮ್ಮೆ ಪಕ್ಷದ ಟಿಕೆಟ್ ನೀಡಲಾಗಿದೆ. ಅಭ್ಯರ್ಥಿಗಳ ಪಟ್ಟಿಯಲ್ಲಿ 30 ಹೊಸ ಮುಖಗಳಿಗೆ ಸ್ಥಾನ ಕಲ್ಪಿಸಲಾಗಿದೆ. ಪಟ್ಟಿಯಲ್ಲಿ 10 ಮಹಿಳೆಯವರಿಗೆ, 7 ಪಕ್ಷೇತರರಿಗೂ ಅವಕಾಶ ನೀಡಲಾಗಿದೆ.

ಡಿವೈಎಫ್‌ಐನ ರಾಷ್ಟ್ರೀಯ ಅಧ್ಯಕ್ಷ ಶ್ರೀರಾಮಕೃಷ್ಣನ್ ಪೊನ್ನಾನಿಯಲ್ಲಿ, ಡಿವೈಎಫ್‌ಐ ರಾಜ್ಯ ಅಧ್ಯಕ್ಷ ಟಿ.ವಿ. ರಾಜೇಶ್ ತಲಿಶ್ಯೇರಿಯಲ್ಲಿ, ಎಸ್‌ಎಫ್‌ಐನ ರಾಜ್ಯ ಉಪಾಧ್ಯಕ್ಷ ಎ.ಎ. ರಹೀಂ ವರ್ಕಲದಿಂದ ಚುನಾವಣಾ ಕಣಕ್ಕಿಳಿದಿದ್ದಾರೆ. ಕೊಡಿಯೇರಿ ಬಾಲಕೃಷ್ಣನ್, ಎ.ಕೆ. ಬಾಲನ್, ಎಂ.ಎ. ಬೇಬಿ, ಥಾಮಸ್ ಐಸಾಕ್ ಮತ್ತಿತರ ಘಟಾನುಘಟಿಗಳು ಅಭ್ಯರ್ಥಿಗಳ ಪಟ್ಟಿಯಲ್ಲಿ ಮುಂಚೂಣಿಯಲ್ಲಿದ್ದು, ಎಲ್‌ಡಿಎಫ್‌ನ ಪ್ರಚಾರದಲ್ಲಿ ಉತ್ಸಾಹ ತುಂಬಿದ್ದಾರೆ.

ಇನ್ನೊಂದು ಮಹತ್ವದ ಬೆಳವಣಿಗೆಯೊಂದರಲ್ಲಿ, ಯುಡಿಎಫ್ ಪಾಳಯದಿಂದ ಮೂವರು ಅಭ್ಯರ್ಥಿಗಳು ಹೊರಬಂದಿದ್ದಾರೆ. ತಮ್ಮ ಕ್ಷೇತ್ರಗಳಲ್ಲಿ ಪ್ರಾಬಲ್ಯ ಹೊಂದಿದ ಸ್ಟೀಫನ್ ಜಾರ್ಜ್, ಜಯಾ ಡಾಲಿ ಮತ್ತು ಜಾರ್ಜ್ ಜೆ ಮ್ಯಾಥ್ಯೂ ಸ್ವತಂತ್ರವಾಗಿ ಸ್ಪರ್ಧೆ ನಡೆಸಿದ್ದಾರೆ. ಇವರ ಬೆಂಬಲ ಎಲ್‌ಡಿಎಫ್‌ಗೆ ಲಭಿಸಿದ್ದು, ಚುನಾವಣೆಗೆ ಮುನ್ನ ನಡೆದ ಸಕಾರಾತ್ಮಕ ಬೆಳವಣಿಗೆಯಾಗಿದೆ.

ಯುಡಿಎಫ್‌ನ ದೊಡ್ಡ ಘಟಕವಾಗಿರುವ ಕಾಂಗ್ರೆಸ್ 82 ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿದೆ. ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ 24, ಕೇರಳ ಕಾಂಗ್ರೆಸ್ (ಎಂ) 15, ಎಸ್‌ಜೆಡಿ-6, ಜೆಎಸ್‌ಎಸ್-4, ಕೇರಳ ಕಾಂಗ್ರೆಸ್ ಜೋಸೆಫ್ ಹಾಗೂ ಸಿಎಂಪಿ ತಲಾ 3, ಕೆ.(ಬಿ), ಆರ್‌ಎಸ್‌ಪಿ(ಬಿ) ತಲಾ ಒಂದು ಕ್ಷೇತ್ರಗಳಲ್ಲಿ ತಮ್ಮ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ.

ಗಡದ್ ಕುರಿ ಇರತನ್ಕ ಕೊಬ್ಬಿದ್ ಕುರಿ ಇತ್ಗದೆ

ಕ್ಯಾತೆ

ಈ. ಬಸವರಾಜು ಮಲ್ಲೇನಹಳ್ಳಿ

ಯಣ್ಣ, ಆ ಗಡ್ಡದ್ ಕುರಿ ಇರ ತನ್ಕ ಕೊಬ್ಬಿದ್ ಕುರಿ ಇದ್ದೇ ಇರ್ತದೆ ಬುಡು

ಗಡ್ಡದ್ ಕುರಿ ಅಂದ್ರೆ ಆ ಗಡ್ಕರಿ ಅಂತ ಗೊತ್ತಾಯ್ತು, ಆದ್ರೆ ಕೊಬ್ಬಿದ್ ಕುರಿ ಅಂದ್ರೆ ಯಾರಣ್ಣ?

ಅದೂ ಗೊತ್ತಿಲ್ವೆ, ಯಡೂರಪ್ಪ!

ಇಷ್ಟ್ ದಿನ ಈಸ್ವರಪ್ಪ ಕೊಬ್ಬಿದ್ ಕುರಿ ಹೋರಿ ತರ ಮಾತಾಡನು?

ಆಡ್ತಿದ್ದ, ಅಂಗೇ ಇದ್ದ, ಏನೋ ಯಡ್ವಟ್ಟಾಗಿ ಈಗ ಯಡೂರಪ್ಪ ಕೊಬ್ಬಿದ್ ಕುರಿ ಆಗ್ಯವ್ನೆ.

ಆಯ್ತು, ಅದೇನ್ ಬುಡ್ಸಿ ಏಳಣ್ಣ

ಏನೂ ಇಲ್ಲ, ಯಡೂರಪ್ಪ ದುಡ್ ತಿಂದಿರದ ಕುಮಾರಣ್ಣ ಬಯಲಿಗ್ಯಳಿತಲೇ ಅವ್ನೆ. ಮನೆ ಕಟ್ಟಕೆ ಸಾಲ ತಗಂಡ್ರೆ ಕಂತ್ ಮ್ಯಾಲೆ ಸಾಲ ಕೊಡ್ತರಲ, ಅಂಗೆ ಅವ್ನು ಒಂದೊಂದ್ನೇ ಬುಡ್ತಾ ಅವ್ನೆ. ಇದ್ನೆಲ್ಲಾನು ನೋಡಿ ಸಾಕಾಗಿ ಈಸ್ವುರಪ್ಪ ಏನಾರ ಮಾಡ್ಲೇಬೇಕು ಅಂತಿದ್ನಂತೆ. ಅವುನ ಜ್ವತಿಗೆ ಅನಂತಕುಮಾರ ಅನ್ನನು ಸೇರ್ಕಂಡ್ನಂತೆ. ಇನ್ನ ಇಷ್ಟ್ ಜನ ಸೇರ್ಕಂಡ್ ಮ್ಯಾಲೆ ಯಡೂರಪ್ಪುನ್ ಕತೆ ಮುಗಿತು ಅಂತವ ಯಲ್ಲ ಡೆಲ್ಲಿಗೋಗಿ ಆ ಗಡ್ಡದ್ ಕುರಿಗೆ ಇವ್ನ ಏನೇನ್ ಅವ್ಯವಹಾರ ಮಾಡ್ಯನ್ವೆ ಅನ್ನದ ಏಳಿದ್ರಂತೆ. ಅವ್ನು ಯಲ್ಲಾನು ಕೇಳಿಸ್ಕಂಡು ಸುಮ್ಕೆ ಓಗ್ರಯ್ಯ. ಅಂತ ಮನ್ನ ಸಿಗದಿಲ್ಲ ಅಂದ್ನಂತೆ. ಈಸ್ವುರಪ್ಪ ಇದ್ದಿದ್ದಂಗೆ ದಿಕ್ಕಾರ ದಿಕ್ಕಾರ, ಅಯ್ಯಯ್ಯೋ ಅನ್ನಾಯ ಅಂತ ಕೂಗಿದ್ನಂತೆ. ಆಗ ಗಡ್ಡದ್ ಕುರಿ ಸುಮ್ಕೆ ಓಯ್ತಿಯೋ ಯಂಗೆ? ಅಂದ್ನಂತೆ. ಪಾಪ ಈಸ್ವುರಪ್ಪ ಸುಮ್ಕೆ ಬಂದ್ನಂತೆ.

ಅಲ್ಲ, ಈಸ್ವುರಪ್ಪ ಮಾತೆತ್ತಿದ್ರೆ ಕಡಿತಿನಿ, ಕತ್ತುಸ್ತಿನಿ ಅಂತ ಇದ್ದೋನು ಸುಮ್ಕೆ ಬಂದ್ನೆ?

ಅಯ್ಯೋ ಗಡ್ಡದ್ ಕುರೀನೇ ಯಡೂರಪ್ಪುನ್ ಪರ ನಿಂತವ್ನೆ ಅಂದ್‌ಮ್ಯಾಲೆ ಇವ್ನೇನ್ ಮಾಡ್ಯನು?

ಅಲ್ಲ, ಕೋಟಿಗಟ್ಲೆ ದುಡ್ ವಡದಿದ್ರೂ ಗಡ್ಡದ್ ಕುರಿ ಯಡೂರಪ್ಪುನ್ ಯಂಗ್ ಬುಟ್ಟ?

ಯಂಗ್ ಬುಟ್ಟ ಅಂದ್ರೆ ಈಗ ನವ್ ಸ್ವಾಮಿಗೋಳು ಯಂಗೆ ಯಡೂರಪ್ಪ ಸ್ರೇಷ್ಟ ವ್ಯಕ್ತಿ, ನಾನು ಅವ್ರ ಪರ ನಿಂತ್ಕತಿನಿ, ಕೂತ್ಕತಿನಿ ಅಂದ್ರು?

ಅವ್ರು ಬುಡು, ಯಡೂರಪ್ಪ ಕೇಳ್ದೇ ಇದ್ರೂ ಕೋಟಿಗಟ್ಲೆ ದುಡ್ ಕೊಡ್ತನೆ, ಪರ ವಯಿಸ್ಕಂಡು ಮಾತಾಡ್ತರೆ.

ಅಂಗೆ ಗಡ್ಡುದ್ ಕುರಿಗೂ ಕೋಟಿಗಟ್ಲೆ ದುಡ್ ಕೊಟ್ಟು, ಒಂದ್ ಬೆಳ್ಳಿ ಗದೆ ಮಾಡಿಸ್ಕೊಟ್ನಂತೆ. ಅದ್ಕೆ ಅವ್ನು ಸುಮ್ಕಾಗ್ಯವ್ನೆ.

ಗದೆ ಆ ವಯ್ಸುಂಗೆ ಲಗತ್ತಾಗಿರ್ತದೆ ಬುಡು! ವಳ್ಳೆ ಬೀಮ ಇದ್ದಂಗವ್ನೆ

ಆಯ್ತು ಈಸ್ವುರಪ್ಪೂ ಚನ್ನಾಗಿ ದುಡ್ ಮಾಡ್ಯವ್ನಂತೆ, ಸಿವಮೊಗ್ಗುದ್ ಸುತ್ತ ಎಲ್ಲಿ ಜಮೀನ್ ಸಿಕ್ಕುದ್ರೂ ಬುಡದಿಲ್ವಂತೆ, ಅವ್ನು ಯಂಗೆ ಯಡೂರಪ್ಪ ದುಡ್ ವಡೀತನೆ ಅಂತ ಏಳಕೋದ?

ಇಬ್ರಿಗೂ ಕಾಂಪಿಟೇಸನ್ ಆಯ್ತಂತೆ. ನಂಗಿಂತ ಅವ್ನು ಜಾಸ್ತಿ ವಡೀತಾ ಅವ್ನೆ ಅಂತ ಏಳಕೋಗಿದ್ನಂತೆ. ಅದ್ಕೆ ಗಡ್ಡದ್ ಕುರಿ ಇದು ಅವರವರ ಕ್ಯಾಪಾಸಿಟಿ. ನೀನೂ ವಡಿ, ನಂಗೂ ತಂದ್ಕೊಡು ಅಂದ್ನಂತೆ. ಈಸ್ವುಪ್ಪ ಕೂಗ್ಯಾಡ್ಕಂಡು ವಾಪಸ್ಸು ಬಂದ್ನಂತೆ.

ಮುಂದ್ಯಂಗೆ ಅಂತಿಯ?

ಒಂದೇ ಕನ್ನಿಗೆ ಬ್ಯಳ್ಕರ್ದತೆ? ಅಳಿಮರುವ್ ಬುಟ್ಕಂಡು ತಿರ್ಗ ಇನ್ನೊಂದ್ ಅಗರಣ ಬತ್ತದೆ, ಆಗ ತಿರ್ಗ ಬಿಗೇಸ್ಕತ್ತದೆ. ಅದು ಮುಗ್ಯ ಒತ್ತಿಗೆ ಯಲೆಕ್ಷನ್ ಬತ್ತದೆ.

ಆದ್ರೂ ಇದ್ನೆಲ್ಲಾನು ಯಂಗೆ ನಿಬಾಯಿಸ್ಕಂಡೋಯ್ತಾ ಇದ್ದನು ಈ ಯಡೂರಪ್ಪ?

ದಿನಾ ವಡುದ್ ದುಡ್ನಲಿ ಕಾಲ್ ಬಾಗವ ಇದ್ಕೆ ಅಂತ ಮಡ್ಗಿರ್ತನಂತೆ. ಯಾರ್ನ್ಯಾರ ಕಯಕ್, ಕುಯುಕ್ ಅಂದ್ರೆ ಸಾಕು, ಕರ್ದು ದುಡ್ ಕೊಟ್ಟನಂತೆ. ಆಗ ಯಲ್ಲಾ ಸುಮ್ಕಾದರಂತೆ.

ಈಗ ಈಸ್ವುರಪ್ಪ ಏನ್ ಮಾಡ್ತಾ ಇದ್ದನು?

ಯಡೂರಪ್ಪುಂಗೆ ಕೇಪ್ ಆಕದ್ಯಂಗೆ ಅಂತವ ಪುಸ್ತಕ, ಪೆನ್ನು ತಗಂಡು ಲ್ಯಕ್ಕಾಚಾರ ಮಾಡ್ತಾ ಅವ್ನಂತೆ.

ತಮಿಳುನಾಡು

ತಮಿಳುನಾಡಿನಲ್ಲಿ ಡಿಎಂಕೆ ನೇತೃತ್ವದ ಸರ್ಕಾರದ ನಡೆಸಿರುವ ವ್ಯಾಪಕ ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಈ ಬಾರಿಯ ಪ್ರಮುಖ ಚುನಾವಣಾ ವಿಷಯ. 2 ಜಿ ಸ್ಪೆಕ್ಟ್ರಂ ಹಗರಣ ಡಿಎಂಕೆ ಮತ್ತು ಕಾಂಗ್ರೆಸ್‌ನ ಭ್ರಷ್ಟ ಮುಖವನ್ನು ಅನಾವರಣಗೊಳಿಸಿದೆ. ಇದರ ಜೊತೆ ಕಳೆದ ಐದು ವರ್ಷಗಳಿಂದ ಜನವಿರೋಧಿ ಆಡಳಿತ ನೀಡಿದ ಡಿಎಂಕೆ ಮತ್ತದರ ಮೈತ್ರಿಕೂಟಕ್ಕೆ ಜನ ಛಾಟಿಏಟು ಬೀಸುವುದು ಗ್ಯಾರಂಟಿ ಎಂಬ ಪರಿಸ್ಥಿತಿ ರಾಜ್ಯದಲ್ಲಿ ಉಂಟಾಗಿದೆ.

ತಮಿಳುನಾಡಿನಲ್ಲಿ ಡಿಎಂಕೆ ನೇತೃತ್ವದ ಮೈತ್ರಿಕೂಟ ಆಡಳಿತ ನಡೆಸುತ್ತಿದೆ. ಡಿಎಂಕೆ 99 ಹಾಗೂ ಕಾಂಗ್ರೆಸ್ 34 ಸ್ಥಾನಗಳಲ್ಲಿ ಜಯಗಳಿಸಿತ್ತು. ಅಣ್ಣಾಡಿಎಂಕೆ 57, ಪಿಎಂಕೆ 18 ಸ್ಥಾನಗಳನ್ನು ಹೊಂದಿತ್ತು. ವಿಸರ್ಜಿತ ವಿಧಾನಸಭೆಯಲ್ಲಿ ಸಿಪಿಐಎಂ 9 ಹಾಗೂ ಸಿಪಿಐ 6 ಸ್ಥಾನ ಗಳಿಸಿದ್ದರೆ, ವಿಜಯಕಾಂತ್ ಅವರ ಡಿಎಂಡಿಕೆ 1 ಸ್ಥಾನವನ್ನು ಪ್ರತಿನಿಧಿಸಿತ್ತು.

ಈ ಬಾರಿ ಸಿಪಿಐಎಂ 12 ಸ್ಥಾನಗಳಲ್ಲಿ ಸ್ಪರ್ಧೆ ನಡೆಸುತ್ತಿದೆ. ಮೂವರು ಹಾಲಿ ಶಾಸಕರಿಗೆ ಪಕ್ಷ ಟಿಕೆಟ್ ನೀಡಿದ್ದು, ಹಿರಿಯ ಕಾರ್ಮಿಕ ನಾಯಕ ಸೌಂದರ್ಯ ರಾಜನ್ ಕಣಕ್ಕಿಳಿದಿದ್ದು ಪಕ್ಷದ ಉತ್ಸಾಹವನ್ನು ಮತ್ತಷ್ಟು ಹೆಚ್ಚಿಸಿದೆ. ಕಳೆದ ಐದು ವರ್ಷಗಳಿಂದ ಪಕ್ಷ ಮತ್ತು ಅದರ ಸಾಮೂಹಿಕ ಸಂಘಟನೆಗಳು ನಡೆಸಿರುವ ಹೋರಾಟ ಈ ಬಾರಿ ಪಕ್ಷಕ್ಕೆ ವರದಾನವಾಗಲಿದೆ. ಭ್ರಷ್ಟಾಚಾರ ಮತ್ತು ಬೆಲೆ ಏರಿಕೆ ಈ ಬಾರಿಯ ಪ್ರಮುಖ ಚುನಾವಣಾ ವಿಷಯ ಎಂದು ಪಕ್ಷದ ರಾಜ್ಯ ಕಾರ್ಯದರ್ಶಿ ಜಿ. ರಾಮಕೃಷ್ಣನ್ ಹೇಳಿದ್ದಾರೆ.

ಅಸ್ಸಾಂ

ಅಸ್ಸಾಂನಲ್ಲಿ ಕಳೆದ ಬಾರಿ ಸಿಪಿಐಎಂ 16 ಸ್ಥಾನಗಳಲ್ಲಿ ಸ್ಪರ್ಧಿಸಿ 2 ಸ್ಥಾನಗಳಲ್ಲಿ ಜಯ ಸಾಧಿಸಿತ್ತು.

[illegible]

ಈ ವಾರ

ಹಾಗೆಯೇ [illegible] ಕೆಲವರು ಕ್ರಿಸ್ತ ಹಾಗೂ ಕ್ರೈಸ್ತ ಧರ್ಮದ ಬಗ್ಗೆ ಪ್ರಚಾರಿಸುತ್ತಿದ್ದ ಕೊಡಗಿನ ಕೆಲವು [illegible] ಮತಾಂತರ ಮಾಡುತ್ತಿದ್ದಾರೆಂದು ಸಂಘ ಪರಿವಾರ ಗುಲ್ಲೆಬ್ಬಿಸಿ ಮಹಿಳೆಯರನ್ನೂ ಒಳಗೊಂಡು ಅವರೆಲ್ಲರ ಮೇಲೆ ಹಲ್ಲೆ ನಡೆಸಿ ಮರಕ್ಕೆ ಕಟ್ಟಿಹಾಕಿದ ಘಟನೆ ನಡೆದಿದೆ.

ಧರ್ಮ ಪ್ರಚಾರ, ಸಾಹಿತ್ಯ ಹಂಚಿಕೆ ತಪ್ಪೇ?

ಕೇವಲ ಧರ್ಮಪ್ರಚಾರ ನಡೆಸುವುದೇ ಮತಾಂತರ ಹೇಗಾದೀತು? ಅವರವರ ಮತಧರ್ಮಗಳ ಬಗ್ಗೆ ಪ್ರಚಾರಿಸುವುದು ಪ್ರಜೆಯ ಸಂವಿಧಾನಬದ್ಧ ಹಕ್ಕಾಗಿದೆ. ಆದರೆ ಧರ್ಮದ ಬಗ್ಗೆ ತಿಳಿಸುವುದನ್ನೇ ಅಪರಾಧವೆಂದು ಆರ್.ಎಸ್.ಎಸ್. ಘೋಷಿಸಿ ತನ್ನ ಫ್ಯಾಸಿಸ್ಟ್ ಕ್ರಮಗಳಿಂದ ಪ್ರಜಾಸತ್ತಾತ್ಮಕ ಹಕ್ಕನ್ನು ಮೊಟಕು ಮಾಡಿ ಅಲ್ಪಸಂಖ್ಯಾತರ ಮೇಲಿನ ಕೋಮುದ್ವೇಷ ತೋರಿದೆ.

ಇದಕ್ಕೆ ರಾಗ ಹೊಸೆದು ಸಂಸದ ರಾಮಾ ಜೋಯಿಸ್ ಡಾ. ಚಿದಾನಂದಮೂರ್ತಿಯವರು ರಾಜ್ಯಪಾಲರಿಗೆ ಮತಾಂತರ ನಿಷೇಧ ಮಾಡುವಂತೆ ಹಾಗೂ ಅಂತಹ ಕಾನೂನು ತರಬೇಕೆಂದು ಒತ್ತಾಯಿಸಿದ್ದಾರೆ. ಸಂಘ ಪರಿವಾರ ತನ್ನ ಅಜೆಂಡಾವನ್ನು ಮುಂದೊಯ್ಯಲು ಬೆಂಬಿಡದೇ ಯತ್ನಿಸುತ್ತಿರುವುದನ್ನು ಅಲ್ಪಸಂಖ್ಯಾತರ ಧಾರ್ಮಿಕ ಹಕ್ಕುಗಳು, ಪ್ರಜಾಪ್ರಭುತ್ವ, ಜಾತ್ಯಾತೀತತೆಯ ಮೇಲಿನ ಇಂತಹ ಧಾಳಿಗಳ ವಿರುದ್ಧ ಧ್ವನಿ ಎತ್ತಬೇಕು. ಎಚ್ಚರವಾಗಿರಬೇಕು. ಅಂತಹ ಮತಾಂತರ ನಿಷೇಧ ಕಾಯ್ದೆ ತರಬೇಕೆಂಬ ಇಂಗಿತವನ್ನು ನ್ಯಾ.ಸೋಮಶೇಖರ್ ಆಯೋಗ ನೀಡಿತ್ತು ಎಂಬುದನ್ನು ನೆನಪಿಸಿಕೊಳ್ಳಬೇಕು.

ಪರ್ಯಾಯ ತೋರಿದ .....

ಪುಟ 10 ರಿಂದ

ಈ 16 ಸ್ಥಾನಗಳಲ್ಲಿ ಒಟ್ಟು 1.88 ಲಕ್ಷ ಮತಗಳನ್ನು ಗಳಿಸಿತ್ತು. ಸಿಪಿಐ 9 ಸ್ಥಾನಗಳಲ್ಲಿ ಸ್ಪರ್ಧಿಸಿದ್ದು, ಒಂದರಲ್ಲಿ ಜಯ ಗಳಿಸಿತ್ತು. 1.34 ಲಕ್ಷ ಮತಗಳನ್ನು ಅದು ಗಳಿಸಿತ್ತು.

ಕಾಂಗ್ರೆಸ್ 53 ಸ್ಥಾನ ಗಳಿಸಿ ಅಧಿಕಾರ ಪಡೆದಿತ್ತು. ಎಜಿಪಿ 24 ಸ್ಥಾನ ಪಡೆದಿದ್ದರೆ, ಬಿಜೆಪಿ ಹಾಗೂ ಎಯುಡಿಎಫ್ ತಲಾ 10 ಸ್ಥಾನ ಗಳಿಸಿತ್ತು. ಇತರರು 25 ಸ್ಥಾನ ಪಡೆದು ನಿರ್ಣಾಯಕ ಪಾತ್ರ ವಹಿಸಿದ್ದರು.

ಈ ಬಾರಿ ಸಿಪಿಐಎಂ 17 ಸ್ಥಾನಗಳಲ್ಲಿ ತನ್ನ ಉಮೇದುವಾರರನ್ನು ಕಣಕ್ಕಿಳಿಸಿದೆ.

ಪಾಂಡಿಚೇರಿ

2006ರಲ್ಲಿ ಪಾಂಡಿಚೇರಿಯಲ್ಲಿ ಸಿಪಿಐಎಂ ಮೂರು ಸ್ಥಾನಕ್ಕೆ ಸ್ಪರ್ಧೆ ನಡೆಸಿತ್ತು. ಕಳೆದ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್ 10 ಸ್ಥಾನ ಹಾಗೂ ಡಿಎಂಕೆ 7 ಸ್ಥಾನ ಪಡೆದು ಮೈತ್ರಿಕೂಟ ಅಧಿಕಾರಕ್ಕೆ ಬಂದಿತ್ತು. ಅಣ್ಣಾಡಿಎಂಕೆ ಮೂರು ಹಾಗೂ ಸಿಪಿಐ ಒಂದು ಸ್ಥಾನ ಪಡೆದಿತ್ತು. ಈ ಬಾರಿ ಸಿಪಿಎಂ ಒಂದು ಸ್ಥಾನಕ್ಕೆ ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸಿದೆ.

ಕೂಲಿ ಕೇಳಿದರೆ ಬಿಜೆಪಿ ಸರ್ಕಾರದ ಪೋಲೀಸರ ಒದೆತ !!



ಬಿಜೆಪಿ ದರ್ಬಾರ್

■ ಆರ್.ರಾಮಕೃಷ್ಣ

ಅವರು ಕೊಪ್ಪಳ ಜಿಲ್ಲೆಯ ರೈತರು. ಜಿಲ್ಲೆಯ ಐದಾರು ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅಡಿ ಕೆಲಸ ಮಾಡಿದ್ದಾರೆ. ಕೆಲಸ ಮಾಡಿರುವುದು 2009 - 10 ರ ವರ್ಷದಲ್ಲಿ. ಇಲ್ಲಿಯವರೆಗೆ ಕೂಲಿ ಹಣ ಕೊಟ್ಟಿಲ್ಲ. ಗ್ರಾಮಸ್ಥರಾದರೂ ಏನು ಮಾಡಬೇಕು ? ತಾಲ್ಲೂಕು ಪಂಚಾಯ್ತಿ ಕಛೇರಿಯ ಎದುರು ಧರಣ ಕುಳಿತರು. ಕುಳಿತು ನಾಲ್ಕು ದಿನವಾಯಿತು. ಆಗಲಾದರೂ ಕೂಲಿ ಸಿಕ್ಕಿತೆ ? ಇಲ್ಲ. ಕೂಲಿ ಸಿಕ್ಕಿದ್ದರೆ ಮಾರ್ಚ್ 22 ರಂದು ಧರಣ ಕುಳಿತ ರೈತರು ಮಾರ್ಚ್ 25 ರಂದು ತಾಲ್ಲೂಕು ಕಚೇರಿಗೆ ಮುತ್ತಿಗೆ ಹಾಕುವ ಪ್ರಸಂಗವಾದರೂ ಏಕೆ ಬರುತ್ತಿತ್ತು.

ಕೂಲಿ ಕೇಳಿದ ರೈತರಿಗೆ ಬಿಜೆಪಿ ಸರ್ಕಾರದ ಘನ ದರ್ಬಾರಿನಲ್ಲಿ ಸಿಕ್ಕಿದ್ದೇನು ಗೊತ್ತೆ? ಪೋಲಿಸರ ಬೂಟುಗಾಲಿನ ಮನಸೋ ಇಚ್ಛೆ ಒದೆತ. ಲಾಠಿಯಿಂದ ನಿರ್ದಯ ಬಡಿತ. ಮಹಿಳೆಯರು ಮಕ್ಕಳೆನ್ನದೆ ಅಟ್ಟಾಡಿಸಿ ಚಚ್ಚುವ ಪೋಲಿಸರ ಹೀನಾಯ ದೌರ್ಜನ್ಯ.

ಹಸಿರು ಶಾಲು ಹೊದ್ದು ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದ ಯಡಿಯೂರಪ್ಪನವರ ಎದೆಯಲ್ಲಿ ರೈತರ ಬೆಗೆಗೆ ಎಳ್ಳು ಕಾಳಷ್ಟಾದರೂ ಗೌರವ, ಪ್ರೀತಿ ಇದ್ದಿದ್ದರೆ ಕನಿಷ್ಟ ಒಂದು ಕ್ಷಮೆಯನ್ನಾದರೂ ಕೇಳುತ್ತಿದ್ದರಲ್ಲವೇ ?

ಅಯ್ಯೋ ಪಾಪ. ಹೋಗಲಿ ಬಿಡಿ. ಯಡಿಯೂರಪ್ಪನವರು ಪಕ್ಷದಲ್ಲಿ ತಮ್ಮ ತಲೆಯನ್ನ, ಮತ್ತೆ ತಮ್ಮ ಖುರ್ಚಿಯನ್ನ ಉಳಿಸಿಕೊಳ್ಳೋದರಲ್ಲಿ ಬಹಳ ಬ್ಯುಸಿಯಾಗಿದ್ದಾರೆ. ಅವರ ಪೋಲಿಸರು ರೈತರ ತಲೆ ಒಡೆದರೆ ಅವರು ತಾನೆ ಏನು ಮಾಡೋಕಾಗತ್ತೆ.

★

ನಾಡಿನ ಜನರೆ ಪುಂಡು ಪೋಕರಿಗಳಿದ್ದಾರೆ ಎಚ್ಚರ !!

ನಾನಾ ರೀತಿಯ ಸಾಮಾಜಿಕ ಆರ್ಥಿಕ, ಸಾಮಾಜಿಕ ಖಾಯಿಲೆಗಳಿಂದ ನರಳುತ್ತಿರುವ ನಮ್ಮ ಸಮಾಜದಲ್ಲಿ ಊರೂರುಗಳಲ್ಲೂ ಪುಂಡು ಪೋಕರಿಗಳು ದಂಡಿಯಾಗಿ ಇರುತ್ತಾರೆ. ಅವರು ಜನರಿಗೆ ನಾನಾ ರೀತಿಯ ಸಮಸ್ಯೆಗಳನ್ನು ತಂದೊಡ್ಡುತ್ತಾರೆ. ಆದರೆ ಇದೇನು ಇದ್ದಕ್ಕಿದ್ದಂತೆ ಪುಂಡು ಪೋಕರಿಗಳ ಸಮಾಚಾರ ಅನಿಸುತ್ತಾ.

ಪುಂಡು ಪೋಕರಿಗಳ ವಿಷಯದ ಬಗೆಗೆ ಚರ್ಚೆ ಶುರು ಮಾಡಿರುವುದು ನಮ್ಮ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿ ಯಡಿಯೂರಪ್ಪನವರು. ಆದರೆ ಅವರು ಮಾತನಾಡಿರುವುದು ಹಾದಿ ಬೀದಿಗಳ ಪುಂಡುಪೋಕರಿಗಳ ಬಗೆಗೆ ಅಲ್ಲ. ತಮ್ಮ ಪಕ್ಷದೊಳಗೇ ಇರುವ ಪುಂಡು ಪೋಕರಿಗಳ ಬಗೆಗೆ.

ರಾಜ್ಯ ಬಿಜೆಪಿ ಅಧ್ಯಕ್ಷ ಈಶ್ವರಪ್ಪ ಸೇರಿದಂತೆ ತಮ್ಮ ವಿರುದ್ಧ ಭಿನ್ನ ಮತೀಯ ಚಟುವಟಿಕೆ ನಡೆಸುತ್ತಿರುವ ಬಿಜೆಪಿ, ಸಚಿವರು, ಸಂಸದರು ಎಲ್ಲರನ್ನು ಸೇರಿಸಿಕೊಂಡೇ ಯಡಿಯೂರಪ್ಪನ್‌ರವರು ಈ ಮಾತನ್ನು ಹೇಳಿದ್ದಾರೆ ಎಂಬುದು ಯಾರಿಗಾದರೂ ತಿಳಿಯುವಂಥದ್ದೇ.

ನಾವೆಲ್ಲ ಒಂದೇ.... ನಮ್ಮಲ್ಲಿ ಯಾವುದೇ ಭಿನ್ನಮತ ಇಲ್ಲ ಎಂದು ಒಂದು ದಿನ ಎಲ್ಲರೂ ಪರಸ್ಪರ ಸಿಹಿ ತಿನ್ನಿಸಿ ಮುದ್ದಾಡುವುದು... ಆಮೇಲೆ ಮಾರನೇ ದಿನ ತಮ್ಮ ಅಕ್ರಮಗಳು, ಭ್ರಷ್ಟಾಚಾರದ ಪ್ರಕರಣಗಳನ್ನು ಬಳಸಿಕೊಳ್ಳಲು ಯತ್ನಿಸುವ ತಮ್ಮದೇ ಪಕ್ಷದ ರಾಜ್ಯ ಅಧ್ಯಕ್ಷರು, ಸಚಿವರು, ಸಂಸದರನ್ನು ಕುರಿತು 'ಪುಂಡುಪೋಕರಿಗಳು ಎಲ್ಲ ಕಡೆ ಇರುವಂತೆ ಪಕ್ಷದೊಳಗೂ ಇದ್ದಾರೆ' ಎಂದು ಸ್ವತಃ ಮು.ಮ.ಗಳೇ ಸಾರುವುದು, ಪಕ್ಷದ ಅಧ್ಯಕ್ಷರು ....ಪುಂಡು ಪೋಕರಿಗಳು ಯಾರೆಂದು ಯಡಿಯೂರಪ್ಪನವರನ್ನೇ ಕೇಳಿ... ಎಂದು ಕಿಡಿಕಾರುವುದು....ಉಪ ಚುನಾವಣೆ ಇದೆ ಎಚ್ಚರ ಅಂತ ಬಿಜೆಪಿ ಹೈಕಮಾಂಡ್ ಡೆಲ್ಲಿಯಿಂದ ಬೆಲ್ ಬಾರಿಸಿದ ಮೇಲೆ ಇಲ್ಲಿ ಮತ್ತೆ ಎಲ್ಲರೂ ಒತ್ತಟ್ಟಿಗೆ ಸೇರಿ ಹಲ್ಲು ಕಿರಿದು ಗ್ರೂಪ್ ಫೋಟೋಗೆ ಪೋಸು ಕೊಡುವುದು... ಆಹಾ ಏನು ಪಕ್ಷವಯ್ಯಾ ? ಏನು ಪಕ್ಷ !!

★


ಮುಗಿಯದ ಗಣಿ ಲೂಟಿ
ಕೊನೆ ಇಲ್ಲದ ಅಕ್ರಮಗಳು

ಗಣಿ ಲೂಟಿಕೋರರ ಸ್ವರ್ಗವಾಗಿ ದೇಶ ವಿದೇಶಗಳಲ್ಲೆಲ್ಲ 'ವಿಖ್ಯಾತ'ವಾಗಿ ಮೆರೆಯುತ್ತಿರುವ ಕರ್‌ನಾಟಕವೆಂಬ ಈ ಕರುನಾಡಿನಲ್ಲಿ ಜರುಗುತ್ತಿರುವ ನಾಟಕಗಳು, ತೆರೆದುಕೊಳ್ಳುತ್ತಿರುವ ಪ್ರಕರಣಗಳಿಗೆ ಕೊನೆಯೇ ಇಲ್ಲವಾಗಿದೆ.

ಮೊನ್ನೆ ನಮ್ಮ ಗಣಿ ಲೂ..ಸಚಿವ ಜನಾರ್ಧನರೆಡ್ಡಿಯವರು ಒಂದು ಅಣಿ ಮುತ್ತನ್ನು ಉದುರಿಸಿದ್ದಾರೆ.

ಗಣಿ ಗುತ್ತಿಗೆಯನ್ನು ಖಾಸಗಿಯವರಿಗೆ ನೀಡದೇ ರಾಜ್ಯ ಅಥವಾ ಕೇಂದ್ರ ಸರ್ಕಾರಗಳೇ ನಡೆಸಲಿ ಎಂದು ಎಂದು ಜನಾರ್ಧನ ರೆಡ್ಡಿಯವರು ಒಂದು ಹೊಸ ದಾಳವನ್ನು ಉರುಳಿಸಿದ್ದಾರೆ. "ವಿರೋಧ ಪಕ್ಷಗಳು ಅಕ್ರಮ ಗಣಿಗಾರಿಕೆಯ ಆರೋಪ ಹೊರಿಸುವುದನ್ನೆ ಒಂದು ಕೆಲಸ ಮಾಡಿಕೊಂಡಿದ್ದಾರೆ. ...ನಾವು ಉದ್ಯಮ ಆರಂಭಿಸುವ ಆಲೋಚನೆ ಕೈ ಬಿಟ್ಟು ಪೂರ್ಣ ಪ್ರಮಾಣದ ರಾಜಕಾರಣ ಮಾಡುವುದರಲ್ಲೇ ಆಸಕ್ತಿ ಹೊಂದಿದ್ದೇವೆ. ಬೇರೆ ರಾಜ್ಯ ಅಥವಾ ದೇಶಗಳಲ್ಲಿ ಬಂಡವಾಳ ಹೂಡಿ ಉದ್ಯಮ ಆರಂಭಿಸಲು ಚಿಂತನೆ ನಡೆಸಿದ್ದೇವೆ..." ಅಂತ ಒಂದಷ್ಟು ಒಗ್ಗರಣೆ ಬೇರೆ ಹಾಕಿದ್ದಾರೆ.

ಸರಿ ಸುಮಾರು ಇದೇ ಅವಧಿಯಲ್ಲಿ ಬಯಲುಗೊಂಡಿರುವ ಈ ಕೆಲವು ಸಮಾಚಾರಗಳನ್ನು ನೋಡಿ. ರೆಡ್ಡಿ ಸಹೋದರರ ಗಣಿಗಾರಿಕೆ ಎಂದರೆ ಇಲ್ಲಿಯವರೆಗೆ ಜನರಿಗೆ ನೆನಪಾಗುತ್ತಿದ್ದುದು ಓಬಳಾಪುರಂ ಮೈನಿಂಗ್ ಕಂಪನಿ. ಇದಲ್ಲದೇ ಸ್ವತಃ ತಮ್ಮದೇ ಒಡೆತನದ ಮತ್ತೊಂದು ಕಂಪನಿಯ ಮೂಲಕ ಈ ರೆಡ್ಡಿಗಳು ಕಳೆದ ಕೆಲವು ವರ್ಷಗಳಿಂದ



ಗಣಿಗಾರಿಕೆಯನ್ನು ನಡೆಸುತ್ತಿರುವ ರಹಸ್ಯವೂ ಇದೀಗ ಬಯಲಾಗಿದೆ. ಇವೆಲ್ಲಾ ಕಾನೂನು ಬದ್ಧವಾಗಿ ನಡೆಯುವುದಾದರೆ ಇದರಲ್ಲಿ 'ಬಯಲಾಗುವ' ಅಂಶ ಏನೂ ಇರುವುದಿಲ್ಲ. ಪರಿಸ್ಥಿತಿ ಹಾಗಿಲ್ಲ. ಇಲ್ಲೀಗ 'ಬಯಲಾದ', 'ಬಯಲಾಗ ಬೇಕಾದ' ಎಷ್ಟೋ ಹಗರಣಗಳೇ ಇವೆ.

ಪ್ರಜಾವಾಣಿ ಪತ್ರಿಕೆಯು ಬಯಲು ಮಾಡಿರುವ ಈ ಸಂಗತಿಯನ್ನು ನೋಡಿ. ಬಳ್ಳಾರಿ ಅಸೋಸಿಯೇಟೆಡ್ ಮೈನಿಂಗ್ ಕಂಪನಿ ಎಂಬ ಕಂಪನಿಯೊಂದನ್ನು ರೆಡ್ಡಿ 2009 ರಲ್ಲಿ ಖರೀದಿಸಿದ್ದಾರೆ. ಜನಾರ್ಧನ ರೆಡ್ಡಿ ಮತ್ತು ಅವರ ಪತ್ನಿ ಮೊದಲಿಗೆ ಈ ಕಂಪನಿಯ ಪಾಲುದಾರರಾಗುವುದು, ಕೆಲವೇ ದಿನಗಳಲ್ಲಿ ಅದರ ಮೂಲ ಮಾಲಿಕರು ಕಂಪನಿಯಿಂದ ನಿವೃತ್ತರಾಗಿರುವುದು ಇಲ್ಲಿನ ತಂತ್ರ. ಆದರೆ ಒಂದು ಹೊಸ ಗಣಿ ಖರೀದಿ ಮಾಡುವಾಗ ಅಗತ್ಯವಾದ ಪೂರ್ವಾನುಮತಿಯನ್ನು ಸರ್ಕಾರದಿಂದ ಪಡೆಯಲಾಗಿದೆಯೇ ? ಇದು ಈಗ ಎದ್ದಿರುವ ಪ್ರಶ್ನೆ. ವ್ಯವಹಾರ ಒಟ್ಟಾರೆ ಸ್ವರೂಪವನ್ನು ನೋಡಿದರೆ ಇಲ್ಲ ಎಂಬುದೇ ಬಹುಶಃ ಸಿಗುವ ಉತ್ತರ.

★

ವಿಫಲ 'ಕಡತ ಯಜ್ಞ'

ಅಕ್ರಮ ಗಣಿಗಾರಿಕೆ ಬಗೆಗೆ ನಡೆಯುತ್ತಿರುವ ಲೋಕಾಯುಕ್ತ ತನಿಖೆ ತಮಗೆ ಗೊತ್ತಿದೆ. ಲೋಕಾಯುಕ್ತ ಅಧಿಕಾರಿಗಳು ಇದೇ ಅಸೋಸಿಯೆಟೆಡ್ ಮೈನಿಂಗ್ ಕಂಪನಿಯ ಚಟುವಟಿಕೆಗಳಿಗೆ ಸಂಬಂಧಿಸಿದ ಫೈಲ್‌ಗಳನ್ನು ಅಂದರೆ ಕಡತಗಳನ್ನು ಕೇಳಿದಾಗ ಯಾಕೋ ಏನೋ ಆ ಕಡತವೇ ಸಿಕ್ಕಿಲ್ಲ ನಮ್ಮ ಗಣಿ ಇಲಾಖೆಯ ಅಧಿಕಾರಿ ವರ್ಗಕ್ಕೆ. ತಿಂಗಳಾನುಗಟ್ಟಲೇ ಕಡತವನ್ನು ಕೊಡದೇ ಹೋದಾಗ 'ಕಡತ ಯಜ್ಞ'ದ ಸಂಬಂಧವಾದ ಕ್ರಿಮಿನಲ್ ಮೊಕದ್ದಮೆ ಜಡಿಯಬೇಕಾದೀತು ಎಚ್ಚರ ಅಂತ ಲೋಕಾಯುಕ್ತ ಅಧಿಕಾರಿಗಳು ಗಣಿ ಇಲಾಖೆ ಅಧಿಕಾರಿಗಳ ವಿರುದ್ಧ ಗುಡುಗಿದ ಮೇಲೆ, ವಿಷಯಕ್ಕೆ ನೇರವಾಗಿ ಸಂಬಂಧಿಸಿಲ್ಲದ ಯಾರೋ ಕಿರಿಯ ಅಧಿಕಾರಗಳ ಮೂಲಕ ಕಡತವು ಲೋಕಾಯುಕ್ತರಿಗೆ ಹೇಗೋ ಬಂದು ತಲುಪಿತಂತೆ !!

★

ಏನಿದು ಕರಾಮತು ನೀವೇ ಯೋಚಿಸಿ.

ಕರ್ನಾಟಕ ರಾಜ್ಯದಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಧರ್ಮಸಿಂಗ್, ಕುಮಾರಸ್ವಾಮಿ, ಹಾಗೂ ಯಡಿಯೂರಪ್ಪನವರ ಕಾಲದಲ್ಲಿ ನಡೆದಿರುವ ಗಣಿ ಅಕ್ರಮಗಳ ಕುರಿತ ತನಿಖೆ ನಡೆಯಬೇಕು ಬರೀ ಯಡಿಯೂರಪ್ಪನವರ ಕಾಲದ್ದಲ್ಲ ಎಂಬ ಮನವಿ-ದೂರಿನ ಆಧಾರದಲ್ಲಿ ಸುಪ್ರಿಂ ಕೋರ್ಟಿನ ಉನ್ನಾತಾಧಿಕಾರ ಸಮಿತಿಯು ತನಿಖೆ ನಡೆಸುತ್ತಿದೆ. ಈ ಸಂಬಂಧ ಮೊನ್ನೆ ಅಧಿಕಾರಿಗಳ ತಂಡ ರಾಜ್ಯಕ್ಕೆ ಭೇಟಿ ನೀಡಿ ಸಮೀಕ್ಷೆ ನಡೆಸಿ ಈ ಹಿಂದೆ ನಡೆಸಲಾದ ಜಂಟಿ ಸಮೀಕ್ಷೆ ಯಾವ ರೀತಿಯಲ್ಲೂ ಸರಿಯಾಗಿಲ್ಲ ಎಂದಿದೆ. ಅದರ ಜೊತೆಗೆ ರಾಜ್ಯ ಸರ್ಕಾರದಿಂದ ಸಮಿತಿಯು ಕೋರಿದ ಹಲವು ಮಾಹಿತಿಗಳಲ್ಲಿ ಗಣಿಗಾರಿಕೆ ಬಗೆಗೆ ನೀಡಿರುವ ಮಾಹಿತಿಗಳು ಏನೇನು ಸಮರ್ಪಕವಾಗಿಲ್ಲ ಎಂದು ತೀವ್ರ ಅತೃಪ್ತಿ ವ್ಯಕ್ತಪಡಿಸಿದೆ.

ಗಣಿಗಾರಿಕೆ ಸಂಬಂಧಿಸಿದ ಕಡತಗಳನ್ನು, ಮಾಹಿತಿಗಳನ್ನು ಕೇಳು ಕೇಳಿದವರಿಗೆಲ್ಲ ಮುಕ್ತವಾಗಿ ಕೊಟ್ಟು ಬಿಡಲು, ಅದೇನು ಯಡಿಯೂರಪ್ಪನವರು ಮಠ ಮಾನ್ಯಗಳಿಗೆ ಸಿಕ್ಕ ಸಿಕ್ಕಲ್ಲೆಲ್ಲಾ ಹಂಚಲು ಜೇಬಲ್ಲಿ ತುಂಬಿಟ್ಟುಕೊಂಡಿರುವ ಬಜೆಟ್ ಪ್ರಸಾದವೇ ?

★

ಎದ್ದಿಗೆ ನೀರಿಗೆ ಹಾಹಾಕಾರ? ಏನು ಮಳೆಗಾಲ ತರಿಸೋಕಾಗತ್ತ ಬಿಜೆಪಿ ಸರ್ಕಾರ?!

ದಿನೇ ದಿನೇ ಬೇಸಿಗೆಯ ಕಾವು ಏರುತ್ತಿದೆ. ಇದು ಎಷ್ಟೋ ಕೆರೆ ಬಾವಿಗಳಲ್ಲಿ ನೀರು ಬತ್ತಿಹೋಗುವ ಹೊತ್ತು. ಕುಡಿಯುವ ನೀರಿಗೂ ಹಾಹಾಕಾರವೇಳುವ ಹೊತ್ತು. ಇಂಥಾ ಸಂದರ್ಭದಲ್ಲಿ ಆಳುವ ಜನ ಏನು ಮಾಡಬೇಕು. ಪಕ್ಷದ ಕಚೇರಿ, ಸಚಿವರ ಮನೆ, ಶಾಸಕರ ಮನೆ, ಎಲ್ಲೆಲ್ಲೋ ಗುಪ್ತ್ ಗುಪ್ತ್ ಸಭೆಗಳನ್ನು ಹಾಗೂ ಇಂಥ ಸಭೆಗಳಿಗೆ ಪ್ರತಿ ಸಭೆಗಳನ್ನು ನಡೆಸುವುದನ್ನು ಬಿಟ್ಟು ಜನರ ಸಮಸ್ಯೆಗಳೇನು, ಅದಕ್ಕೆ ಪರಿಹಾರ ಏನು ಎಂದು ಹುಡುಕಿ ಅದನ್ನು ಒದಗಿಸಬೇಕು.


ರಾಜ್ಯದ ಜನ ನೀರಿಗಾಗಿ, ಕುಡಿಯುವ ನೀರಿಗಾಗಿ ಏನೇನು ಪಾಡು ಪಡುತ್ತಿದ್ದಾರೆ, ಅದಕ್ಕೆ ಸರ್ಕಾರ ಏನು ಮಾಡಿದೆ. ಈ ಕೆಲವು ಉದಾಹರಣೆ ನೋಡಿ.

ಅದು ಬಿಜಾಪುರ ಜಿಲ್ಲೆ. ಬೇಸಿಗೆ ಶುರುವಾಯಿತೆಂದರೆ ಇಲ್ಲಿನ ಎಷ್ಟೋ ಹಳ್ಳಿಗಳಿಗೆ ಟ್ಯಾಂಕರ್ ಮೂಲಕ ತಲುಪುವ ನೀರೆ ನೀರು. ಇಲ್ಲವಾದರೆ ಇಲ್ಲ. ಇದು ಸ್ಥಿತಿ. ಆದರೆ ಈ ವರ್ಷ ನೀರಿಗೆ ಹಾಹಾಕಾರವೆದ್ದಿದ್ದರೂ ಇನ್ನೂ ನೀರಿನ ಟ್ಯಾಂಕರ್‌ಗಳ ಪತ್ತೆ ಇಲ್ಲ. ನೀರಿನ ತೀವ್ರ ಸಮಸ್ಯೆ ಇರುವ ಜಾಗಗಳಲ್ಲಿ ಹೊಸದಾಗಿ 500 ಕೊಳವೆ ಬಾವಿಗಳನ್ನು ಕೊರೆಸಲು ಜಿಲ್ಲಾಡಳಿತ ಪ್ರಸ್ತಾವನೆ ಸಲ್ಲಿಸಿ ಕಾಯುತ್ತಾ ಕೂತಿದ್ದರೆ ಸರ್ಕಾರದಿಂದ ಅದಕ್ಕೆ ಅಂಗೀಕಾರವೇ ಸಿಕ್ಕಿಲ್ಲ. ಬರೀ ಕಾಯುವದಷ್ಟೆ ಆಗಿದೆ.

ಇನ್ನು ಮುಖ್ಯಮಂತ್ರಿಗಳ ಸ್ವಂತ ಜಿಲ್ಲೆ

ಪುಟ 15 ಕ್ಕೆ

ಜನವಿರೋಧಿ ಮಸೂದೆಗಳ ಮಂಡನೆ : ಬಿಜೆಪಿಯ ಬೆಂಬಲ ಯಾಚನೆ



■ ವೇದರಾಜ ಎನ್.ಕೆ.

ಪ್ರಸಕ್ತ ಬಜೆಟ್ ಅಧಿವೇಶನದಲ್ಲಿ ಯುಪಿಎ-2 ಸರಕಾರ ತನ್ನ ಜನ-ವಿರೋಧಿ ಆಶಯಗಳನ್ನು, 'ಆಮ್ ಆದ್ಮಿ' ಘೋಷಣೆ ಒಂದು ಕ್ರೂರ ನಟನೆ ಎಂಬುದನ್ನು ದೃಢಗೊಳಿಸಿದೆ. ಈ ಅಲ್ಪಕಾಲದ ಸಂಸತ್ ಅಧಿವೇಶನದಲ್ಲಿ ದೇಶದ ಅರ್ಧದಷ್ಟು ಜನಸಂಖ್ಯೆಯಿರುವ ಮಹಿಳೆಯರ ಬಹಳ ದಿನಗಳ ಬೇಡಿಕೆಯಾದ ಶೇ.33 ಮೀಸಲಾತಿ ಕುರಿತ ಮಸೂದೆಯನ್ನು 'ಒಮ್ಮತ' ಇಲ್ಲ ಎಂದು ಮಂಡಿಸಲಾಗದ ಸರಕಾರ, ದೇಶದ ಹಿಡಿಯಷ್ಟು ಬಂಡವಾಳಿಗರ, ಮಾಲಕರ ಸಮ್ಮತಿ ಮಾತ್ರ ಇರುವ ಮೂರು ಜನ-ವಿರೋಧಿ ಮಸೂದೆಗಳನ್ನು ಮಂಡಿಸಿದೆ. ಇದರಲ್ಲಿ ಅದಕ್ಕೆ ತೃಣಮೂಲ ಕಾಂಗ್ರೆಸ್, ಡಿಎಂಕೆಯಂತಹ ತನ್ನ ಮಿತ್ರಪಕ್ಷಗಳ ಬೆಂಬಲವೂ ಸಾಲದಾದಾಗ, ತನ್ನ ಪ್ರಬಲ ಪ್ರತಿಸ್ಪರ್ಧಿಯೆನಿಸಿರುವ ಬಿಜೆಪಿಯ ನೆರವು ಪಡೆಯಲೂ ಅದು ಹಿಂಜರಿಯಲಿಲ್ಲ.

ಮಾರ್ಚ್ 22ರಂದು ಬ್ಯಾಂಕಿಂಗ್ ಕಾನೂನುಗಳ ತಿದ್ದುಪಡಿ ಮಸೂದೆಯನ್ನು ಮಂಡಿಸಲಾಯಿತು. ಇದು ನಮ್ಮ ದೇಶದ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಖಾಸಗಿಯವರ ಪ್ರಾಬಲ್ಯವನ್ನು ಹೆಚ್ಚಿಸುವ ಉದ್ದೇಶ ಹೊಂದಿರುವ ಮಸೂದೆ.

ಮಾರ್ಚ್ 23ರಂದು ರಾಜ್ಯಸಭೆಯಲ್ಲಿ ಕಾರ್ಮಿಕ ಕಾನೂನುಗಳು(ಕೆಲವು ಸಂಸ್ಥೆಗಳಿಗೆ ವರದಿ ಒಪ್ಪಿಸುವುದರಲ್ಲಿ, ದಾಖಲಾತಿಗಳನ್ನು ಇಡುವಲ್ಲಿ ವಿನಾಯ್ತಿ) ಮಸೂದೆಯನ್ನು ಮಂಡಿಸಲಾಯಿತು. ಇದು 40ರ ವರೆಗೆ ದುಡಿಮೆಗಾರರಿರುವ ಉದ್ದಿಮೆಗಳನ್ನು ಮೂಲ ಕಾರ್ಮಿಕ ಕಾನೂನುಗಳಿಂದ, ಕನಿಷ್ಟ ಕೂಲಿ, ಕೆಲಸದ ಅವಧಿ, ಸಂಬಳ ಪಾವತಿ, ಬೋನಸ್ ನೀಡಿಕೆ ಮುಂತಾದ ಬಾಧ್ಯತೆಗಳಿಂದ ಮುಕ್ತಗೊಳಿಸುವ, ಮಾಲಕರು ಈಗ ಎಸಗುತ್ತಿರುವ ಅಪರಾಧಗಳನ್ನು ಕಾನೂನುಬದ್ಧಗೊಳಿಸುವ ಉದ್ದೇಶ ಹೊಂದಿದೆ.

ಮಾರ್ಚ್ 24ರಂದು ಈ ಹಿಂದೆ ಯುಪಿಎ-1 ರ ಅವಧಿಯಲ್ಲಿ ಎಡಪಕ್ಷಗಳ ಪ್ರಬಲ ವಿರೋಧದಿಂದಾಗಿ ರದ್ದುಗೊಂಡ ಪೆನ್ಶನ್ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (ಪಿಎಫ್ಆರ್‌ಡಿಎ) ಮಸೂದೆಯನ್ನು ಮತ್ತೆ ಮಂಡಿಸಲಾಯಿತು. ಇದು ಸರಕಾರವನ್ನು ಸಾಮಾಜಿಕ ಭದ್ರತೆ ಒದಗಿಸುವ ಬಾಧ್ಯತೆಯಿಂದ ಮುಕ್ತಗೊಳಿಸುವ, ಸಟ್ಟಾಕೋರರಿಗೆ ಅತಿ ದೊಡ್ಡ ಬಕ್ಷೀಸು ನೀಡಲು ಅದಕ್ಕಾಗಿ ದುಡಿಮೆಗಾರರ ಅತಿ ದೊಡ್ಡ ಲೂಟಿಗೆ ಮುಂದಾಗಿರುವ ಮಸೂದೆ.

★

ಕಪ್ಪು ಹಣದ ಪತ್ತೆಯಲ್ಲಿ ಏಕೆ ಇಂತಹ ನಿಷ್ಕ್ರಿಯತೆ?

ಮತ್ತೆ ಸರಕಾರಕ್ಕೆ ಸುಪ್ರಿಂ ಕೋರ್ಟ್ ತರಾಟೆ

ವಿದೇಶಗಳಲ್ಲಿ ಪೇರಿಸಿಟ್ಟ ಕಪ್ಪುಹಣದ ಮೂಲವನ್ನು ಪತ್ತೆ ಮಾಡಲು ಯಾವುದೇ ಸಮಂಜಸ ಪ್ರಯತ್ನ ನಡೆಯುತ್ತಿಲ್ಲ, ಈಗಲೂ ಈ ದಿಕ್ಕಿನಲ್ಲಿ ಏನೂ ಪ್ರಗತಿ ಸಾಧ್ಯವಾಗಿಲ್ಲ ಎಂಬುದು ಸತ್ಯಸಂಗತಿ ಎಂದು ಸುಪ್ರಿಂಕೋರ್ಟ್ ಮಾರ್ಚ್ 28ರಂದು ಮತ್ತೆ ತನ್ನ ಕಳವಳವನ್ನು ವ್ಯಕ್ತಪಡಿಸಿತು. ಅದು ರಾಷ್ಟ್ರೀಯ ಭದ್ರತೆಗೆ ಒಡ್ಡಿರುವ ಅಪಾಯದ ಬಗ್ಗೆ ತನಿಖೆ ಎಲ್ಲಿಗೆ ತಲುಪಿದೆ ಎಂಬುದನ್ನು ತಿಳಿಸಿ ಎಂದು ಯುಪಿಎ-2 ಸರಕಾರಕ್ಕೆ ಹೇಳಿದೆ.

ಜಾರಿ ನಿರ್ದೇಶನಾಲಯ ಸಲ್ಲಿಸಿದ ತನಿಖೆಯ ಸ್ಥಿತಿ-ಗತಿ ವರದಿಯನ್ನು ಪರಿಶೀಲಿಸಿದ ನ್ಯಾಯಾಲಯ 'ಇದನ್ನು ನೋಡಿದ ಮೇಲೆ ಶಾಂತವಾಗಿರುವುದು, ಸುಮ್ಮನಿರುವುದು ಬಹಳ ಕಷ್ಟ' ಎಂದು ಖಾರವಾಗಿ ಹೇಳಿದೆ. 2008ರಿಂದ ಈ ಎಲ್ಲ ಸಂಸ್ಥೆಗಳು ಏಕೆ ನಿದ್ದೆ ಮಾಡುತ್ತಿವೆ? ನಾವು ಮಧ್ಯಪ್ರವೇಶಿಸಿದ ನಂತರವೇ ಚಲಿಸಲಾರಂಭಿಸಿದ್ದು ಏಕೆ?-ಇದು ದೇಶದ ಸರ್ವೋಚ್ಚ ನ್ಯಾಯಾಲಯ ಸರಕಾರದ ಮುಂದಿಟ್ಟಿರುವ ಪ್ರಶ್ನೆ.



ಈ ನಡುವೆ ಯುಪಿಎ-2 ಸರಕಾರ ರೂಪಿಸುತ್ತಿರುವ 'ಲೋಕ್‌ಪಾಲ್ ಮಸೂದೆ'ಯ ಉದ್ದೇಶ ಭ್ರಷ್ಟರನ್ನು ಶಿಕ್ಷಿಸುವುದಕ್ಕಿಂತ ರಕ್ಷಿಸುವುದೇ ಇದ್ದಂತಿದೆ, ಪ್ರಧಾನಿಗಳು ಮಾರ್ಚ್ 8ರಂದು ಒಂದು ಉಪಸಮಿತಿಯನ್ನು ರಚಿಸಿದರೂ, ಈ ಮಸೂದೆಯನ್ನು ರೂಪಿಸುವಲ್ಲಿ ಸಾರ್ವಜನಿಕರು ಪಾತ್ರ ವಹಿಸುವಂತೆ ಅವಕಾಶ ಕಲ್ಪಿಸಲು ಸರಕಾರ ನಿರಾಕರಿಸುತ್ತಿದೆ ಎಂದು ದೂರಿರುವ ಪ್ರಖ್ಯಾತ ಸಾಮಾಜಿಕ ಕಾರ್ಯಕರ್ತ ಅಣ್ಣಾ ಹಜಾರೆ ಎಪ್ರಿಲ್ 5ರಿಂದ ಉಪವಾಸ ಮುಷ್ಕರ ನಡೆಸುವುದಾಗಿ ಹೇಳಿದ್ದಾರೆ.

★

ಶಿಕ್ಷಣ ವಲಯದಲ್ಲೂ ವಿದೇಶೀಯರ ಪ್ರವೇಶ:

ವೈದ್ಯಕೀಯ ಮಂಡಳಿಯ ಆತಂಕ

ಆರೋಗ್ಯ ವಲಯದಲ್ಲಿರುವ ಶಿಕ್ಷಣ ಸಂಸ್ಥೆಗಳಲ್ಲಿ ಈಗಲೇ 3000-4000 ಶಿಕ್ಷಕರ ಕೊರತೆಯಿದೆ, 7ರಿಂದ 8ಲಕ್ಷ ವೈದ್ಯರ ಕೊರತೆಯಿದೆ. ವಿದೇಶೀ ಸಂಸ್ಥೆಗಳಿಗೆ ಈ ವಲಯದಲ್ಲಿ ಅವಕಾಶ ಕೊಟ್ಟರೆ ಈ ಕೊರತೆ ಇನ್ನೂ ಉಲ್ಬಣಗೊಳ್ಳುತ್ತದೆ. ಏಕೆಂದರೆ ಅವರು ಕೊಡಲು ಸಾಧ್ಯವಿರುವ ಹೆಚ್ಚಿನ ಸಂಬಳ-ಸೌಕರ್ಯಗಳಿಂದ ಈಗ ಇರುವವರೂ ಅಲ್ಲಿಗೆ ಹೋಗುತ್ತಾರೆ. ಇದು ವಿದೇಶಿ ಶಿಕ್ಷಣ ಸಂಸ್ಥೆಗಳು(ಪ್ರವೇಶ ಮತ್ತು ನಿರ್ವಹಣೆಯ ನಿಯಂತ್ರಣ) ಮಸೂದೆ, 2010ರ ಬಗ್ಗೆ ಚರ್ಚಿಸಲು ರಚಿಸಿರುವ ಸಂಸದೀಯ ಸಮಿತಿಯ ಮುಂದೆ ಆರೋಗ್ಯ ಇಲಾಖೆಯ ಅಧಿಕಾರಿಗಳು ಮತ್ತು ಭಾರತೀಯ ವೈದ್ಯಕೀಯ ಮಂಡಳಿಯ ಮುಖ್ಯಸ್ಥರು ವ್ಯಕ್ತಪಡಿಸಿರುವ ಆತಂಕ. ವೈದ್ಯಕೀಯ ಮಂಡಳಿಯ ಮುಖ್ಯಸ್ಥರು ಇನ್ನೊಂದು ಆತಂಕದ ಅಂಶವನ್ನೂ ಮತ್ತೊಮ್ಮೆ ಹೇಳಿದರು. ಭಾರತದಲ್ಲಿ ವೈದ್ಯಕೀಯ ಪದವಿ ನೀಡುವ ಯಾವುದೇ ಸಂಸ್ಥೆ ಮಂಡಳಿಯ ತಪಾಸಣೆಗೆ ಒಳಪಡಬೇಕು. ಆದರೆ ಈ ಮಸೂದೆಯಲ್ಲಿ ವಿದೇಶಿ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ ಇಂತಹ ತಪಾಸಣೆಯ ಪ್ರಸ್ತಾಪವಿಲ್ಲ!

★

ವಿಕಿಲೀಕ್ಸ್ : ಗೃಹಮಂತ್ರಿಗಳಿಗೆ ಗ್ರಹಚಾರ

ವಿಕಿಲೀಕ್ಸ್‌ನಿಂದ ಸೋರಿಕೆಯಾಗಿರುವ ಕೇಬಲ್‌ಗಳಿಗೆ ಘನತೆ ಕೊಡಬೇಡಿ - ಹೀಗಂದವರು ಯುಪಿಎ-2 ಸರಕಾರದ ಗೃಹಮಂತ್ರಿಗಳು. ಭಾರತದಲ್ಲಿ ದಕ್ಷಿಣ ಮತ್ತು ಪಶ್ಚಿಮ ಭಾಗಗಳು ಮಾತ್ರ ಇದ್ದಿದ್ದರೆ ಭಾರತ ಇನ್ನಷ್ಟು ಪ್ರಗತಿ ಸಾಧಿಸುತ್ತಿತ್ತು ಎಂದು ಅಮೆರಿಕನ್ ರಾಜತಾಂತ್ರಿಕರಿಗೆ ಹೇಳಿರುವುದಾಗಿ ಈ 'ಸೋರಿಕೆ' ತಿಳಿಸಿದ್ದ ಹಿನ್ನೆಲೆಯಲ್ಲಿ ಅವರು ಈ ಅಭಿಪ್ರಾಯ ವ್ಯಕ್ತಪಡಿಸಿದರು.

ಒಂದೆರಡು ದಿನಗಳ ನಂತರ 'ಸೋರಿದ' ಇನ್ನೊಂದು ಕೇಬಲ್, ಬಿಜೆಪಿ ಮುಖಂಡ ಅರುಣ್ ಜೇಟ್ಲಿಯವರು ತಮ್ಮ ಪಕ್ಷಕ್ಕೆ ಹಿಂದುತ್ವ ಒಂದು ಸಮಯಸಾಧಕ ವಿಷಯ ಎಂದು ಇನ್ನಾರೋ ಅಮೆರಿಕಾ ರಾಜತಾಂತ್ರಿಕನಿಗೆ ಹೇಳಿದ್ದುದಾಗಿ ವರದಿಯಾದಾಗ ಕಾಂಗ್ರೆಸಿನ ವಕ್ತಾರರು ಜೇಟ್ಲಿಯವರು ದೇಶದ ಕ್ಷಮೆ ಕೇಳಬೇಕು ಎಂದರು; ಅಂದರೆ ಈ ಕೇಬಲ್‌ಗಳಿಗೆ 'ಘನತೆ'ಯಂತೂ ಇದೆ ಎಂದು ಒಪ್ಪಿಕೊಂಡು ತಮ್ಮ ಗೃಹಮಂತ್ರಿಗಳನ್ನು ಪೇಚಿಗೆ ಸಿಲುಕಿಸಿದರು. ಗೃಹಮಂತ್ರಿಗಳು ಮಾತ್ರವಲ್ಲ, ತಮ್ಮ ಪ್ರಾದೇಶಿಕ ಮಿತ್ರಪಕ್ಷಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರೆನ್ನಲಾದ ತಮ್ಮ ಅಧ್ಯಕ್ಷೆ, ಪ್ರಧಾನಿ ಎಲ್ಲರನ್ನೂ.

ಏನೇ ಆಗಲಿ, ಅಮೆರಿಕಾದೊಡನೆ ಸಾಮರಿಕ ಸಂಬಂಧಗಳನ್ನು ಕುದುರಿಸುವಲ್ಲಿ, ಅದರ 'ಅಡಿಯಾಳು ಮಿತ್ರ'ನಾಗಿ ಪರಿವರ್ತನೆಗೊಳ್ಳುವಲ್ಲಿ ಮತ್ತು ಪರಮಾಣು ವ್ಯವಹಾರದಲ್ಲಿ ಈ ಆಳುವ ವರ್ಗಗಳ ಎಲ್ಲಾ ಪಕ್ಷಗಳ ಪಾತ್ರವಂತೂ ಈಗ ದೃಢಪಟ್ಟಿದೆ.

★

ಹತ್ತೇನು, 50 ವರ್ಷ ಕಾದಿದ್ದೇವೆ, ಸ್ವಾಮೀ!

ಅತಿ ಹೆಚ್ಚು ರೈತರ ಸಂಕಟಗಳನ್ನು ಕಂಡ ಮಹಾರಾಷ್ಟ್ರದ ವಿದರ್ಭ ಪ್ರದೇಶಕ್ಕೆ ಪ್ರಧಾನಮಂತ್ರಿಗಳು ಸ್ವತಃ ಬಂದು ವಿಶೇಷ ಪ್ಯಾಕೇಜು ನೀಡಿದ್ದು ನಮ್ಮ ಓದುಗರಿಗೆ ನೆನಪಿರಬಹುದು. ಆದರೂ ಏನೂ ಪ್ರಯೋಜನವಿಲ್ಲ ಎಂದು ಗೊಣಗಬಾರದಂತೆ. ಐದು ವರ್ಷಗಳಲ್ಲಿ ಅಲ್ಪ-ಸ್ವಲ್ಪ ಪ್ರಯೋಜನಗಳು ಕಾಣಬಹುದೇನೋ. ಒಂದು ದಶಕದ ಮೇಲಷ್ಟೇ ಪೂರ್ಣ ಪರಿಣಾಮ ಕಾಣಬರಲುಸಾಧ್ಯ. ಆದ್ದರಿಂದ ಕೇಂದ್ರೀಯ ಸ್ಕೀಮುಗಳ ಪ್ರಯೋಜನದ ಬಗ್ಗೆ ತಾಳ್ಮೆ ಅಗತ್ಯ ಎಂದು ಭಾರತದ ಯೋಜನಾ ಆಯೋಗದ ಉಪಾಧ್ಯಕ್ಷ ಮತ್ತು 'ವಿಕಿಲೀಕ್ಸ್' ಸೋರಿಸಿದ ಕೇಬಲ್ ಪ್ರಕಾರ ಯುಪಿಎ-2 ಸರಕಾರದ ಹಣಕಾಸು ಮಂತ್ರಿಗಳಾಗಲು ಅಮೆರಿಕಾದ ವಶೀಲಿ ಪಡೆದಿದ್ದ ಮೊಂಟೆಕ್‌ಸಿಂಗ್ ಅಹ್ಲುವಾಲಿಯ ವಿದರ್ಭದ ಜನತೆಗೆ ಕಿವಿ ಮಾತು ಹೇಳಿದ್ದಾರೆ. ಅವರು ನಾಶಿಕ್‌ನಲ್ಲಿ 'ಜಿಡಿಪಿ ಬೆಳೆಯುತ್ತಿದ್ದರೂ ಬೆಳೆಯುತ್ತಿರುವ ತಾರತಮ್ಯ' ಎಂಬ ಬಗ್ಗೆ ಮಾತನಾಡುತ್ತಿದ್ದರು. ಇದನ್ನು ಕೇಳಿದ ವಿದರ್ಭ ಆರ್ಥಿಕ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ವಿಲಾಸ್ ಕಾಳೆ 'ನಾವು ಈಗಾಗಲೇ, ಹತ್ತೇನು, 50 ವರ್ಷ ಕಾದಿದ್ದೇವೆ, ಸ್ವಾಮಿ' ಎಂದರಂತೆ!

ಜಗದಗಲ

ಶರತ್‌ಚಂದ್ರ

ಸಾರ್ವಜಮಿಕ ಸೇವೆಗಳಿಗೆ ಹಣ ಕಡಿತ

ಐದು ಲಕ್ಷ ಬ್ರಿಟಿಶ್ ಕಾರ್ಮಿಕರ ಬೃಹತ್ ಪ್ರತಿಭಟನೆ

ಆರೋಗ್ಯ, ಶಿಕ್ಷಣ ಮುಂತಾದ ಕಲ್ಯಾಣ ಸೇವೆಗಳು ಮತ್ತು ಸಾರ್ವಜನಿಕ ಹೂಡಿಕೆಗಳಲ್ಲಿ ಭಾರೀ ಕಡಿತ ಮಾಡುವ ಟೋರಿ-ಲಿಬರಲ್ ಬ್ರಿಟಿಷ್ ಸರ್ಕಾರದ ಯೋಜನೆಗಳನ್ನು ಪ್ರತಿಭಟಿಸಿ ಐದು ಲಕ್ಷದಷ್ಟು ಹೆಚ್ಚು ಕಾರ್ಮಿಕರು ಮಾರ್ಚ್ 26 ರಂದು ಲಂಡನಿನಲ್ಲಿ ಬೃಹತ್ ಪ್ರದರ್ಶನ ಮತ್ತು ರ್‍ಯಾಲಿ ನಡೆಸಿದರು. ಇದರಿಂದ ಲಕ್ಷಾಂತರ ಉದ್ಯೋಗಗಳು ನಾಶವಾಗಿವೆ. ಪ್ರದರ್ಶನ ಮತ್ತು ಕೇಂದ್ರೀಯ ಲಂಡನಿನಲ್ಲಿ ರ್‍ಯಾಲಿಯನ್ನು ಬ್ರಿಟಿಷ್ ಕೇಂದ್ರೀಯ ಟ್ರೇಡ್ ಯೂನಿಯನ್ ಕಾಂಗ್ರೆಸ್ (ಟಿಯುಸಿ) ಆಯೋಜಿಸಿತ್ತು. ದೇಶದ ಮೂಲೆಗಳಿಂದ ಬಂದ ಬ್ರಿಟಿಷ್ ಆರೋಗ್ಯ ಸೇವೆ (ಎನ್ ಎಚ್ ಎಸ್) ಕಾರ್ಮಿಕರು, ನರ್ಸುಗಳು, ಶಿಕ್ಷಕರು, ಅಗ್ನಿಶಾಮಕ ದಳದವರು, ಸಾರ್ವಜನಿಕ ವಲಯದ ಕಾರ್ಮಿಕರು, ವಿದ್ಯಾರ್ಥಿಗಳು, ಪೆಂಶನ್ ದಾರರು ಭಾರೀ ಸಂಖ್ಯೆಯಲ್ಲಿ ಪ್ರದರ್ಶನದಲ್ಲಿ ಭಾಗವಹಿಸಿದ್ದರು.



ಥೇಮ್ಸ್ ನದಿ ದಂಡೆಯಿಂದ ಆರಂಭವಾದ ಪ್ರದರ್ಶನಕ್ಕೆ ವರ್ಣರಂಜಿತ ಬ್ಯಾನರುಗಳು, ಬಲೂನುಗಳು, ಧ್ವಜಗಳು, ನೃತ್ಯ-ಹಾಡುಗಳ ಬ್ಯಾಂಡುಗಳಿಂದ ಕಳೆ ಕಟ್ಟಿತ್ತು. ಸೀಟಿ ತುತ್ತೂರಿ ಬ್ಯಾಂಡು ಬಾರಿಸುತ್ತಾ ಹೆಜ್ಜೆ ಹಾಕಿದ ಹಲವು ಕಾರ್ಮಿಕರು ಮಕ್ಕಳು ಮತ್ತು ಪೂರ್ತಿ ಕುಟುಂಬದೊಂದಿಗೆ ಭಾಗವಹಿಸಿದ್ದ ಪ್ರದರ್ಶನ ಜೀವಂತಿಕೆಯಿಂದ ತುಂಬಿತ್ತು. ಪ್ರದರ್ಶನದ ನಾಯಕತ್ವ ವಹಿಸಿದ್ದ ಕೇಂದ್ರೀಯ ಟಿಯುಸಿ ಪ್ರಧಾನ ಕಾರ್ಯದರ್ಶಿ ಬ್ರೆಂಡನ್ ಬಾರ್ಬರ್ ಲಂಡನಿನ ಹೈಡ್ ಪಾರ್ಕಿನಲ್ಲಿ ರ್‍ಯಾಲಿಯನ್ನು ಉದ್ದೇಶಿಸಿ ಮಾತನಾಡಿದರು. ಬ್ರಿಟಿಶ್ ಜನತೆ ಸರ್ಕಾರದ ಕಡಿತದ ನೀತಿಗಳ ಬಗ್ಗೆ ಈ ಪ್ರದರ್ಶನಗಳ ಮೂಲಕ ಗಟ್ಟಿಯಾಗಿ ಮಾತನಾಡಿದೆ. ಸರ್ಕಾರ ಈಗಲಾದರೂ ತನ್ನ ನೀತಿಗಳನ್ನು ಬದಲಿಸಬೇಕು. ಇನ್ನೂ ಸರ್ಕಾರ ಕೇಳದಿದ್ದರೆ, ಮುಂದಿನ ವಾರ ಆರೋಗ್ಯ ಸೇವೆ ಕಡಿತದ ವಿರುದ್ಧ ಕಾರ್ಮಿಕರು ತಮ್ಮ ಕ್ಷೇತ್ರಗಳಲ್ಲಿ ತಮ್ಮ ಎಂ.ಪಿ.ಗಳ ಮೂಲಕ ಇನ್ನಷ್ಟು ಒತ್ತಡ ಹೇರಲಿದ್ದಾರೆ ಎಂದರು.

ಯುನೈಟ್ ಮತ್ತು ಯುನಿಸನಿನ ಕಾರ್ಮಿಕ ನಾಯಕರು ಸಹ ರ್‍ಯಾಲಿಯನ್ನು ಉದ್ದೇಶಿಸಿ ಕಡಿತದ ದುಷ್ಪರಿಣಾಮಗಳ ಬಗ್ಗೆ ಮಾತನಾಡಿದರು. ಲೇಬರ್ ಎಂ.ಪಿ.ಗಳು ಮುಂದಿನ ಚುನಾವಣೆಗೆ ಮಾತ್ರ ಕಾಯದೆ, ಪಾರ್ಲಿಮೆಂಟಿನಲ್ಲಿ ಕಡಿತದ ವಿರುದ್ಧ ತಮ್ಮ ದನಿ ಎತ್ತಬೇಕೆಂದು ತಾಕೀತು ಮಾಡಿದರು. ವಿರೋಧಿ ಲೇಬರ್ ಪಕ್ಷದ ನಾಯಕ ಎಡ್ ಮಿಲಿಬ್ಯಾಂಡ್ ಪ್ರದರ್ಶನದಲ್ಲಿ ಭಾಗವಹಿಸದಿದ್ದರೂ, ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದರು. ಟೋರಿಗಳು ನಾನು ರ್‍ಯಾಲಿಗೆ ಬರಬಾರದೆಂದು ತಾಕೀತು ಮಾಡಿದರು. ಆದರೂ ಸಾರ್ವಜನಿಕ ಸೇವೆಗಳನ್ನು ಉಳಿಸಿ, ಬೆಳೆಸಿ ರಕ್ಷಿಸಲು ನಿಮ್ಮ ಜತೆ ಹೆಜ್ಜೆ ಹಾಕಲು ನನಗೆ ಸಂತೋಷವಾಗುತ್ತದೆ. ಟೋರಿ ಸರ್ಕಾರ ಈ ರ್‍ಯಾಲಿ ಅಲ್ಪ ಸಂಖ್ಯಾತರದ್ದು ಎನ್ನುತ್ತದೆ. ಆದರೆ ನನಗೆ ಗೊತ್ತು ಇದು ಬ್ರಿಟನಿನ ಮುಖ್ಯಧಾರೆ ಅಂತ ಎಂದರು ಮಿಲಿಬ್ಯಾಂಡ್. ಆದರೆ ಸರ್ಕಾರ ತನ್ನ ಕಡಿತದ ನೀತಿ ಬದಲಿಸುವುದಿಲ್ಲ ಎಂದು ಘೋಷಿಸಿದೆ. ಆದ್ದರಿಂದ ಕಾರ್ಮಿಕರು ಮತ್ತು ಸರ್ಕಾರದ ನಡುವೆ ಮುಂಬರುವ ದಿನಗಳಲ್ಲಿ ದೀರ್ಘ ಸಂಘರ್ಷ ಖಚಿತವಾಗಿದೆ.

ಪ್ರದರ್ಶನದಲ್ಲಿ ಭಾಗವಹಿಸದ ಮತ್ತು ಅದಕ್ಕೆ ಸಂಬಂಧಿಸಿರದ ಕೆಲವು ನೂರು ಮುಸುಕುಧಾರಿ ಪುಂಡರು ಕೇಂದ್ರೀಯ ಲಂಡನಿನ ಕೆಲವು ಅಂಗಡಿಗಳ, ಮುಖ್ಯ ಕಟ್ಟಡಗಳ ಕಚೇರಿಗಳ ಗಾಜು ಪುಡಿ ಮಾಡಿ ಲೂಟಿ ಮಾಡಿದರು. ಪೋಲೀಸರ ಮೇಲೆ ದಾಳಿ ಮಾಡಿದರು. ಟಿಯುಸಿ ಮತ್ತು ಪ್ರದರ್ಶನದ ಸಂಘಟಕರು ಈ ಹಿಂಸಾಚಾರದ "ವಿಷಾದಪೂರ್ಣ ಖಂಡನೆ" ಮಾಡಿದ್ದಾರೆ.

ಎರಡು ಜರ್ಮನ್ ರಾಜ್ಯಗಳಲ್ಲಿ ಹಸಿರು ಪಕ್ಷದ ಜಯ

ದೂರದ ಜಪಾನಿ ಸುನಾಮಿ ಮತ್ತು ಅಣು ಶಕ್ತಿ ಘಟಕಗಳ ದುರಂತ ಆಶ್ಚರ್ಯಕಾರಿ ರೀತಿಯಲ್ಲಿ ಎರಡು ಜರ್ಮನಿಯ ರಾಜ್ಯಗಳಲ್ಲಿ ರಾಜಕೀಯ ಸುನಾಮಿ ತಂದಿತು. ಎರಡೂ ರಾಜ್ಯಗಳ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಪರಿಣಾಮ ಬೀರಿದವು. ಎರಡೂ ರಾಜ್ಯಗಳಲ್ಲಿ ಪರಿಸರವಾದಿ ಹಸಿರು ಪಕ್ಷ ಮೊದಲ ಬಾರಿಗೆ ಒಂದು ರಾಜ್ಯದಲ್ಲಿ ಸರ್ಕಾರದ ನಾಯಕತ್ವ ವಹಿಸಲಿದೆ. ಪ್ರಸಿದ್ಧ ಕೈಗಾರಿಕಾ ಕೇಂದ್ರವಾದ ಸ್ಟುಟ್ ಗಾರ್ಟ್ ರಾಜಧಾನಿ ಆಗಿರುವ ಬಾರ್ಡೆನ್-ವ್ಯುಟೆಂಬರ್ಗ್ ರಾಜ್ಯದಲ್ಲಿ ಮೊದಲ ಬಾರಿಗೆ ಛಾನ್ಸಲರ್ ಎಂಜೆಲಾ ಮೆರ್ಕೆಲಾರ ಕ್ರಿಶ್ಚಿಯನ್ ಡೆಮೊಕ್ರಾಟಿಕ್ ಪಕ್ಷ 58 ವರ್ಷಗಳಲ್ಲಿ ಮೊದಲ ಬಾರಿಗೆ ಅಧಿಕಾರ ಕಳೆದುಕೊಂಡಿದೆ. ಪರಿಸರವಾದಿ ಹಸಿರು ಪಕ್ಷ ಶೇ. 24.2 ಮತಗಳಿಸಿ ಮೊದಲ ಸ್ಥಾನ ಗಳಿಸಿದೆ. ಶೇ.23.1 ಮತ ಗಳಿಸಿದ ಸೋಶಲಿಸ್ಟ್ ಪಕ್ಷದ ಜತೆ ಸರ್ಕಾರ ನಡೆಸಲಿದೆ. ಹಸಿರು ಪಕ್ಷ ತನ್ನ ಮತ ಗಳಿಕೆಯನ್ನು ಇಮ್ಮಡಿಗೊಳಿಸಿಕೊಂಡು, ಉಳಿದೆಲ್ಲಾ ಪಕ್ಷಗಳು ಮತ ಕುಸಿತ ಕಂಡಿವೆ. ಹಿಂದೆ ರಾಜ್ಯದಲ್ಲಿ - ಈಗ ಕೇಂದ್ರದಲ್ಲೂ - ಆಳುತ್ತಿರುವ ಕ್ರಿಶ್ಚಿಯನ್ ಡೆಮೊಕ್ರಾಟಿಕ್ ಮತ್ತು ಫ್ರೀ ಡೆಮೊಕ್ರಾಟಿಕ್ ಯೂನಿಯನ್ ಪಕ್ಷಗಳು ತಲಾ ಶೇ. 5 ರಷ್ಟು ಮತ ಕುಸಿತ ಕಂಡು ಅಧಿಕಾರ ಕಳೆದುಕೊಂಡಿವೆ. ಅದೂ ಈ ರಾಜ್ಯ ದೇಶದಲ್ಲೇ ಅತ್ಯಂತ ಸಾಂಪ್ರದಾಯಿಕ ಮತ್ತು ಬಲಪಂಥೀಯ ನೆಲೆಗಳು ಎಂದು ಪರಿಗಣಿತವಾಗಿವೆ.

ಜಪಾನಿ ಅಣು ಶಕ್ತಿ ದುರಂತದ ನಂತರ ಜರ್ಮನಿಯ ತುಂಬಾ ಅಣು ಶಕ್ತಿ ಸ್ಥಾವರಗಳನ್ನು ಮುಚ್ಚಬೇಕೆಂದು ಭಾರೀ ಮತ ಪ್ರದರ್ಶನಗಳು ನಡೆದಿದ್ದವು. ಬರ್ಲಿನಿನಲ್ಲಿ 90 ಸಾವಿರ ಮತ್ತು ನಾಲ್ಕು ಪ್ರಮುಖ ನಗರಗಳಲ್ಲಿ 4 ಲಕ್ಷಕ್ಕೂ ಹೆಚ್ಚು ಜನ ಇಂತಹ ಪ್ರದರ್ಶನಗಳಲ್ಲಿ ಭಾಗವಹಿಸಿದ್ದರು. ಈ ರಾಜ್ಯದಲ್ಲೂ 22 ರಿಂದ 35 ವರ್ಷಗಳಷ್ಟು ಹಳೆಯದಾಗಿರುವ ಅಣು ಶಕ್ತಿ ಸ್ಥಾವರಗಳ ಅಸುರಕ್ಷಿತತೆ ಬಗ್ಗೆ ತೀವ್ರ ಭೀತಿ ಇದಕ್ಕೆ ಕಾರಣವಾಗಿರಬಹುದು. ಅಣು ಶಕ್ತಿ ಸ್ಥಾವರಗಳ ಬಗ್ಗೆ ಮೆರ್ಕೆಲ್ ಸರ್ಕಾರದ ಎಡಬಿಡಂಗಿ ನೀತಿಗಳು ಜನರ ಆಕ್ರೋಶಕ್ಕೆ ಕಾರಣವಾಗಿವೆ. ಹಿಂದೆ ಅಣು ಶಕ್ತಿ ಸ್ಥಾವರಗಳ ವಿಮರ್ಶೆಗೆ ಬದ್ಧವಾಗಿದ್ದು ಕಳೆದ ವರ್ಷ ಎಲ್ಲಾ ಸ್ಥಾವರಗಳಿಗೆ (ದೊಡ್ಡ ಅಣು ಶಕ್ತಿ ಕಂಪನಿಗಳ ಒತ್ತಡದಿಂದ) ವಿನಾಯಿತಿ ಕೊಟ್ಟಿತ್ತು. ಜಪಾನಿ ದುರಂತದ ನಂತರ ಏಳು ಸ್ಥಾವರಗಳನ್ನು ಮುಚ್ಚಿತ್ತು ಮತ್ತು ಹೊಸ ಸ್ಥಾವರಗಳ ಸ್ಥಾಪನೆಗೆ ತಡೆ ಹಾಕಿತ್ತು. ಈ ತಡೆ ಆಜ್ಞೆ ಚುನಾವಣೆಗಾಗಿ ನಾಟಕ. ಅದನ್ನು ಗಂಭೀರವಾಗಿ ತೆಗೆದುಕೊಳ್ಳ ಬೇಕಾಗಿಲ್ಲ ಎಂದು ಫ್ರೀ ಡೆಮೊಕ್ರಾಟಿಕ್ ಕೇಂದ್ರದ ಮಂತ್ರಿಯೊಬ್ಬ ಕೈಗಾರಿಕೋದ್ಯಮಿಗಳ ಜತೆ ಖಾಸಗಿ ಸಭೆಯಲ್ಲಿ ಹೇಳಿದ್ದು ಪತ್ರಿಕೆಗಳಿಗೆ ಲೀಕ್ ಆಗಿ ಸರ್ಕಾರದ ನೀತಿ ಬಗ್ಗೆ ಇನ್ನಷ್ಟು ಅಪನಂಬಿಕೆಗೆ ಕಾರಣವಾಯಿತು.



ಇನ್ನೊಂದು ರಾಜ್ಯ ರೈನ್ ಲ್ಯಾಂಡ್-ಪ್ಯಾಲಟಿನೇಟಿನಲ್ಲಿ ಸಹ ಹಸಿರು ಪಕ್ಷ (ಶೇ.11 ರಷ್ಟು ಮತ ಗಳಿಕೆ ಹೆಚ್ಚಿಸಿಕೊಂಡು) ಶೇ. 15.4 ಮತ ಗಳಿಸಿದೆ. ಅಲ್ಲೂ ಕ್ರಿಶ್ಚಿಯನ್ ಡೆಮೊಕ್ರಾಟಿಕ್ ಮತ್ತು ಫ್ರೀ ಡೆಮೊಕ್ರಾಟಿಕ್ ಯೂನಿಯನ್ ಪಕ್ಷಗಳ ಕೂಟ ಅಧಿಕಾರ ಕಳೆದುಕೊಂಡಿದೆ. ಸೋಶಲಿಸ್ಟ-ಹಸಿರು ಪಕ್ಷಗಳ ಕೂಟ ಅಲ್ಲೂ ಅಧಿಕಾರ ವಹಿಸಿಕೊಳ್ಳಲಿದೆ. ಫ್ರೀ ಡೆಮೊಕ್ರಾಟಿಕ್ ಆ ರಾಜ್ಯದಲ್ಲಿ ವಿಧಾನ ಸಭೆಗೆ ಪ್ರವೇಶ ಪಡೆಯಲು ಬೇಕಾದ ಕನಿಷ್ಠ ಶೇ. 5 ಮತ ಗಳಿಸಲಾಗದೆ, ಮೊದಲ ಬಾರಿಗೆ ವಿಧಾನ ಸಭೆಯಿಂದ ಕಾಣೆಯಾಗಿದೆ. ಜರ್ಮನ್ ಎಡ ಪಕ್ಷ ಹಸಿರು ಪಕ್ಷದಷ್ಟೇ ಅಣು ಶಕ್ತಿ ಸ್ಥಾವರಗಳ ವಿಮರ್ಶೆ ಬಗ್ಗೆ ಟೀಕಾತ್ಮಕ ನಿಲುವು ತೆಗೆದುಕೊಂಡಿದ್ದು, ಭಾರೀ ಪ್ರತಿಭಟನೆಗಳಲ್ಲಿ ಪ್ರಮುಖ ಪಾತ್ರ ವಹಿಸಿತ್ತು. ಆದರೆ ಎಡ ಪಕ್ಷದ ಮತ ಗಳಿಕೆ ಗಮನಾರ್ಹವಾಗಿ ಏರಿಲ್ಲ. ಚಳುವಳಿಯ ಚುನಾವಣಾ ಪ್ರಯೋಜನ ಹಸಿರು ಪಕ್ಷಕ್ಕೆ ಹೋಗಿದೆ.

ಪೋರ್ಚುಗಿಸ್ ಸರ್ಕಾರ ಪತನ

ಜೋಸ್ ಸಾಕ್ರೆಟಿಸ್ ನಾಯಕತ್ವದ ಸೋಶಲಿಸ್ಟ್ ಪಕ್ಷದ ಪೋರ್ಚುಗಿಸ್ ಸರ್ಕಾರ ಪಾರ್ಲಿಮೆಂಟಿನಲ್ಲಿ ವಿಶ್ವಾಸ ಮತ ಗಳಿಸಲಾಗದೆ ಬಿದ್ದು ಹೋಗಿದೆ. ಸಾಕ್ರೆಟಿಸ್ ಗೆ ಬಹುಮತ ಇಲ್ಲದೆ ಬಲಪಂಥೀಯ ಪಕ್ಷ ಸೋಶಲಿಸ್ಟ್ ಡೆಮೊಕ್ರಾಟಿಕ್ ಪಕ್ಷದ ಬೆಂಬಲದಿಂದ ಅಲ್ಪಸಂಖ್ಯಾತ ಸರ್ಕಾರ ನಡೆಸುತ್ತಿದ್ದರು. ಸಾಮಾಜಿಕ ಕಲ್ಯಾಣ ಸೇವೆಗಳ, ಸಾರ್ವಜನಿಕ ಕ್ಷೇತ್ರದಲ್ಲಿ ಹೂಡಿಕೆ-ವೆಚ್ಚ ಮತ್ತು ಉದ್ಯೋಗಗಳಲ್ಲಿ ತೀವ್ರ ಕಡಿತ ಇರುವ ಬಜೆಟ್ ವಿರುದ್ಧ ಕಮ್ಯುನಿಸ್ಟ್ ಪಕ್ಷ ಮಂಡಿಸಿದ ನಿರ್ಣಯ ಪಾಸಾಗಿ ಸಾಕ್ರೆಟಿಸ್ ರಾಜೀನಾಮೆ ಕೊಡಬೇಕಾಗಿ ಬಂದಿದೆ. ಆಳುವ ಸೋಶಲಿಸ್ಟ್ ಪಕ್ಷದ ಸದಸ್ಯರು ಬಿಟ್ಟರೆ ಎಲ್ಲಾ ಪಕ್ಷಗಳು (ಆಳುವ ಪಕ್ಷಕ್ಕೆ ಬೆಂಬಲ ನೀಡುತ್ತಿದ್ದ ಸೋಶಲಿಸ್ಟ್ ಡೆಮೊಕ್ರಾಟಿಕ್ ಪಕ್ಷ ಸೇರಿದಂತೆ) ನಿರ್ಣಯದ ವಿರುದ್ಧ ಮತ ಚಲಾಯಿಸಿದವು.

ಇದಕ್ಕೆ ಈ ತೀವ್ರ ಕಡಿತಗಳ ವಿರುದ್ಧ ಜನರಲ್ಲಿ ಹಬ್ಬಿದ್ದ ತೀವ್ರ ಆಕ್ರೋಶದ ಭಯ ಕಾರಣ. ಕಮ್ಯುನಿಸ್ಟ್ ಮತ್ತು ಹಸಿರು ಪಕ್ಷಗಳು ಕಾರ್ಮಿಕ ಯೂನಿಯನುಗಳು, ಸಾಮೂಹಿಕ ಸಂಘಟನೆಗಳು, ಸಾಮಾಜಿಕ ಚಳುವಳಿಗಳು ಜತೆ ಸೇರಿ ಪ್ರಬಲ ಜನತಾ ಚಳುವಳಿ ಸರ್ಕಾರದ ಈ ನಿಲುವುಗಳನ್ನು ವಿರೋಧಿಸುತ್ತಾ

ಪುಟ 15 ಕ್ಕೆ

ಮುಗಿಯದ ಭೂಮಿ....

ಪುಟ 12 ರಿಂದ

ದಿನಾಚರಣೆಯ ಅಂಗವಾಗಿ ಭ್ರಷ್ಟಾಚಾರ ಹಾಗೂ ಸಾಮ್ರಾಜ್ಯಶಾಹಿ ಧೋರಣೆಗಳ ವಿರುದ್ಧ ಡಿವೈಎಫ್ಐ ಕಾರ್ಯಕರ್ತರು ಡಿವೈಎಫ್ಐ ಮಂಗಳೂರು ನಗರ ಸಮಿತಿ ನೇತೃತ್ವದಲ್ಲಿ ಮಾರ್ಚ್ 22 ರ ಮುಸ್ಸಂಜೆ ಹೊತ್ತಿನಲ್ಲಿ ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಕಚೇರಿಯಿಂದ 'ಜಾಗೃತಿ ಜ್ಯೋತಿ' ಕಾರ್ಯಕ್ರಮ ನೆರವೇರಿಸಿದರು. ಭಾಗವಹಿಸಿದ ಕಾರ್ಯಕರ್ತರು ಮುಖಕ್ಕೆ ಭಗತ್‌ಸಿಂಗ್ ಮುಖವಾಡ ಧರಿಸಿ, ಜಿಲ್ಲಾಧಿಕಾರಿ ಕಛೇರಿಯಿಂದ ಕೈಯಲ್ಲಿ ಹಿಡಿದುಕೊಂಡ ಹಚ್ಚಿದ ದೀಪಗಳೊಂದಿಗೆ ಘೋಷಣೆ ಕೂಗುತ್ತಾ ಮೆರವಣಿಗೆಯಲ್ಲಿ ಭಗತ್‌ಸಿಂಗ್ ವೃತ್ತದೆಡೆಗೆ ಸಾಗಿಬಂದರು. ಭಗತ್‌ಸಿಂಗ್ ವೃತ್ತದಲ್ಲಿ ಸೇರಿದವರನ್ನುದ್ದೇಶಿಸಿ ಡಿವೈಎಫ್ಐ ಜಿಲ್ಲಾಧ್ಯಕ್ಷ ಮುನೀರ್ ಕಾಟಿಪಳ್ಳ ಮಾತನಾಡಿದರು. 75 ಕ್ಕೂ ಹೆಚ್ಚುಮಂದಿ ಯುವಕರು ಈ ವಿಶಿಷ್ಟ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಮಾರ್ಚ್ 23 ರಂದು ಬೆಳ್ತಂಗಡಿಯಲ್ಲಿ ಡಿವೈಎಫ್ಐ ಹಾಗೂ ಎಸ್‌ಎಫ್ಐ ತಾಲ್ಲೂಕು ಸಮಿತಿಗಳ ನೇತೃತ್ವದಲ್ಲಿ 150 ಮಂದಿಯ ಮೆರವಣಿಗೆ ಭಗತ್‌ಸಿಂಗ್ ಬೃಹತ್ ಚಿತ್ರದೊಂದಿಗೆ ಬೆಳ್ತಂಗಡಿ ಮೂರುಮಾರ್ಗ್ರದಿಂದ ಬಸ್ ನಿಲ್ದಾಣದಿಂದಲೂ ಅಂಬೇಡ್ಕರ್ ಭವನದವರೆಗೆ ಸಾಗಿಬಂತು.

ಬೆಳ್ತಂಗಡಿ ಬಸ್‌ಸ್ಟಾಪ್‌ನಲ್ಲಿ ಸಾರ್ವಜನಿಕರನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ ದಾಮೋದರ ಭಟ್ಟರು ಭಗತ್‌ಸಿಂಗ್ ಅವರ ಜೀವನ ಮತ್ತು ಹೋರಾಟವನ್ನು ಮತ್ತು ಅದರಲ್ಲಿನ ಸಾಮ್ರಾಜ್ಯಶಾಹಿ ವಿರೋಧಿ ವಿಚಾರವನ್ನು ವಿವರಿಸಿದರು. ಬಳಿಕ ಅಂಬೇಡ್ಕರ್ ಭವನದಲ್ಲಿ ನಡೆದ ಸಭೆಯಲ್ಲಿ ಸಮುದಾಯ ಸಂಘಟನೆಯ ವಲಯ ಕಾರ್ಯದರ್ಶಿ ವಾಸುದೇವ ಉಚ್ಚಿಲ್ ಅವರು ಭಗತ್‌ಸಿಂಗ್ ವಿಚಾರಗಳು ಹಾಗೂ ಅದರ ಪ್ರಸ್ತುತತೆ ಬಗ್ಗೆ ಮಾತನಾಡಿದರು. ಡಿವೈಎಫ್ಐ ಬೆಳ್ತಂಗಡಿ ತಾಲ್ಲೂಕು ಅಧ್ಯಕ್ಷ ಶಾಮರಾಜ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಭೆಯನ್ನುದ್ದೇಶಿಸಿ ಎಸ್‌ಎಫ್ಐ ಜಿಲ್ಲಾಧ್ಯಕ್ಷ ಸುಜೀತ್ ಬೆಳ್ತಂಗಡಿ, ಡಿವೈಎಫ್ಐ ತಾಲ್ಲೂಕು ಕಾರ್ಯದರ್ಶಿ ಶೇಖರ ಲ್ಯಾಲ ಮಾತನಾಡಿದರು. ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾಧ್ಯಕ್ಷ ಸುಕನ್ಯಾ, ತಾಲ್ಲೂಕು ಕಾರ್ಯದರ್ಶಿ ಕಿರಣಪ್ರಭಾ, ಕಾರ್ಮಿಕ ಮುಖಂಡರಾದ ಬಿ.ಎಂ.ಭಟ್, ಶಿವಕುಮಾರ್, ರೈತಮುಖಂಡ ಹರಿದಾಸ್ ಮೊದಲಾದವರು ಸಮಾರಂಭದಲ್ಲಿ ಭಾಗವಹಿಸಿದ್ದರು. ನೂರಕ್ಕೂ ಮಿಕ್ಕಿ ಸಾರ್ವಜನಿಕರು ಸಭೆಯಲ್ಲಿ ಪಾಲ್ಗೊಂಡಿದ್ದರು.

○

ಬಿಜೆಪಿ ದರ್ಬಾರ್

ಪುಟ 12 ರಿಂದ

ಶಿವಮೊಗ್ಗದ ವಿಷಯಕ್ಕೆ ಬರೋಣ. ಬೇಸಿಗೆಯಲ್ಲಿ ನೀರಿನ ಅಭಾವಕ್ಕೆ ತುತ್ತಾಗುವ ಶಿವಮೊಗ್ಗದ ಸಮಸ್ಯೆ ಪರಿಹಾರಕ್ಕೆಂದು ಅಲ್ಲಿನ ಜಿಲ್ಲಾ ಪಂಚಾಯತಿಯು ಸುಮಾರು 6 ಕೋಟಿ ರೂಪಾಯಿಗಳ ಯೋಜನೆಯ ಪ್ರಸ್ತಾಪವೊಂದನ್ನು ಸರ್ಕಾರಕ್ಕೆ ಸಲ್ಲಿಸಿದೆ...ಕ್ಷಮಿಸಿ ಸಲ್ಲಿಸಿ ಕಾಯುತ್ತಾ ಕುಳಿತಿದೆ. ಸರ್ಕಾರದಿಂದ ಇನ್ನು..ಹ್ಞಾಂ, ಹುಂ..ಇಲ್ಲ.

ಜನರಿಗೆ ಕುಡಿಯಲು ನೀರಿಲ್ಲ ಅಂದರೆ ಪಾಪ ಬಿಜೆಪಿ ಸರ್ಕಾರ ಏನು ಮಾಡಲು ಸಾಧ್ಯ. ಅದೇನು ಮಳೆಗಾಲವನ್ನು ಬೇಗ ತರಿಸಲು ಸಾಧ್ಯವೇ ? ನೀವೂ ಒಂಥರಾ ಚೆನ್ನಾಗೇ ಹೇಳ್ತೀರಿ. ಇರಿ ಸ್ವಲ್ಪ. ರಾಜ್ಯ ಬಿಜೆಪಿ ಎಂಬ ಹರಕು ಚೀಲಕ್ಕೆ ಗೋಣಿದಾರ, ದಬ್ಬಳ ಹಿಡಿದು ಹೊಲಿಗೆ ಹಾಕುತ್ತಿರುವ ಆರೆಸ್ಸೆಸ್‌ನ ತೇಪೆ ಕೆಲಸ ಮುಗೀಲಿ. ಆಮೇಲೆ ಮೂರು ಕ್ಷೇತ್ರಗಳಿಗೆ ಉಪ ಚುನಾವಣೆ ಬೇರೆ ಇದೆಯಲ್ಲ ಅದು ಮುಗೀಲಿ. ಆಮೇಲೆ ಬಿಜೆಪಿ ಸರ್ಕಾರ ಈ ಬಗ್ಗೆ ಖಂಡಿತ ಏನಾದರೂ ಮಾಡುತ್ತೆ. ಯಾಕೆಂದರೆ ಈ ಹಾಳು ಮೊಕದ್ದಮೆಗಳ ಕಾಟದಿಂದಾಗಿ ಈ ವಿಧಾನ ಸಭಾ ಚುನಾವಣೆ ಯಾವಾಗ ಬರುತ್ತೋ ಏನೋ ಹೇಳಕ್ಕಾಗಲ್ಲ ಅಲ್ಲವೇ?

○

ಪಿಂಚಣಿ ಹಣ....

ಪುಟ 9 ರಿಂದ

ಅಂಗನವಾಡಿ ಮಠ ಸ್ಥಾಪಿಸಿ!

ಸರ್ಕಾರ ನಿಮ್ಮ ಬೇಡಿಕೆಗಳನ್ನು ಈಡೇರಿಸಬೇಕೇ? ಹಾಗಿದ್ದರೆ ಅಂಗನವಾಡಿ ಮಠ ಸ್ಥಾಪಿಸಿ, ಮಹಿಳಾ ಜಗದ್ಗುರುಗಳನ್ನು ಪೀಠಾಧಿಪತಿಗಳನ್ನಾಗಿ ನೇಮಿಸಿ. ಆಗ ಸರ್ಕಾರವೇ ನಿಮ್ಮ ಬಳಿ ಬರುತ್ತದೆ. ಕೋಟ್ಯಾಂತರ ರೂ.ಅನುದಾನ ನೀಡುತ್ತದೆ ಎಂದೂ ಬರಗೂರು ಕಟಕಿ ಮಾಡಿದರು

ಅಂಗನವಾಡಿ ಕಾರ್ಯಕರ್ತೆಯರು ಶಿಶುಗಳನ್ನು ಪೋಷಿಸಿ ತಾಯ್ತನ ಮೆರೆಯುತ್ತಿದ್ದಾರೆ. ಆದರೆ ಸರ್ಕಾರ ಇವರ ಹಕ್ಕುಗಳನ್ನು ಹತ್ತಿಕ್ಕಿ, ಹೋರಾಟಕ್ಕೆ ತಣ್ಣೀರು ಎರಚುತ್ತಿದೆ. ಆಡಳಿತ ನಡೆಸುವ ಸರ್ಕಾರಕ್ಕೂ ತಾಯ್ತನ ಇರಬೇಕು. ಕಾನೂನಿಗೆ ಕನಿಕರ ಬರಬೇಕೆಂದು ಬರಗೂರು ನುಡಿದರು.

ಮುಖ್ಯ ಅತಿಥಿಗಳಾಗಿ ಮಾತನಾಡಿದ ಜಿ.ವಿ.ಶ್ರೀರಾಮರೆಡ್ಡಿಯವರು ರಾಜ್ಯ ಸರ್ಕಾರದ ಪ್ರಜಾಪ್ರಭುತ್ವ ವಿರೋಧಿ ನೀತಿಯನ್ನು ಖಂಡಿಸಿದರು. ವಿರೋಧ ಪಕ್ಷದ ನಾಯಕರಾದ ಮಾನ್ಯ ರೇವಣ್ಣ "ಅಂಗನವಾಡಿ ನೌಕರರಿಗೆ ಒಪ್ಪಿಗೆಯಿಲ್ಲದ ನೂತನ ಪಿಂಚಣಿ ನೀತಿಯನ್ನು ಸರ್ಕಾರ ಜಾರಿ ಮಾಡಬಾರದು, ರಾಜ್ಯದ ಬಂಡವಾಳಗಾರರಿಗೆ ಅಂಗನವಾಡಿ ನೌಕರರ ಪಿಂಚಣಿ ಹಣವನ್ನು ಬಳಸುವುದು ಸರಿಯಲ್ಲ" ಎಂದರು. ಸರ್ಕಾರದ ಸ್ವಜನಪಕ್ಷಪಾತ, ಭ್ರಷ್ಟಾಚಾರ ಮೇರೆ ಮೀರಿದೆ. ಇದನ್ನು ಕೇಳಲು ವಿಧಾನಸೌಧಕ್ಕೆ ಹೋದರೆ ವಿಧಾನಸಭೆಯಲ್ಲಿ ಮಾತನಾಡೋಣ ಎನ್ನುತ್ತಾರೆ. ಅಲ್ಲಿಗೆ ಹೋದರೆ ವಿಧಾನ ಸಭೆಯನ್ನು ಬೇಗನೇ ಮುಗಿಸುತ್ತಾರೆ. ಅಂಗನವಾಡಿ ಕೇಂದ್ರಗಳಿಗೆ ಸರಬರಾಜು ಆಗುವ ಪೌಷ್ಠಿಕ ಆಹಾರದ ಬಗ್ಗೆ ಚರ್ಚಿಸಲು ನಿಯಮಾವಳಿ 60 ಅಡಿಯಲ್ಲಿ ಪ್ರಶ್ನೆ ಮಾಡಿದರೆ ಅದಕ್ಕೆ ವಿಧಾನಸಭೆಯಲ್ಲಿ ಉತ್ತರಿಸಲು ಇವರು ತಯಾರಿಲ್ಲ ಎಂದು ರಾಜ್ಯ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

ಸಮಾವೇಶದಲ್ಲಿ ಹೊಸ ಪಿಂಚಣಿಯ ಅಪಾಯಗಳ ಕುರಿತು ಬಿಎಂಎಸ್‌ನ ಸೂರ್ಯನಾರಾಯಣರಾವ್, ಸಿಐಟಿಯುವಿನ ಎಸ್.ಪ್ರಸನ್ನಕುಮಾರ್ ಮತ್ತು ಐಎನ್‌ಟಿಯುಸಿಯ ಹೆಚ್.ರಾಮಚಂದರ್‌ರ, ಎಐಐಇಎನ ಎಸ್.ಕೆ.ಗೀತಾ ಹಾಗೂ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ಅಧ್ಯಕ್ಷರಾದ ಯು.ಡಿ.ನರಸಿಂಹಯ್ಯನವರು ಪಾಲ್ಗೊಂಡು ಈ ನೀತಿಯನ್ನು ಖಂಡಿಸಿ ಅಂಗನವಾಡಿ ನೌಕರರ ಹೋರಾಟಕ್ಕೆ ಬೆಂಬಲಿಸಿದರು. ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್.ವರಲಕ್ಷ್ಮಿ ಸಮಾವೇಶದ ಪ್ರಸ್ತಾವನೆ ಮಾಡಿದರು. ಟಿ.ಲೀಲಾವತಿ ಸ್ವಾಗತಿಸಿ, ಯಮುನಾಗಾಂವ್ಕರ್ ನಿರೂಪಿಸಿದರು. ಸಮಾವೇಶದ ಅಧ್ಯಕ್ಷತೆಯನ್ನು ಶಾಂತಾ ಎನ್.ಘಂಟೆ ವಹಿಸಿದ್ದರು.

ಅಂದು ಮಧ್ಯಾಹ್ನ ನಡೆದ ಸಂಘಟನಾ ಸಮಾವೇಶವನ್ನು ವಿ.ಜೆ.ಕೆ.ನಾಯರ್ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಸಿಐಟಿಯು ರಾಜ್ಯ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ಕೆ.ಮಹಾಂತೇಶ್ ಹಾಗೂ ಕೆಪಿಆರ್‌ಎಸ್‌ನ ಮಾರುತಿ ಮಾನ್ಪಡೆ ಪಾಲ್ಗೊಂಡು ಮಾತನಾಡಿದರು. ಸಮಾವೇಶದಲ್ಲಿ 22 ಜಿಲ್ಲೆಗಳಿಂದ 1400 ಪ್ರತಿನಿಧಿಗಳು ಪಾಲ್ಗೊಂಡಿದ್ದರು.

○

ವಿಕಿಲೀಕ್ಸ್ : ಮಾಹಿತಿ....

ಪುಟ 9 ರಿಂದ

ತಿಳುವಳಿಕೆಯಿಂದ ಭ್ರಷ್ಟ ರಾಜಕಾರಣಿಗಳ ಬಗ್ಗೆ ಸರಿಯಾದ ಮಾಹಿತಿ ಹೊಂದಿರುವ ಅಮೆರಿಕಾ ತನ್ನ ಉದ್ದೇಶಗಳಿಗೆ ಹೇಗೆ ಹಣ ಕೊಟ್ಟು ಅಂಥವರನ್ನು ಕೊಳ್ಳಬಹುದೆಂಬುದನ್ನೂ ತಿಳಿದಿದೆ.

ಅಣು ಒಪ್ಪಂದ ಮತ್ತು ಅದರಿಂದುಂಟಾದ ರಾಜಕೀಯ ತಿಕ್ಕಾಟದ ಬಗೆಗಿನ ಕೇಬಲ್‌ಗಳು, ಅಣು ಒಪ್ಪಂದ ಜಾರಿಗಾಗಿ ಅಮೆರಿಕಾ ಎಷ್ಟೊಂದು ಆಸಕ್ತವಾಗಿತ್ತು ಎಂಬುದನ್ನು ತೋರಿಸಿದೆ. ಸ್ವಾತಂತ್ರ್ಯ ನಂತರದ ಭಾರತದ ಅತ್ಯಂತ ದೊಡ್ಡ ಸಾಧನೆಯೆಂದು ಅಣು ಒಪ್ಪಂದವನ್ನು ಬಿಂಬಿಸುತ್ತಿದ್ದ ಮನಮೋಹನ್ ಸಿಂಗ್ ಮತ್ತು ಅವರ ಸುತ್ತ ಇದ್ದ ಅಧಿಕಾರಿಗಳ ಒಳಕೂಟ ವಾಸ್ತವದಲ್ಲಿ ದೇಶದ ಹಿತಾಸಕ್ತಿಗಿಂತ ಅಮೆರಿಕಾದ ಹಿತಾಸಕ್ತಿಯನ್ನು ಕಾಪಾಡುತ್ತಿತ್ತು. ಆ ಕೇಬಲ್‌ಗಳು ಹೇಳುವಂತೆ, ಅಮೆರಿಕಾವು ಕೇವಲ ಅಣು ರಿಯಾಕ್ಟರ್‌ಗಳ ಮಾರಾಟದಿಂದ ಸಿಗುವ ಬಿಲಿಯಗಾಂತರ ಡಾಲರುಗಳ ವಾಣಿಜ್ಯ ಲಾಭಕ್ಕಿಂತಲೂ ಹೆಚ್ಚಾಗಿ ಭಾರತವನ್ನು ತನ್ನ ದೃಢವಾದ ಯುದ್ಧ ಮಿತ್ರರಾಷ್ಟ್ರವನ್ನಾಗಿ ಪಡೆಯುವುದೇ ಅದರ ಹುನ್ನಾರ ಆಗಿತ್ತು.

ಪ್ರಧಾನ ಮಂತ್ರಿಗಳು ಮತ್ತು ಕಾಂಗ್ರೆಸ್ ನಾಯಕತ್ವ ಈ ಠಕ್ಕುತನ ಬಯಲಾಗಿರುವುದನ್ನು ನಿರ್ಲಜ್ಜತನದಿಂದ ನಿರಾಕರಿಸಲು ಪ್ರಯತ್ನ ಮಾಡುತ್ತಿದ್ದಾರೆ. ಈ ಕೇಬಲ್‌ಗಳನ್ನು ಪರಿಶೀಲಿಸಲಾಗದ್ದು ಹಾಗೂ ವಿಶ್ವಾಸಾರ್ಹವಲ್ಲದ್ದು ಎಂದು ಅವರು ಹೇಳುತ್ತಿದ್ದಾರೆ. ಇದೆಂತಹ ಕರುಣಾಜನಕ ನೆಪವೆಂದರೆ ಸ್ವತಃ ಅಮೆರಿಕಾದ ರಾಜ್ಯ ಕಾರ್ಯದರ್ಶಿ ಹಿಲರಿ ಕ್ಲಿಂಟನ್‌ರವರೇ ಭಾರತದ ವಿದೇಶಾಂಗ ಸಚಿವರಿಗೆ ದೂರವಾಣಿ ಕರೆ ಮಾಡಿ ಈ ಮಾಹಿತಿಗಳ ಸೋರಿಕೆಯಾಗುವ ಮುನ್ಸೂಚನೆ ನೀಡಿ ಎಚ್ಚರ ವಹಿಸುವಂತೆ ಹೇಳುವುದರ ಜತೆಯಲ್ಲೇ ಅದರಿಂದುಂಟಾಗುವ ಮುಜುಗುರದ ಬಗ್ಗೆ ಕೂಡ ಎಚ್ಚರಿಸಿದ್ದರು.

ಮನಮೋಹನ್ ಸಿಂಗ್ ಮತ್ತು ಕಾಂಗ್ರೆಸ್ ನಾಯಕತ್ವವು ದೇಶವನ್ನು ಎಂತಹ ದುರವಸ್ಥೆಗೆ ತಂದು ನಿಲ್ಲಿಸಿದ್ದಾರೆ ಎನ್ನುವುದಕ್ಕೆ ಈ ವಿಕಿಲೀಕ್ಸ್ ಕೇಬಲ್‌ಗಳು ಅತ್ಯಂತ ವ್ಯಸನದ ಹಾಗೂ ಬೆಳಕು ಚೆಲ್ಲುವ ವ್ಯಾಖ್ಯಾನ.

○

ಐದು ಲಕ್ಷ ಬ್ರಿಟಿಶ್ ....

ಪುಟ 14 ರಿಂದ

ಬಂದಿದೆ. ಪಾರ್ಲಿಮೆಂಟಿನ ಒಳಗೂ ಕಮ್ಯುನಿಸ್ಟ್ ಮತ್ತು ಹಸಿರು ಪಕ್ಷಗಳು ಜನರ ಒತ್ತಡಕ್ಕೆ ದನಿ ಕೊಡುತ್ತಾ ಬಂದಿವೆ. ದೈತ್ಯ ಕಂಪನಿಗಳು ಬ್ಯಾಂಕು ಮತ್ತು ಹಣಕಾಸು ಸಂಸ್ಥೆಗಳು ಮತ್ತು ಸರ್ಕಾರದ ಜೂಜುಕೋರತನ ಮತ್ತು ಆರ್ಥಿಕ ಅಶಿಸ್ತಿನಿಂದ ಬಂದ ಬಿಕ್ಕಟ್ಟಿನ ಹೊರೆಯನ್ನು ದುಡಿಯುವ ಜನರ ತಲೆಯ ಮೇಲೆ ಕಟ್ಟುವುದು ಸಲ್ಲ, ಅದನ್ನು ಆಗಗೊಡುವುದಿಲ್ಲ ಎಂದು ಕಮ್ಯುನಿಸ್ಟ್ ನಾಯಕತ್ವದ ಜನತಾ ಚಳುವಳಿ ಪಟ್ಟು ಹಿಡಿದಿದೆ.

ಬದಲಿ ಸರ್ಕಾರದ ರಚನೆಯ ಸಾಧ್ಯತೆ ಕಡಿಮೆ ಇದ್ದು, ಪುನಃ ಚುನಾವಣೆ ನಡೆಯುವುದು ಹೆಚ್ಚು ಕಡಿಮೆ ಖಚಿತವಾಗಿದೆ.

ಲಿಬ್ಯಾ ಮೇಲಿನ ದಾಳಿಗೆ ಕಮ್ಯುನಿಸ್ಟ್ ಪಕ್ಷಗಳ ಖಂಡನೆ

"ಸಾಮ್ರಾಜ್ಯಶಾಹಿ ಕೊಲೆಗಡುಕರು..ಈ ಬಾರಿ ಲಿಬ್ಯಾದಲ್ಲಿ ಯುದ್ಧ ಆರಂಭಿಸಿದ್ದಾರೆ. ಅವರ ಮಾನವೀಯ ನೆರವಿನ ನೆಪಗಳು ಜನರನ್ನು ಹಾದಿ ತಪ್ಪಿಸಲಷ್ಟೇ! ಅವರು ಜನರ ಕಣ್ಣಿಗೆ ಮಣ್ಣು ಎರಚುತ್ತಿದ್ದಾರೆ ! ಅವರ ನಿಜವಾದ ಉದ್ದೇಶ ಲಿಬ್ಯಾದ ತೈಲ ಸಂಪತ್ತು. ಜಗತ್ತಿನ ಕಮ್ಯುನಿಸ್ಟ್ ಮತ್ತು ಕಾರ್ಮಿಕರ ಪಕ್ಷಗಳನ್ನು ಪ್ರತಿನಿಧಿಸುವ ನಾವು ಈ ಸಾಮ್ರಾಜ್ಯಶಾಹಿ ಮಿಲಿಟರಿ ಮಧ್ಯಪ್ರವೇಶವನ್ನು ಖಂಡಿಸುತ್ತೇವೆ. ವಿದೇಶೀ ಸಾಮ್ರಾಜ್ಯಶಾಹಿ ಮಿಲಿಟರಿ ಮಧ್ಯಪ್ರವೇಶ ಇಲ್ಲದೆ ಲಿಬ್ಯಾದ ಜನತೆ ತಮ್ಮ ಭವಿಷ್ಯವನ್ನು ತಾವೇ ರೂಪಿಸಿಕೊಳ್ಳಲು ಅವಕಾಶ ಕೊಡಬೇಕು..." ಎಂಬ ಮಾತುಗಳಲ್ಲಿ ಜಗತ್ತಿನ 60ಕ್ಕೂ ಹೆಚ್ಚು ಕಮ್ಯುನಿಸ್ಟ್ ಮತ್ತು ಕಾರ್ಮಿಕರ ಪಕ್ಷಗಳು, ಲಿಬ್ಯಾದ ಮೇಲೆ ನಾಟೋ ಬಾಂಬ್ ದಾಳಿ ತಕ್ಷಣ ನಿಲ್ಲಿಸಬೇಕು ಎಂದು ಒಂದು ಜಂಟಿ ಹೇಳಿಕೆಯಲ್ಲಿ ಒತ್ತಾಯಿಸಿದೆ. ಭಾರತದ ಸಿಪಿಐ, ಸಿಪಿಐ(ಎಂ), ರಶ್ಯಾ ಮತ್ತು ಹಲವು ನಾಟೋ ಮತ್ತು ಅರಬ್ ದೇಶಗಳ ಪಕ್ಷಗಳು ಈ 60 ಪಕ್ಷಗಳಲ್ಲಿ ಸೇರಿವೆ.

○

JANASHAKTHI KANNADA VARA PATRIKE APRIL 10, 2011 Price : Rs. 5/- RNI No. KARKAN /2006/17926 Posted on every Saturday Postal Reg. No: RNP/KA/BGS/2078/2010-12
Posted at MBC Bangalore GPO

ಅಮರರಾದ ಹುತಾತ್ಮ ಭಗತ್‌ಸಿಂಗ್ ಮತ್ತು ಸಂಗಾತಿಗಳು

ಮಾರ್ಚ್ 23, ಭಗತ್‌ಸಿಂಗ್, ಸುಖ್‌ದೇವ್, ರಾಜಗುರು ಅಮರರಾದ ದಿನ. ಬ್ರಿಟೀಷ್ ಸಾಮ್ರಾಜ್ಯಶಾಹಿ ವಿರುದ್ಧ ಮಾತ್ರವಲ್ಲದೇ, ಶೋಷಕ ಅಸಮಾನ ವ್ಯವಸ್ಥೆಯ ಬದಲಾವಣೆಯ ಕಣ್ಣೋಟವನ್ನು ಹರಡಲು ತಮ್ಮ ಬದುಕನ್ನೇ ಬಲಿದಾನಗೈದ ಈ ಸಂಗಾತಿಗಳು ಹುತಾತ್ಮರಾದ ಸನ್ನಿವೇಶದಲ್ಲೂ ತೋರಿದ ಧೀಮಂತಿಕೆ ಮನಸ್ಸು ಕಲಕುವಂತದ್ದು. ಕುಲದೀಪ್‌ನಯ್ಯರ್‌ರವರ 'ಹುತಾತ್ಮ ಭಗತ್‌ಸಿಂಗ್' ಪುಸ್ತಕ ಆಯ್ದ ಭಾಗವಿದು.



(ಕಳೆದ ವಾರದಿಂದ)

ಕೈಗಳನ್ನು ಕಟ್ಟಿಸಿಕೊಂಡು ಗಲ್ಲಿನ ವೇದಿಕೆಗೆ ಹೊರಟ ಸೆಂಟ್ರಿಗಳ ಹಿಂದೆ ಹೆಜ್ಜೆ ಹಾಕಿದರು. ಪರಿಚಿತವಾದ ಕ್ರಾಂತಿಗೀತೆಯನ್ನು ಹಾಡಿದರು -

ಕಭೀ ವೊ ದಿನ್ ಭಿ ಆಯೆಗಾ
ಕೆ ಜಬ್ ಅಜಾದ್ ಹಮ್ ಹೋಂಗೆ
ಯೇ ಅಪ್ನಿ ಹೈ ಜಮೀನ್ ಹೋಗಿ
ಯೇ ಅಪ್ನಾ ಆಸ್ಮಾನ್ ಹೋಗಾ
ಶೌಹೀದೋಂಕಿ ಚಿತಾವೋಂಪರ್
ಲಗೇಂಗೆ ಹರ್ ಬರಸ್ ಮೇ ಲೆ
ವತನ್ ಪರ್ ಮರ್ನೆವಾಲೋಂಕಾ
ಯಹ್ಞೀ ನಾಮೋ ನಿಶಾಂತ್ ಹೋಗಾ

ಒಬ್ಬರ ನಂತರ ಒಬ್ಬರಂತೆ ಅವರೆಲ್ಲರ ತೂಕವನ್ನು ನೋಡಲಾಯಿತು. ಎಲ್ಲರ ತೂಕವೂ ಹೆಚ್ಚಾಗಿತ್ತು. ಎಲ್ಲರೂ ಸ್ನಾನ ಮಾಡಿದರು. ಕಪ್ಪು ಬಟ್ಟೆಯನ್ನು ಧರಿಸಿದರು. ಆದರೆ ಮುಖವನ್ನು ಮುಚ್ಚಿಕೊಳ್ಳಲಿಲ್ಲ.

ವಾಹೆ ಗುರುವಿಗೆ ಪ್ರಾರ್ಥನೆ ಸಲ್ಲಿಸುವಂತೆ ಭಗತ್‌ಸಿಂಗ್ ಕಿವಿಯಲ್ಲಿ ಚರತ್‌ಸಿಂಗ್ ಪಿಸುಗುಟ್ಟಿದ. ಭಗತ್‌ಸಿಂಗ್ ನಕ್ಕು ಹೇಳಿದ : 'ನನ್ನ ಜೀವಮಾನದಲ್ಲಿ ನಾನೆಂದೂ ಪ್ರಾರ್ಥನೆ ಸಲ್ಲಿಸಿಲ್ಲ. ವಾಸ್ತವವಾಗಿ ಬಡವರ ಯಾತನೆಗಳನ್ನು ಕಂಡು ದೇವರನ್ನು ಬೈದಿದ್ದೇನೆ. ಈಗ ನಾನವನ ಕ್ಷಮೆ ಕೇಳಿದರೆ, 'ಇವನೊಬ್ಬ ಹೇಡಿ, ಕೊನೆಯ ಕ್ಷಣ ಸಮೀಪಿಸಿದಾಗ ಕ್ಷಮೆ ಕೇಳುತ್ತಿದ್ದಾನೆ' ಎಂದು ಅವನು ಹೇಳುತ್ತಾನೆ.

ಸೆಲ್ಲುಗಳಲ್ಲಿದ್ದ ಕೈದಿಗಳೂ ಕೇಳಬಹುದಾದಷ್ಟು ಗಟ್ಟಿಯಾಗಿ ಭಗತ್‌ಸಿಂಗ್ ಭಾಷಣ ಮಾಡಿದ : 'ನಿಜವಾಗಿ ಕ್ರಾಂತಿಕಾರಿ ಸೇನೆಗಳು ಹಳ್ಳಿಗಳಲ್ಲಿ ಮತ್ತು ಕಾರ್ಖಾನೆಗಳಲ್ಲಿವೆ; ಶ್ರಮಿಕರು ಮತ್ತು ಕೃಷಿಕರು ನಿಜವಾದ ಸೈನಿಕರು. ಆದರೆ ನಮ್ಮ ಬೂರ್ಜ್ವಾ ನಾಯಕರು ಅವರನ್ನು ಎದುರಿಸುವುದಿಲ್ಲ; ಎದುರಿಸುವ ಧೈರ್ಯ ಮಾಡಲಾರರು. ನಿದ್ರಿಸುತ್ತಿರುವ ಸಿಂಹ, ತನ್ನ ನಿದ್ರೆಯಿಂದ ಎಚ್ಚೆತ್ತಿತೆಂದರೆ, ನಮ್ಮ ನಾಯಕರು ಗುರಿಯನ್ನು ತಲುಪಿದ ನಂತರವೂ ಅದನ್ನು ತಡೆಯಲು ಸಾಧ್ಯವಾಗುವುದಿಲ್ಲ.

'ಈ ಪ್ರಕರಣವನ್ನು ಅತ್ಯಂತ ಸರಳವಾದ ರೀತಿಯಲ್ಲಿ ಹೇಳಲು ಅವಕಾಶ ಕೊಡಿ. 'ಕ್ರಾಂತಿ ಚಿರಾಯುವಾಗಲಿ' ಎಂದು ಕೂಗಿ, ಈ ಘೋಷಣೆಯ ಅರ್ಥವನ್ನು ನೀವು ತಿಳಿದುಕೊಂಡಿದ್ದೀರೆಂದು ಭಾವಿಸುತ್ತೇನೆ. ಇದರ ಪರಿಭಾಷೆಯನ್ನು ನಾವು ಈಗಾಗಲೇ ಅಸೆಂಬ್ಲಿ ಬಾಂಬ್ ಪ್ರಕರಣದಲ್ಲಿ ನೀಡಿದ ಹೇಳಿಕೆಯಲ್ಲಿ ತಿಳಿಸಿದ್ದೇವೆ. ಕ್ರಾಂತಿಯೆಂದರೆ ಇರುವ ಸಾಮಾಜಿಕ ವ್ಯವಸ್ಥೆಯನ್ನು ಸಂಪೂರ್ಣವಾಗಿ ಕಿತ್ತೆಸೆಯುವುದು; ಅದರ ಜಾಗದಲ್ಲಿ ಸಮಾಜವಾದಿ ವ್ಯವಸ್ಥೆಯನ್ನು ತರುವುದು.... ಈ ಉದ್ದೇಶಕ್ಕಾಗಿ, ಸರ್ಕಾರ ಆಡಳಿತ ಯಂತ್ರವನ್ನು ನಿಯಂತ್ರಿಸಲು ನಾವು ಹೋರಾಡುತ್ತಿದ್ದೇವೆ. ಇದರ ಜೊತೆಗೇ, ಸಮುದಾಯಕ್ಕೆ ಈ ಸೂಕ್ತ ವಾತಾವರಣವನ್ನು ಸೃಷ್ಟಿಸುವುದಕ್ಕಾಗಿ ಈ ಶಿಕ್ಷಣ ಅಗತ್ಯ. ಹೋರಾಟದಲ್ಲಿ ನಾವು ಅವರಿಗೆ ಅತ್ಯುತ್ತಮ ಶಿಕ್ಷಣ ಮತ್ತು ತರಬೇತಿಯನ್ನು



ಕೊಡಬಹುದು.ಮೊದಲು ನಿಮ್ಮ ವೈಯಕ್ತಿಕತೆಯನ್ನು ನುಚ್ಚುನೂರು ಮಾಡಿ, ವೈಯಕ್ತಿಕ ಸುಖದ ಕನಸನ್ನು ಭಗ್ನಗೊಳಿಸಿ, ನಂತರ ಕೆಲಸ ಮಾಡಲು ತೊಡಗಿ, ನೀವು ಒಂದೊಂದೇ ಅಂಗುಲ ಮುಂದಕ್ಕೆ ಸಾಗಬೇಕು. ಅದಕ್ಕೆ ಧೈರ್ಯ ಬೇಕು; ದೃಢ ನಿರ್ಧಾರ ಬೇಕು; ನಿರಂತರ ಪರಿಶ್ರಮ ಬೇಕು. ಯಾವ ಕಷ್ಟ ಕಾರ್ಪಣ್ಯಗಳೂ ನಿರಾಶೆಗೊಳಿಸುವುದಿಲ್ಲ. ಯಾವ ವೈಫಲ್ಯಗಳೂ, ನಿಮ್ಮನ್ನು ಕಂಗೆಡಿಸುವುದಿಲ್ಲ. ತ್ಯಾಗ ಮತ್ತು ನರಳಾಟಗಳ ಅಗ್ನಿದಿವ್ಯವನ್ನು ಹಾದು ನೀವು ವಿಜಯಶಾಲಿಗಳಗುತ್ತೀರಿ. ಈ ವೈಯಕ್ತಿಕ ಗೆಲುವುಗಳು ಕ್ರಾಂತಿಯ ಬಹುದೊಡ್ಡ ಆಸ್ತಿ...'

ಗಲ್ಲಿನ ಅಟ್ಟ ಹಳೆಯದಾಗಿತ್ತು; ಆದರೆ ಗಲ್ಲಿಗೇರಿಸುವವರಲ್ಲ. ಮೂವರೂ ಬೇರೆ ಬೇರೆಯ ಹಲಗೆಗಳ ಮೇಲೆ ನಿಂತರು. ಆದರ ಅಡಿಯಲ್ಲಿ ಆಳ ಕಂದಕವಿತ್ತು. ಭಗತ್‌ಸಿಂಗ್ ಮಧ್ಯದಲ್ಲಿದ್ದ. ಪ್ರತಿಯೊಬ್ಬರ ಕತ್ತಿನ ಸುತ್ತಲೂ ಹಗ್ಗವನ್ನು ಬಿಗಿಯಲಾಯಿತು. ಅವರು ಹಗ್ಗಕ್ಕೆ ಮುತ್ತಿಟ್ಟರು. ಅವರ ಕೈಗಳನ್ನು ಮತ್ತು ಕಾಲುಗಳನ್ನು ಕಟ್ಟಲಾಯಿತು. ನೇಣು ಹಾಕುವವರು ಹಗ್ಗವನ್ನು ಎಳೆದರು : ಕಾಲಿನ ಅಡಿಯಲ್ಲಿದ್ದ ಹಲಗೆಗಳನ್ನು ತೆಗೆಯಲಾಯಿತು. ಅದು ಒರಟಾದ ವಿಧಾನ. ನೇತಾಡುತ್ತಿದ್ದ ಅದರ ದೇಹಗಳನ್ನು ಬಹಳ ಹೊತ್ತಿನವರೆಗೆ ಹಾಗೆಯೇ ಬಿಡಲಾಯಿತು.

ನಂತರ ಅವುಗಳನ್ನು ಕೆಳಗಿಳಿಸಲಾಯಿತು. ವೈದ್ಯರು ಪರೀಕ್ಷಿಸಿದರು. ಮೂವರೂ ಸತ್ತಿರುವುದನ್ನು ಅವರು ಖಚಿತಪಡಿಸಿದರು. ಒಬ್ಬ ಜೈಲು ಅಧಿಕಾರಿ ಈ ಮೂವರ ಧೈರ್ಯವನ್ನು ಕಂಡು ಭಾವುಕನಾದ. ಸತ್ತವರನ್ನು ಗುರುತಿಸುವಂತೆ ತನಗೆ ನೀಡಿದ ಆಜ್ಞೆಯನ್ನು ಈ ಅಧಿಕಾರಿ ಪಾಲಿಸದೆ ಧಿಕ್ಕರಿಸಿದ. ಆಗಲೇ ಅಲ್ಲಿಯೇ ಅವನನ್ನು ಸಸ್ಪೆಂಡ್ ಮಾಡಲಾಯಿತು. ಕಿರಿಯ ಅಧಿಕಾರಿಯೊಬ್ಬನಿಂದ ಈ ಕಾರ್ಯವನ್ನು ಮಾಡಿಸಲಾಯಿತು. ಜೈಲಿನ ಸೂಪರಿಂಟೆಂಡೆಂಟ್ ಸೇರಿದಂತೆ ಇಬ್ಬರು ಬ್ರಿಟೀಷ್ ಅಧಿಕಾರಿಗಳು ಗಲ್ಲು ಶಿಕ್ಷೆಯ ಉಸ್ತುವಾರಿಯನ್ನು ನೋಡಿಕೊಂಡರು : ಸಾವನ್ನು ಧೃಢೀಕರಿಸಿದರು.

ಸಂಜೆಯ ನಸುಬೆಳಕಲ್ಲಿ, ಸೆಲ್‌ಗಳಲ್ಲಿದ್ದ ಕೈದಿಗಳು ತಮ್ಮ ಸೆಲ್‌ಗಳ ಎದುರಿಗಿದ್ದ ದಾರಿಯಿಂದ ಕೇಳಿಬರಬಹುದಾದ ಹೆಜ್ಜೆ ಸಪ್ಪಳಕ್ಕಾಗಿ ಕಾದಿದ್ದರು. ಎರಡು ಗಂಟೆಗಳ ಕಾಲ ಯಾರೊಬ್ಬರೂ ಈ ದಾರಿಯಲ್ಲಿ ನಡೆದುಬರಲಿಲ್ಲ. ಬೀಗ ಹಾಕಿರುವುದನ್ನು ಮತ್ತೊಮ್ಮೆ ಪರೀಕ್ಷಿಸುವುದಕ್ಕಾಗಿ ಬರುತ್ತಿದ್ದ ವಾರ್ಡನ್ ಕೂಡಾ ಇವತ್ತು ಇತ್ತ ತಲೆಹಾಕಲಿಲ್ಲ.

ಜೈಲಿನ ಗಂಟೆ ಆರು ಬಾರಿಸಿದಾಗ ಅವರು ದೂರದಲ್ಲಿ ಮೆಲುದನಿಯನ್ನು ಕೇಳಿದರು; ಭಾರವಾದ ಬೂಟುಗಳ ಸದ್ದು, ಪರಿಚಿತ ಹಾಡುಗಳ ಪಲ್ಲವಿಗಳೂ ಅವರಿಗೆ ಕೇಳಿಸಿದವು: ಸರ್ಫ್‌ರೋಷಿ ಕಿ ತಮನ್ನಾ ಆಲ್ ಹಮಾರೆ ದಿಲ್ ಮೆ ಹೈ. ಅವರು ಬೇರೊಂದು ಹಾಡನ್ನು ಆರಂಭಿಸಿದರು

ಮಾಯ್, ರಂಗ್ ದೇ ಮೇರಾ ಬಸಂತಿ ಚೊಲೊ (ತಾಯೆ, ಹುತಾತ್ಮನ ಬಟ್ಟೆಗಳನ್ನು ಸಿದ್ಧಪಡಿಸು). ಆದರೆ ಈ ಶಬ್ದಗಳೂ ಸಂಜೆಯ ನಿಶ್ಯಬ್ದದಲ್ಲಿ ಕರಗಿಹೋದವು. ನಂತರ ಅಲ್ಲಿಂದ 'ಇನ್‌ಕ್ವಿಲಾಬ್ ಜಿಂದಾಬಾದ್' 'ಹಿಂದೂಸ್ಥಾನ್ ಅಜಾದ್ ಹೋ' ಘೋಷಣೆಗಳು ಕೇಳಿದವು. ಕೈದಿಗಳು ಘೋಷಣೆಗಳನ್ನು ಕೂಗಿದರು. ಅವರ ಪ್ರತಿಕ್ರಿಯೆ ಎಷ್ಟು ಜೋರಾಗಿತ್ತೆಂದರೆ ಅವರು ಭಗತ್‌ಸಿಂಗ್ ಭಾಷಣದ ಒಂದು ಭಾಗವನ್ನು ಕಳೆದುಕೊಂಡರು.

ಈಗ ಎಲ್ಲರೂ ಶಾಂತ. ಗಲ್ಲಿಗೇರಿಸಿದ ಬಹು ಹೊತ್ತಿನ ನಂತರ ಚರತ್‌ಸಿಂಗ್ ಬಂದ. ಬಂದವನೇ ಜೋರಾಗಿ ಅಳತೊಡಗಿದ. ತನ್ನ 30 ವರ್ಷಗಳ ಸೇವೆಯಲ್ಲಿ ಆತ ಅನೇಕ ಮರಣದಂಡನೆಗಳನ್ನು ನೋಡಿದ್ದ. ಆದರೆ ಯಾರೊಬ್ಬರೂ ಈ ಮೂವರೂ ಯುವಕರಂತೆ ಗಲ್ಲುಗಂಬವನ್ನು ಇಷ್ಟು ಧೈರ್ಯವಾಗಿ, ನಗುನಗುತ್ತ ಏರಿರಲಿಲ್ಲ ಎಂದು ಚರತ್‌ಸಿಂಗ್ ಹೇಳಿದ. ರಾಷ್ಟ್ರದ ಈ ಮೂರು ಹೂಗಳನ್ನು ಕಿತ್ತು ಹೊಸಕಿಹಾಕಲಾಯಿತು. ಈ ಮೂವರ ಧೈರ್ಯದ ಸಾಹಸಗಾಥೆ ಬ್ರಿಟಿಷ್ ಆಳ್ವಿಕೆಯ ಸಮಾಧಿಗಲ್ಲಿನ ಮೇಲೆ ಬರೆದ ಬರಹವಾಗಿತ್ತು ಎಂಬುದು ಕೈದಿಗಳಿಗೆ ಎಷ್ಟರಮಟ್ಟಿಗೆ ಅರ್ಥವಾಯಿತೋ!

1947 ರ ಆಗಸ್ಟ್ 15 ರಂದು, ಸುಮಾರು 16 ವರ್ಷಗಳ ನಂತರ ಕೊನೆಯ ಇಂಗ್ಲಿಷ್ ಸೈನಿಕ ಭಾರತದ ಕಡಲ ತೀರವನ್ನು ತೊರೆದ. ಭಗತ್‌ಸಿಂಗ್ ನುಡಿದಿದ್ದ ಭವಿಷ್ಯದಂತೆ, ಸದುದ್ದೇಶ ಒಂದಲ್ಲ ಒಂದು ದಿನ ಜಯಗಳಿಸುತ್ತದೆ. ಸ್ವಾತಂತ್ರ್ಯದ ಪಂಜು ಉರಿಯಬೇಕಾದರೆ ಹಲವರು ಪ್ರಾಣತ್ಯಾಗ ಮಾಡಬೇಕಾದದ್ದು ಅನಿವಾರ್ಯ.

ಈ ಮೂವರು ಯುವಕರೆಂದರೆ ಈಗ ನೆಲದ ಮೇಲಿನ ಮೂರು ದೇಹಗಳು ಮಾತ್ರ. ವಿಲೇವಾರಿಗಾಗಿ ಕಾಯುತ್ತಿರುವ ದೇಹಗಳು. ಜೈಲಿನ ಭಾರೀ ಗೋಡೆಗಳ ಆಚೆಗೆ ನಿರಂತರ ಎಚ್ಚರವನ್ನು ಇಟ್ಟುಕೊಂಡು ಕಾಯುತ್ತಿರುವ ನೂರಾರು ಜನ. ಈ ಶವಗಳನ್ನು ಹೊರಗೆ ಸಾಗಿಸುವುದು ಹೇಗೆ ಎಂಬ ತಲೆನೋವು ಅಧಿಕಾರಿಗಳಿಗೆ.

(ಮುಂದುವರೆಯುವುದು)

ಪುಸ್ತಕ ಪರಿಚಯ
'ಹುತಾತ್ಮ ಭಗತ್‌ಸಿಂಗ್' ಪುಸ್ತಕ
ಲೇ : ಕುಲದೀಪ್‌ನಯ್ಯರ್
ಕನ್ನಡಕ್ಕೆ : ಜಿ.ಪಿ. ಬಸವರಾಜ್
ಪ್ರ : ಲೋಹಿಯಾ ಪ್ರಕಾಶನ
ಬೆಲೆ : 60 ರೂ.

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12,18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH